# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಏಪ್ರಿಲ್, ೨೦೨೦ ಸಂಪಾದಕ : ಡಿ.ಎಸ್. ನಾಗಭೂಷಣ ಸಂಪುಟ: ೯ ಸಂಚಿಕೆ: ೩

ಚಂದಾ ರೂ. ೧೫೦/- (೨೦೨೦ರ ಜನವರಿಯಿಂದ ಸೆಪ್ಟಂಬರ್‌ವರೆಗೆ) ಸಂಸ್ಥೆಗಳಿಗೆ ರೂ. ೨೫೦/- ಪುಟ: ೨೦ ಬೆಲೆ: ರೂ. ೨೫/-

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಇಂದು ಇಡೀ ಜಗತ್ತು ನಾವೆಲ್ ಕರೋನಾ ವೈರಾಣು ಭೀತಿಯಿಂದ ತತ್ತರಿಸಿದೆ. ಮೂರು ತಿಂಗಳುಗಳ ಹಿಂದೆ ಚೀನಾದ ವುಹಾನ್ ನಗರದಲ್ಲಿ ತನ್ನ ಕರಾಳ ಹಸ್ತ ಚಾಚಿದ ಈ ಕೋವಿಡ್-೧೯ ಎಂಬ ಹೆಸರು ಪಡೆದಿರುವ ಈ ಮಹಾಮಾರಿ ಅಲ್ಲಿಂದ ಇಂದು ಹೆಚ್ಚೂಕಡಿಮೆ ಜಗತ್ತಿನಾದ್ಯಂತ ಹರಡಿ ಸಾವಿರಾರು ಜನರ ಮರಣಕ್ಕೆ ಕಾರಣವಾಗಿದೆ. ಭಾರತವೇನೂ ಇದಕ್ಕೆ ಹೊರತಾಗಿಲ್ಲ. ಯೂರೋಪಿನ ದೇಶಗಳಂತೆಯೇ ಸ್ವಲ್ಪ ತಡವಾಗಿಯೇ ಇದರ ಭಯಂಕರತೆಯ ಬಗ್ಗೆ ಎಚ್ಚೆತ್ತುಕೊಂಡ ನಾವು ಮರಣಗಳ ಸಂಖ್ಯೆಯ ದೃಷ್ಟಿಯಿಂದ ಹೆಚ್ಚೇನೂ ಅನಾಹುತ ಎದುರಿಸಿರದಿದ್ದರೂ, ಇಲ್ಲಿನ ಜನಬಾಹುಳ್ಯ ಮತ್ತು ರೋಗ ಪರೀಕ್ಷಾ ಮತ್ತು ಚಿಕಿತ್ಸಾ ಸೌಲಭ್ಯಗಳ ಮಿತಿಯಿಂದಾಗಿ ಅದಿನ್ನೂ ಇಲ್ಲಿ ತನ್ನ ಭಯಾನಕ ಮುಖವನ್ನು ತೋರಿಸಿಲ್ಲ ಎಂಬ ಅಭಿಪ್ರಾಯವೂ ಇದೆ. ಅದೇ ಹೊತ್ತಿಗೆ ಇದರ ಭಯಾನಕತೆಯು ಕೆಲವು ವೈಜ್ಞಾನಿಕ ಮತ್ತು ರಾಜಕೀಯ ಹಿತಾಸಕ್ತಿಗಳಿಂದ ಉತ್ಪ್ರೇಕ್ಷಿತವಾಗಿದೆ ಎಂಬ ಪ್ರತ್ಯೇಕ ಪರಿಣತ ಅಭಿಪ್ರಾಯವೂ ಇದೆ. ಇದಕ್ಕೆ ತಕ್ಕಂತೆ ಭಾರತದಲ್ಲಿ ಈವರೆಗೆ ಈ ರೋಗದಿಂದ ಸತ್ತವರ ಸಂಖ್ಯೆ ಎರಡಂಕಿಯನ್ನೂ ಮತ್ತು ಸೋಂಕಿತರ ಸಂಖ್ಯೆ ಮೂರಂಕಿಯನ್ನೂ ಮೀರಿಲ್ಲ. ಆದರೆ ಇದು ಮುಂದೆ ದೊಡ್ಡ ಅನಾಹುತಕ್ಕೆ ಕಾರಣವಾಗಬಹುದಾದ ಹುಸಿ ನೆಮ್ಮದಿಯನ್ನು ಉಂಟುಮಾಡೀತೆಂದು ವಿಶ್ವ ಆರೋಗ್ಯ ಸಂಸ್ಥೆಯ ಪರಿಣತರು ಎಚ್ಚರಿಸಿದ್ದಾರೆ.

ಈ ದೃಷ್ಟಿಯಿಂದ ಸರ್ಕಾರ ದೇಶದ ಮೇಲೆ ವಿಧಿಸಿರುವ ಮೂರು ವಾರಗಳ 'ಬೀಗಮುದ್ರೆ' ಒಂದು ಸ್ವಾಗತಾರ್ಹ ಕ್ರಮವೇ ಆಗಿದೆ. ಇಲ್ಲದಿದ್ದರೆ ಈ ದೇಶದ ಅಶಿಸ್ತಿನ, ಅರಾಜಕ ಮನೋವೃತ್ತಿಯ ಜನರನ್ನು ರೋಗಮುಕ್ತ ವಲಯದಲ್ಲಿಡುವುದು ದುಸ್ಸಾಧ್ಯವೇ ಸರಿ. ಆದರೂ, ವಿಶೇಷವಾಗಿ ಕರ್ನಾಟಕದಲ್ಲಿ ಈ ಬೀಗಮುದ್ರೆಯನ್ನು ಲೆಕ್ಕಿಸದೆ ಮದುವೆ, ಹಬ್ಬ, ಬಾಡೂಟ, ನಾಮಕರಣಗಳೆಂದು ಜನ ರಸ್ತೆಗಿಳಿದಿರುವುದು ರಾಷ್ಟ್ರೀಯತೆಯ ಎಷ್ಟೇ ಹುಯಿಲೆಬ್ಬಿಸಿದರೂ ಈ ದೇಶ ಒಂದು ರಾಷ್ಟ್ರವಾಗಿ-ಎಲ್ಲರ ಒಳಿತಿನಲ್ಲಿ ತನ್ನ ಒಳಿತಿದೆ ಎಂಬ ಅರಿವಿನ-ಭಾವೈಕ್ಯತೆಯನ್ನು ಸಾಧಿಸಿಲ್ಲವೇನೋ ಎಂಬ ಶಂಕೆ ಮೂಡಿಸುತ್ತದೆ. ಬೀಗಮುದ್ರೆಯ ಆದೇಶ ಹೊರಡಿಸಿದ ರಾಜ್ಯದ ಮುಖ್ಯಮಂತ್ರಿಯೇ ಮತ್ತು ಮಾಜಿ ಪ್ರಧಾನಿಯೇ ತಮ್ಮ ಅನುಯಾಯಿಗಳು ಈ ಆದೇಶವನ್ನು ಉಲ್ಲಂಘಿಸಿ ಸಾವಿರಾರು ಜನರನ್ನು ಸೇರಿಸಿ ಮಾಡಿದ ಕುಟುಂಬಗಳ ಮದುವೆಗಳಲ್ಲಿ ಭಾಗವಹಿಸುತ್ತಾರೆ ಎಂದ ಮೇಲೆ ಜನವಾದರೂ ಏಕೆ ಅವರ ಆದೇಶವನ್ನು ಗೌರವಿಸಿಯಾರು? ಮುಖ್ಯಮಂತ್ರಿಗಳನ್ನು ಈ ಬಗ್ಗೆ ಯಾರೂ ಗಂಭೀರವಾಗಿ ಪ್ರಶ್ನಿಸಿಲ್ಲ ಮತ್ತು ಸ್ವತಃ ಅವರೂ ಆ ಬಗ್ಗೆ ಒಂದು ಕ್ಷಮೆ ಅಥವಾ ಪಶ್ಚಾತ್ತಾಪದ ಮಾತಾಡಿಲ್ಲ ಎಂಬುದು ಇಲ್ಲಿನ ಆಡಳಿತದ ಘನತೆ-ಗಾಂಭೀರ್ಯದ ಬಗ್ಗೆ ಎಲ್ಲವನ್ನೂ ಹೇಳುತ್ತದೆ. ರಾಷ್ಟ್ರ ಮಟ್ಟದ ಬೀಗಮುದ್ರೆಯನ್ನು ಘೋಷಿಸಿದ ಮೇಲೂ ರಾಜ್ಯ ಸರ್ಕಾರ ಹಬ್ಬಕ್ಕೆಂದು ಆದೇಶವನ್ನು ಸಡಿಲಿಸುತ್ತದೆ ಎಂದರೆ ಏನು ಹೇಳೋಣ? ಪ್ರಧಾನಿ ಮೋದಿ ಕರ್ನಾಟಕದಲ್ಲಿನ ಈ ಬೆಳವಣಿಗೆಯ ಬಗ್ಗೆ ಆತಂಕ ವ್ಯಕ್ತಪಡಿಸಿರುವುದು ಸಹಜವಾಗಿಯೇ ಇದೆ.

ಪ್ರಧಾನಿ ಮತ್ತು ಅವರ ನೇತೃತ್ವದ ಕೇಂದ್ರ ಸರ್ಕಾರ ಒಂದು ಕಡೆ ಒಂದು ಮಹಾ ಜನಸ್ತೋಮವನ್ನು ವೇಗದ ಸೋಂಕಿನ ಹಾವಳಿಯಿಂದ ರಕ್ಷಣಾ ವಲಯದಲ್ಲಿರಿಸುವ ಜಾರಿಯ ಜವಾಬ್ದಾರಿ, ಇನ್ನೊಂದೆಡೆ ಬೀಗಮುದ್ರೆ ವಿವಿಧ ಕ್ಷೇತ್ರಗಳ ಮೇಲೆ ಮಾಡುತ್ತಿರುವ ಮಹಾ ಆರ್ಥಿಕ ದುಷ್ಪರಿಣಾಮಗಳ ನಿರ್ವಹಣ ಹೊಣೆ. ಇದರ ಭಾಗವಾಗಿ . ಬೀಗಮುದ್ರೆಯಿಂದ ಜೀವನೋಪಾಯ ಕಳೆದುಕೊಂಡವರಿಗಾಗಿ ಒಟ್ಟು ೧.೭ ಲಕ್ಷ ಕೋಟಿ ರೂ. ಗಳ ಹಣಕಾಸಿನ ಪರಿಹಾರ ಮುಂಗಡ ಪಡಿತರ ವಿತರಣೆ ಇತ್ಯಾದಿ ಜನಸ್ನೇಹಿ ಕ್ರಮಗಳ ಜೊತೆಗೆ ರಿಸರ್ವ್ ಬ್ಯಾಂಕ್ ಕೂಡ ಸಾಲ ಮರುಪಾವತಿ ಗಡುವು ಮುಂದೂಡಿಕೆ ಮತ್ತು ಹಣಕಾಸು ವ್ಯವಸ್ಥೆಗೆ ಹೆಚ್ಚಿನ ಹಣ ಹರಿಸುವಂತಹ ನಿರ್ಧಾರಗಳನ್ನು ಕೈಗೊಂಡಿದೆಯಾದರೂ, ಈ ಮಹಾಮಾರಿ ಬಹುಬೇಗ ನಿಯಂತ್ರಣಕ್ಕೆ ಸಿಗದೇಹೋದರೆ ಈ ಯಾವ ಕ್ರಮಗಳೂ ಪ್ರಯೋಜನಕ್ಕೆ ಬಾರವೆಂದೇ ಹೇಳಬೇಕು. ಈ ಕಾಯಿಲೆಗೆ ಲಸಿಕೆ ಸಿದ್ಧಗೊಳ್ಳಲು ಕನಿಷ್ಠ ೧೮ ತಿಂಗಳು ಬೇಕಂತೆ.

ಆಶ್ಚರ್ಯವೆಂದರೆ ಈ ಮಹಾಮಾರಿಯನ್ನು ಎದುರಿಸಲು ಭಾರತವೂ ಸೇರಿದಂತೆ ಜಗತ್ತಿನಾದ್ಯಂತ ವಿಶ್ವ ನಾಯಕರು ಜನರಿಗೆ ಆಹಾರ ಮತ್ತು ಹಣಕಾಸಿನ ಪರಿಹಾರ ಮತ್ತು ಚಿಕಿತ್ಸಾ ಕ್ರಮಗಳ ಸುಧಾರಣೆ ಮತ್ತು ಲಸಿಕೆಗಳ ಅಭಿವೃದ್ಧಿಗಾಗಿ ಹೆಚ್ಚಿನ ಬಂಡವಾಳ ಹೂಡಿಕೆಯ ಮಾತುಗಳನ್ನಾಡುತ್ತಿದ್ದಾರೆಯೇ ಹೊರತು, ಕರೋನಾ ಸೇರಿದಂತೆ ಕಳೆದ ಇಪ್ಪತ್ತು-ಮುವ್ವತ್ತು ವರ್ಷಗಳಿಂದ ಎಚ್‌ಐವಿಯಿಂದ ಆರಂಭವಾದಂತೆ ಜಗತ್ತನ್ನು ಬಾಧಿಸುತ್ತಿರುವ ಎಬೋಲ, ಸಾರ್ಸ್, ವೆಸ್ಟ್ ನೈಲ್ ಮುಂತಾದ ನವೀನ (ನಾವೆಲ್)-ಅಂದರೆ ಈವರೆಗಿನ ವೈಜ್ಞಾನಿಕ ಗ್ರಹಿಕೆಗೆ ಸುಲಭವಾಗಿ ಸಿಗದ-ವೈರಾಣುಗಳು ಏಕೆ ಕಾಣಿಸಿಕೊಳ್ಳುತ್ತಿವೆ ಮತ್ತು ನಿರ್ದಿಷ್ಟವಾಗಿ ಈ ಕರೋನಾ ಚೀನಾದಲ್ಲಿ ಕಾಣಿಸಿಕೊಂಡಿರುವುದಕ್ಕೂ ಮತ್ತು ಇದು ಇವೊತ್ತು ಜಗತ್ತಿನ ಅತಿ ವೇಗದಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶವಾಗಿರುವುದಕ್ಕೂ ಏನಾದರೂ ಸಂಬಂಧವಿದೆಯೇ? ಎಂಬ ಪ್ರಶ್ನೆ ಯಾರನ್ನೂ- ಕಾಡುತ್ತಿಲ್ಲ ಏಕೆ ಎಂಬ ವಿಚಾರ ಕುರಿತೂ ನಾವಿಂದು ಆಲೋಚಿಸಬೇಕಿದೆ. ಅದೂ ವಿಶ್ವಸಂಸ್ಥೆಯ ಸಹಯೋಗದಲ್ಲೇ ನಡೆದಿರುವ ಹಲವು ಸಂಶೋಧನಾ ಕಾರ್ಯಕ್ರಮಗಳು ಪರಿಸರ ನಾಶಕ್ಕೂ ಹೊಸ ವೈರಾಣುಗಳು ಕಾಣಿಸಿಕೊಳ್ಳುವುದಕ್ಕೂ ಸಂಬಂಧವಿದೆ ಎಂಬ ಸೂಚನೆಗಳನ್ನು ನೀಡುತ್ತಿರುವಾಗ. ಈ ಸಂಬಂಧವಾಗಿ 'ರೋಗಗಳ ಪರಿಸರಶಾಸ್ತ್ರ' ಎಂಬ ಹೊಸ ಅಧ್ಯಯನ ಶಿಸ್ತೇ ಆರಂಭವಾಗಿ ಪ್ರೆಡಿಕ್ಟ್, ಒನ್ ಹೆಲ್ತ್ ಇನಿಷಿಯೇಟೀವ್ ಎಕೋ ಹೆಲ್ತ್ ಮುಂತಾದ ವಿಜ್ಞಾನಿಗಳ ತಂಡಗಳು ಈ ದಿಸೆಯಲ್ಲಿ ಸಂಶೋಧನೆಗಳನ್ನು ನಡೆಸುತ್ತಿರುವಾಗ. ಏಕೆ ಯಾವ ರಾಜಕೀಯ ಅಥವಾ ಉದ್ಯಮ ನಾಯಕರೂ, ಕೊನೆಗೆ ಮಾಧ್ಯಮಗಳೂ ಈ ಬಗ್ಗೆ ಮಾತಾಡುತ್ತಿಲ್ಲವೆಂದರೆ, ಅವರ ರಾಜಕಾರಣ, ಉದ್ಯಮ. ಮಾಧ್ಯಮ ಎಲ್ಲ ನಿಂತಿರುವುದೂ ಈ ಪರಿಸರ ನಾಶಕ್ಕೆ ಇನ್ನೊಂದು ಹೆಸರಾಗಿರುವ 'ಅಭಿವೃದ್ಧಿ' ಆಧಾರಿತ ಆರ್ಥಿಕತೆಯ ಮೇಲೆ. ಅಷ್ಟೇ ಅಲ್ಲ, ಸಾಮಾನ್ಯ ಜನರ ಕಣ್ಣರಳಿಸುವ ಜಿಡಿಪಿ ಏರಿಕೆಗೂ, ರಾಷ್ಟ್ರಭಕ್ತರ' 'ಬಲಿಷ್ಠ ರಾಷ್ಟ್ರ'ದ ಕನಸಿಗೂ ಇದು ಬೇಕಾಗಿದೆ.

ಶೇ. ೬೦ರಷ್ಟು ವೈರಾಣುಗಳ ಮೂಲ ಪ್ರಾಣಿ ಸಂಕುಲದಲ್ಲಿದೆ. ಅದರಲ್ಲಿ ಮೂರನೇ ಎರಡು ಭಾಗದ ಮೂಲ ಇರುವುದು ಕಾಡು ಪ್ರಾಣಿ-ಪಕ್ಷಿ-ಕ್ರಿಮಿ ಕೀಟಗಳಲ್ಲಿ. ಅವುಗಳ ಪರಸ್ಪರ ಅವಲಂಬನೆಯ ಸರಪಳಿ ಮನುಷ್ಯನ ಹಸ್ತಕ್ಷೇಪದಿಂದ ಕತ್ತರಿಸಲ್ಪಟ್ಟಿತೆಂದರೆ ಅವುಗಳ ರೋಗ ನಿರೋಧಕ ಶಕ್ತಿ ಕುಂದಿ ಅವು ಅಲ್ಲಿಯವರೆಗೆ ತಮ್ಮ ದೇಹ ಮತ್ತು ತಮ್ಮ ಆಹಾರ ಸರಪಳಿಗೆ ಸೀಮಿತಗೊಳಿಸಿಕೊಂಡಿದ್ದ ವೈರಾಣುಗಳಿಗೆ ವಾಹಕವಾಗತೊಡಗುತ್ತವೆ. ದಟ್ಟ ಕಾಡುಗಳ ಮಧ್ಯೆ ಮರಮುಟ್ಟುಗಳಿಗಾಗಿ, ವಿವಿಧ ಗಣಿಗಾರಿಕೆಗಳಿಗಾಗಿ, ವಿನೋದ ವಿಹಾರ ತಾಣಗಳಿಗಾಗಿ, ಹೊಸ ಹೊಸ ಪ್ರಾಣಿ ಪಕ್ಷಿಗಳ ಮಾಂಸ ಭಕ್ಷಣೆಗಾಗಿ ಆಧುನಿಕ ರಸ್ತೆಗಳನ್ನು ಮಾಡುವುದರಿಂದ ಈ ಪರಿಣಾಮ ಸರಪಳಿ ಆರಂಭವಾಗುತ್ತದೆ. ಆದರೆ ಆದಷ್ಟೂ ಹೆಚ್ಚು ಸುಖವಾಗಿರುವುದು ತನ್ನ ಆಜನ್ಮಸಿದ್ಧ ಹಕ್ಕು ಮತ್ತು ಅದರಿಂದ ಒದಗುವ ತೊಂದರೆಗಳೆಲ್ಲವನ್ನೂ ಪರಿಹರಿಸಲು ಆಧುನಿಕ ವಿಜ್ಞಾನವಿದೆ ಎಂದು ನಂಬಿಸಿಬಿಟ್ಟಿರುವ ಇಂದಿನ ಜೀವನ ಕ್ರಮದಲ್ಲಿ ಅಡಕವಾಗಿರುವ ಕುರುಡಿಗೆ ಈ ಸರಪಳಿಯ ಕೊಂಡಿಗಳು ಕಾಣದಾಗಿವೆ. ಹಾಗಾಗಿಯೇ ನಮ್ಮ ನಾಯಕರೂ ಸೇರಿದಂತೆ ಜನಕ್ಕೆ ಇಂದಿನ 'ಬೀಗಮುದ್ರೆ' ಸಲ್ಲದ 'ಉಪದ್ರವ'ವಾಗಿ ಕಾಣುತ್ತಿರುವುದು ಮತ್ತು ಈ ಕುರುಡೇ ದೇಶಭಕ್ತಿಯ ಹೆಸರು ಹೇಳಿಕೊಂಡೇ, ಸಂವೈಧಾನಿಕವಾಗಿಯೇ ಕೋಟ್ಯಂತರ ರೂಪಾಯಿಗಳ ವೆಚ್ಚದಲ್ಲಿ ಸರ್ಕಾರಗಳನ್ನು ಉರುಳಿಸಿ ಅಧಿಕಾರ ಪಡೆಯುವುದನ್ನು, ಅಧಿಕಾರ ಕಳೆದುಕೊಂಡವರು 'ಸಂವಿಧಾನ ಉಳಿಸಿ' ಎಂದು ಹುಯ್ಲೆಬ್ಬಿಸುವ ವಿಪರ್ಯಾಸವನ್ನು ನಾವಿಂದು ನೋಡುವಂತಾಗಿರುವುದು.

–ಸಂಪಾದಕ

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

'ಹೊಸಮನುಷ್ಯ' ಬಂದಕೂಡಲೇ ನಾವು ಓದುವುದು ಸಂಪಾದಕರ ಟಿಪ್ಪಣಿಗಳನ್ನು. ಅಂತೆಯೇ ಮಾರ್ಚ್ ಸಂಚಿಕೆಯ ಟಿಪ್ಪಣಿಗಳನ್ನೂ ಓದಿದಾಗ ದೆಹಲಿಯ ಹಾಗೂ ದೇಶದ ವಸ್ತುಸ್ಥಿತಿಯನ್ನು ಈ ಟಿಪ್ಪಣಿಗಳು ಸರಿಯಾಗಿ ಬಿಂಬಿಸಿವೆ ಎನ್ನಿಸಿತು. ಇದರ ಕಡೆಯ ಪ್ಯಾರಾವಂತೂ ಎಲ್ಲರ ಕಣ್ಣು ತೆರೆಸುವಂತಿದೆ. ಈ ಪರಿಣಾಮಕಾರಿ ಸಾಲುಗಳಿಗಾಗಿ ಅಭಿನಂದನೆಗಳು. ಇನ್ನು ಮಹಿಳಾ ವಿಶೇಷ ಪುಟಗಳಿಗಾಗಿ ಬರೆದಿರುವ ಟಿಪ್ಪಣಿಗಳೂ ಮಹಿಳೆಯ ಬದುಕಿನ ಅನೇಕ ಆಯಾಮಗಳನ್ನು ತೆರೆದಿಟ್ಟಿದೆ. ಗೀತಾ ವಸಂತಳ ಕಥೆ 'ಚುಕ್ಕಿ ಮತ್ತು ಬಯಲು' ಮಾರ್ಮಿಕವಾಗಿ ಮೂಡಿಬಂದಿದೆ. ಹಾಗೇ ಮಂಜುಳಾ ಎಂ. ರಾಜು ಅವರು ಬರೆದಿರುವ ನನ್ನ ಸಮಗ್ರ ಸಾಹಿತ್ಯ ಸಂಪುಟ–೧೦: 'ಬಸಂತ'ದ ಪರಿಚಯವೂ ಸಂಪುಟಕ್ಕೆ ನ್ಯಾಯ ಒದಗಿಸಿಕೊಟ್ಟಿದೆ.

**–ಕಮಲಾ ಹಂಪನಾ**, ಬೆಂಗಳೂರು

ಮಾರ್ಚ್ ತಿಂಗಳ ನಿಮ್ಮ ಸಂಪಾದಕೀಯ ಟಿಪ್ಪಣಿಗಳು ನಾನು ಇಂದಿನ ರಾಷ್ಟ್ರಜೀವನ ಕುರಿತಂತೆ ಓದಿದ ಅತ್ಯಂತ ಸಮಗ್ರ ಮತ್ತು ಪರಿಣಾಮಕಾರಿ ವ್ಯಾಖ್ಯಾನವಾಗಿದೆ. ರಾಷ್ಟ್ರದ ಜನ ಇಂದಿನ ರಾಜಕೀಯ ಪರಿಸ್ಥಿತಿಯ ಎದುರು ದಿಗ್ಭ್ರಮೆ ಮತ್ತು ಹತಾಶೆಗಳಲ್ಲಿ ತಮ್ಮ ಅಭಿವ್ಯಕ್ತಿಯ ಸಮತೋಲನವನ್ನೇ ಕಳೆದುಕೊಳ್ಳುತ್ತಿರುವುದನ್ನು ನೀವು ಸರಿಯಾಗಿಯೇ ಗ್ರಹಿಸಿದ್ದೀರಿ.

ಇನ್ನು ಮಹಿಳಾ ವಿಶೇಷ ಪುಟಗಳಲ್ಲಿನ ಅಭಿಪ್ರಾಯ ಮಂಡನೆಗಳ ಪೈಕಿ ವೈದೇಹಿ ಮತ್ತು ವಿನಯಾ ಅವರ ವಿಶ್ಲೇಷಣೆಗಳು ಅರ್ಥಪೂರ್ಣ ಎನಿಸಿದವು. ಹಾಗೇ ಎನ್ ಆರ್ ಸ್ನೇಹ ಅವರ ಯುವಲಹರಿ ಬರಹ ಮತ್ತು ಸ್ತ್ರೀವಾದಿ ಚಿಂತನೆ ಮತ್ತು ಹೋರಾಟ ಕುರಿತ ಎಚ್.ಎಸ್. ಶ್ರೀಮತಿಯವರ ಕೃತಿಯ ಬಗೆಗಿನ ಸಬಿತಾ ಬನ್ನಾಡಿಯವರ ವಿಮರ್ಶೆ ನಮ್ಮನ್ನು ಆಲೋಚನೆಗೆ ಹಚ್ಚುವಂತಿದೆ.. ಮಹಿಳಾ ಪುಟಗಳ ಭಾಗವಾಗಿ ಈ ಸಂಚಿಕೆಯಿಂದ ಕಸ್ತೂರಬಾ–೧೫೦ ಸರಣಿ ಆರಂಭಿಸಿರುವುದು ಒಂದು ಸಾರ್ಥಕ ನೆನಪಿನ ಪ್ರಯತ್ನವಾಗಿದೆ

**–ಲತಾ ಸೋಮಶೇಖರ್**. ಬೆಂಗಳೂರು

ಕಳೆದ ಸಂಚಿಕೆಯಲ್ಲಿನ ಗೀತಾ ವಸಂತ ಅವರ ಕಥೆ 'ಚುಕ್ಕಿ ಮತ್ತು ಬಯಲು' ನನಗೆ ತುಂಬ ಇಷ್ಟವಾಯಿತು.

**–ಬಿ. ರಾಜೇಶ್**, ಮೈಸೂರು

ನಾವು ಸಾಗುತ್ತಿರುವ ದಾರಿಯು ಸರಿಯಾದ ದಿಕ್ಕಿನಲ್ಲಿದೆಯೇ ಅನ್ನುವುದನ್ನು ಮನನ ಮಾಡಿಕೊಡುವ 'ಹೊಸ ಮನುಷ್ಯ' ತುಂಬಾ ಆತ್ಮೀಯನಾಗಿದ್ದಾನೆ. ಪತ್ರಿಕೆಯ ಪುಟಗಳಲ್ಲಿ ಮೂಡಿರುವ ನುಡಿಗಳಲ್ಲಿ ಜೊಳ್ಳು ಇಲ್ಲವೇ ಇಲ್ಲ. ಇದೇ ಮಾರ್ಚ್ ಸಂಚಿಕೆಯಲ್ಲಿನ 'ಚುಕ್ಕಿ ಹಾಗೂ ಬಯಲು' ಕಥೆಯಲ್ಲಿ ಕವಿಯಿತ್ರಿ ಬಯಲಲ್ಲಿ ನಿರಾಕಾರವಾಗುವ ಕಥೆ ಸೊಗಸಾಗಿದೆ. ಅತ್ಯಾಚಾರಗಳಿಗೆ ನಾಗರಿಕರಲ್ಲಿನ ಸಾಕ್ಷರತೆಯ ಕೊರತೆ, ವಿದ್ಯಾರ್ಥಿಗಳಿಗೆ ಗುಣಮಟ್ಟವಿಲ್ಲದ ಶಿಕ್ಷಣ, ಯುವಜನರ ಮದ್ಯಪಾನ, ಡ್ರಗ್ಸ್ ಸೇವನೆ ಹಾಗೂ ಸಮಾಜದಲ್ಲಿನ ಅಸಮ ಲಿಂಗಾನುಪಾತಗಳು ಕೂಡ ಕಾರಣಗಳಾಗಿವೆ.

**–ಮಹಾಂತೇಶ ಓಶಿಮಠ**. ಕೈಗಾ (ಕಾರವಾರ)

ಅಯೋಧ್ಯೆಗೆ ಹೋಗಿ ಬಾಬ್ರಿ ಮಸೀದಿ ಉರುಳುವುದನ್ನು ನೋಡುತ್ತಾ ನಿಂತವರು ತಮ್ಮ ಮಠದ ಆವರಣದಲ್ಲಿ ನಮಾಜ್ ಮಾಡಲು ಮುಸ್ಲಿಮರನ್ನು ಆಹ್ವಾನಿಸುವ ವಿಪರ್ಯಾಸವನ್ನು ಕಾಣಲಾಗದವರಿಗೆ ಕೋಮು ಸೌಹಾರ್ದ ಎನ್ನುವುದು ಒಂದು ಬೌದ್ಧಿಕ ಆಟ ಮಾತ್ರ ಆಗಿರುತ್ತದೆ. ಅದನ್ನು ನೀವು ನಿಮ್ಮ 'ಗೆಳೆಯರೊಬ್ಬರು ತಿರುಗಿ ಬಿದ್ದಾಗ' ಎಂಬ ಟಿಪ್ಪಣಿಯಲ್ಲಿ ಸೂಚ್ಯವಾಗಿ ಹೇಳಿರುವುದು ಗಮನಾರ್ಹ.

**–ಕಮಲಾಕರ ಎನ್ ಶೆಟ್ಟಿ**, ಕುಂದಾಪುರ

ಪೇಜಾವರರ ನಿರ್ಗಮನದಿಂದ ತಮ್ಮೊಳಗಿನ ಒಳ್ಳೆಯತನವೊಂದು ಕಾಣೆಯಾಯಿತೆಂದು ಭಾಸವಾಗುತ್ತಿದೆ ಎಂದು ರಾಜಾರಾಂ ತೋಳ್ಪಾಡಿಯವರೇ ಅಲವತ್ತುಕೊಂಡಿರುವಾಗ ಮುಂದಿನ ಮಾತೇಕೆ?

**–ಬಸವರಾಜಪ್ಪ**, ಮೈಸೂರು

## ಕನ್ನಡದ ಕಟ್ಟಾಳು ಪಾಟೀಲ ಪುಟ್ಟಪ್ಪ: ಒಂದು ನೆನಪು

**–ವೆಂಕಟೇಶ ಮಾಚಕನೂರ**



"ಕನ್ನಡವು ಈ ರಾಜ್ಯದಲ್ಲಿ ಕಳೆದು ಹೋಗದಂತೆ ನೋಡಿಕೊಳ್ಳುವ ಅವಶ್ಯ ಇದೆ. ಕನ್ನಡ ಕಳೆದು ಹೋದರೆ ಕನ್ನಡವೊಂದೇ ಕಳೆದು ಹೋಗುವದಿಲ್ಲ. ಅದರೊಂದಿಗೆ ಕರ್ನಾಟಕವೂ ಕಳೆದು ಹೋಗುತ್ತದೆ. ಕನ್ನಡವು ದುರ್ಬಲಗೊಂಡಿರುವುದರಿಂದ ಕರ್ನಾಟಕವು ಕಳಚಿ ಬೀಳುವ ಭೀತಿ ಇದೆ... ಕನ್ನಡ ಬದುಕಿದರೆ ಕರ್ನಾಟಕದಲ್ಲಿಯೇ ಬದುಕಬೇಕು, ಬೆಳೆಯಬೇಕು. ಅದು ಬದುಕಲು ಬೆಳೆಯಲು ಬೇರೆ ಸ್ಥಳವಿಲ್ಲ..."

ಇವು ನಾಡೋಜ ಪಾಟೀಲ ಪುಟ್ಟಪ್ಪನವರ ಆತ್ಮಚರಿತ್ರೆ 'ನಾನು ಪಾಟೀಲ ಪುಟ್ಟಪ್ಪ'ದಲ್ಲಿನ ಮಾತುಗಳು. ಕಳೆದ ಮಾರ್ಚ್ ೧೬ ರಂದು ನಿಧನರಾದ ಪುಟ್ಟಪ್ಪನವರು ನಾಡುನುಡಿ ಕುರಿತು ಇಂಥ ಎಷ್ಟೋ ಮಾತುಗಳನ್ನು ದಣಿವರಿಯದೇ ಅರ್ಧಶತಮಾನಕ್ಕೂ ಹೆಚ್ಚು ಕಾಲ ಹೇಳುತ್ತಲೇ ಬಂದರು. ಸ್ವಾತಂತ್ರ್ಯ ಹೋರಾಟಗಾರರಾಗಿ, ಕರ್ನಾಟಕ ಏಕೀಕರಣಕ್ಕಾಗಿ ದುಡಿದವರಾಗಿ, ತಮ್ಮ ಸಂಪಾದಕತ್ವದ 'ವಿಶ್ವವಾಣಿ' ಎಂಬ ದಿನಪತ್ರಿಕೆ ಮತ್ತು 'ಪ್ರಪಂಚ' ಎಂಬ ಸಾಪ್ತಾಹಿಕದ ದಣಿವರಿಯದ ಪತ್ರಕರ್ತರಾಗಿ, ಸಂಸದರಾಗಿ, ಕನ್ನಡ ಕಾವಲು ಸಮಿತಿ ಅಧ್ಯಕ್ಷರಾಗಿ, ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಕರ್ನಾಟಕ ವಿದ್ಯಾವರ್ಧಕ ಸಂಘದ ನೇತಾರರಾಗಿದ್ದ ಪುಟ್ಟಪ್ಪನವರದು ಬಹುಮುಖ ಪ್ರತಿಭೆಯ ಬದುಕು. ಕರ್ನಾಟಕವೆಂದರೆ ಕೇವಲ ಬೆಂಗಳೂರು, ಮೈಸೂರು ಅಲ್ಲ ಎಂದು ಉತ್ತರ ಕರ್ನಾಟಕದ ಪರ ಜೋರಾಗಿ ನಿರ್ಭಿಡೆಯಿಂದ ಗುಡುಗುತ್ತಿದ್ದವರು ಪುಟ್ಟಪ್ಪ. ಹಾಗೆಯೇ ಅವರು ಎಲ್ಲ ವರ್ಗದ ಜನರು, ನೇತಾರರೊಂದಿಗೆ ಆತ್ಮೀಯ ಒಡನಾಟ ಹೊಂದಿದವರಾಗಿದ್ದರು.

ಅವರ ಅವ್ಯಾಹತ ಓದು, ಬರಹ, ಬಡತನ, ತಿರುಗಾಟ, ನಾಡುನುಡಿ ಕುರಿತು ಅತೀವ ಕಾಳಜಿ ಅವರ ಬದುಕನ್ನು ರೂಪಿಸಿದ್ದವು. ದಿ.ರಾಜಕುಮಾರರೊಂದಿಗೆ ಮಂಚೂಣಿಯಲ್ಲಿ ನಿಂತು ಗೋಕಾಕ ಚಳುವಳಿ ಮೂಲಕ ಶಿಕ್ಷಣದಲ್ಲಿ ಕಳೆದೇ ಹೋಗುತ್ತಿದ್ದ ಕನ್ನಡವನ್ನು ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು ಅವರು. ಹಾಗೆಯೆ ಕನ್ನಡ ಕಾವಲು ಸಮಿತಿ ಅಧ್ಯಕ್ಷರಾಗಿ ಆಡಳಿತದಲ್ಲಿ ಕನ್ನಡ ಜಾರಿಗೊಳ್ಳಲು ಅವರು ವಹಿಸಿದ ಶ್ರಮ ಅಪಾರ. ಕಚೇರಿಗಳಲ್ಲಿ ಆಂಗ್ಲ ಬೆರಳಚ್ಚುಗಳು ಹೋಗಿ ಕನ್ನಡ ಬೆರಳಚ್ಚುಗಳು ಬರಲು ಅವರು ಮುಖ್ಯ ಕಾರಣರಾದರು. ಎಲ್ಲ ಮಂತ್ರಿ, ಶಾಸಕರನ್ನು ಎದುರಿಸಿ ಅವರು ಕನ್ನಡದ ಪರ ನಿಂತರು. ಬೇಸರ ಇಲ್ಲದೆ ಅವರು ಸಭೆ ಸಮಾರಂಭಗಳಲ್ಲಿ ಕನ್ನಡ ಕರ್ನಾಟಕ ಕುರಿತು ಮಾತನಾಡುತ್ತಿದ್ದರು. ಕಳೆದ ಮೂರ್‍ನಾಲ್ಕು ದಶಕಗಳ ಅವರೊಂದಿಗಿನ ನನ್ನ ವೈಯಕ್ತಿಕ ಒಡನಾಟ ಸ್ಮರಣೀಯವಾದದ್ದು.

ಬೇರೆ ಮಾಧ್ಯಮಗಳ ಅಟಾಟೋಪ ಇಲ್ಲದ ಕಾಲದಲ್ಲಿ ಅವರ 'ಪ್ರಪಂಚ' ನಾಡಿನ ಜನಪ್ರಿಯ ಪತ್ರಿಕೆ ಆಗಿತ್ತು. ಅದರ 'ಅನುಭವ ಇರುವಲ್ಲಿ ಅಮೃತತ್ವ ಇದೆ' ವ್ಯಕ್ತಿಚಿತ್ರಣ ಅಂಕಣಗಳು ಎಲ್ಲರ ಮೆಚ್ಚುಗೆ ಗಳಿಸಿದ್ದವು. ಅವರ ರಾಜಕೀಯ ಬರಹಗಳು, ವ್ಯಕ್ತಿಚಿತ್ರಣಗಳು ಅವರಿಗೆ ಬೇಕಾದವರನ್ನು ಅಟ್ಟಕ್ಕೆ ಏರಿಸಲು, ಬೇಡಾದವರನ್ನು ಅವಹೇಳನ ಮಾಡಲು ಬಳಕೆಯಾದವು ಎಂಬ ಮಾತಿದೆ. (ಈ ಸಂಬಂಧವಾಗಿಯೇ ಕೆಲವರು ಅವರನ್ನು 'ಪಿಟೀಲು ಪುಟ್ಟಪ್ಪ' ಎಂದು ಕರೆಯುತ್ತಿದ್ದರು!) ತಮ್ಮ ಈ ಬರವಣಿಗೆ ಹಾಗೂ ಹರಿತ ಮಾತುಗಳ ಮೂಲಕ ಅವರು ಎಲ್ಲರನ್ನು ಎಲ್ಲವನ್ನು ಜಾಡಿಸುತ್ತ ತಮ್ಮ ಸುತ್ತ ಒಂದು ಭಯಾವಳಿಯನ್ನು ನಿರ್ಮಿಸಿಕೊಂಡಿದ್ದರು. ಅವರ ಆತ್ಮಚರಿತ್ರೆಯಲ್ಲೂ ಅವರಿಂದ ತೇಜೋವಧೆಗೊಂಡ ಕೆಲವು ವ್ಯಕ್ತಿಚಿತ್ರಣಗಳಿವೆ. ತಮ್ಮ ವಿಚಾರಗಳಿಗೆ ಸಹಮತ ಇಲ್ಲದ, ಅವರ ವಿಚಾರ ಧಾರೆಯ ವಿರೋಧಿಗಳನ್ನು ಅವರು ಯಾವ ಮಟ್ಟಕ್ಕಾದರು ಇಳಿದು ಹಣಿಯುತ್ತಿದ್ದರು. ತಮ್ಮ ಬೆಂಬಲಿಗರ ಪರ ಅಷ್ಟೇ ಬಲವಾಗಿ ನಿಲ್ಲುತ್ತಿದ್ದರು. ಅವರ ಈ ಮನೋಭಾವದಿಂದಾಗಿ ಧಾರವಾಡದ ಬಹುಪಾಲು ಸಾರಸ್ವತ ಲೋಕ ವಿದ್ಯಾವರ್ಧಕ ಸಂಘದಿಂದ ದೂರ ಸರಿಯಿತು. ದೈಹಿಕ, ಮಾನಸಿಕ ಸ್ವಾಸ್ಥ್ಯ ಕಳೆದುಕೊಂಡ ಮೇಲೂ ಅವರು ಸಂಘದ ಅಧ್ಯಕ್ಷಗಿರಿಗೆ ಅಂಟಿಕೊಂಡು, ಬೇರೆಯವರನ್ನು ಬೆಳೆಸದೆ ನಿರ್ಗಮಿಸಿದರು.

ಜೀವನದುದ್ದಕ್ಕೂ ನಾಡುನುಡಿ ಪರ ಹೋರಾಡುತ್ತ ಬಂದ ಪುಟ್ಟಪ್ಪನವರು ಸುಪ್ರಿಂ ಕೋರ್ಟಿನಲ್ಲಿ ಭಾಷೆ ಕುರಿತು ವಿವಾದ ಅಂತಿಮ ವಿಚಾರಣೆ ಹಂತದಲ್ಲಿದ್ದಾಗ ಅವರ ಹಿರಿತನ ಮತ್ತು ಅನುಭವವನ್ನು ಅವರು ಕೋರ್ಟ ಮುಂದೆ ಪಣಕ್ಕೊಡ್ಡುವ ಅವಕಾಶ ಇತ್ತು. ಆತ್ತ ಅವರ ಗಮನ ಹರಿಯಲೇ ಇಲ್ಲ. ಕಳೆದ ವರ್ಷ ಸರಕಾರ ಸಾವಿರ ಆಂಗ್ಲ ಮಾಧ್ಯಮ ಶಾಲೆ ತೆರೆಯಲು ಉದ್ದೇಶಿಸಿದಾಗ ಅವರಿಂದ ಹೆಚ್ಚಿನ ಪ್ರತಿರೋಧ ವ್ಯಕ್ತವಾಗಲಿಲ್ಲ. ಆಗಲೇ ಅವರು ದೈಹಿಕವಾಗಿ, ಮಾನಸಿಕವಾಗಿ ಜರ್ಜರಿತಗೊಂಡಿದ್ದರು. ಅವರ ಕಾಲದಲ್ಲಿಯೆ ಕನ್ನಡದ ಅವಸಾನ ಆರಂಭಗೊಂಡದ್ದೊಂದು ನಾಡಿನ ದುರಂತ.

**ಏಪ್ರಿಲ್ ೧೪, ಅಂಬೇಡ್ಕರ್ ಜನ್ಮದಿನ**

**ಧರ್ಮವಿಚಾರ ಪುಟ**

# ಅಂಬೇಡ್ಕರ್ ನಿರೂಪಿಸಿದ ಬೌದ್ಧ ಧರ್ಮ



ತಾವು ಹಿಂದೂವಾಗಿ ಹುಟ್ಟಿದ್ದಕ್ಕಾಗಿ ಅಸ್ಪೃಶ್ಯತೆಯ ಕಾರಣದಿಂದ ಅನುಭವಿಸಿದ ಅವಮಾನ ಮತ್ತು ಸಂಕಟಗಳ ಪರಿಣಾಮವಾಗಿ ತಾವು ಹಿಂದೂವಾಗಿ ಸಾಯಬಯಸುವುದಿಲ್ಲ ಎಂಬ ತಮ್ಮ ಹೇಳಿಕೆಗೆ ಅನುಗುಣವಾಗಿ ಅಂಬೇಡ್ಕರ್, ತಾವು ಮರಣ ಹೊಂದುವ ಮುನ್ನ ತಮ್ಮ ಸಾವಿರಾರು ಅನುಯಾಯಿಗಳೊಂದಿಗೆ ಬೌದ್ಧ ಧರ್ಮ ಸ್ವೀಕರಿಸಿದರು. ಈ ಮಹಾ ಮತಾಂತರಕ್ಕೆ ಪೂರ್ವ ಸಿದ್ಧತೆಯಾಗಿ ಅವರು ಇಸ್ಲಾಂ, ಸಿಖ್, ಜೈನ ಸೇರಿದಂತೆ ಹಲವು ಧರ್ಮಗಳ, ಅವುಗಳ ಮೂಲ ಗ್ರಂಥಗಳ ಅಧ್ಯಯನ ಮಾಡಿ ಕೊನೆಗೆ ಬುದ್ಧ ಧರ್ಮವನ್ನು ಆಯ್ದುಕೊಂಡರು. ಈ ಅಧ್ಯಯನದ ಪರಿಣಾಮವಾಗಿ ಅವರು ತಮ್ಮ ಅನುಯಾಯಿಗಳ ಮಾರ್ಗದರ್ಶನಕ್ಕಾಗಿ 'ಬುದ್ಧ ಮತ್ತು ಅವನ ಧರ್ಮ' ಎಂಬ ಬೃಹತ್‌ಗ್ರಂಥವನ್ನು ಬರೆದರು. ಬೌದ್ಧ ಧರ್ಮದ ಎರಡು ಮುಖ್ಯ ಪಂಥಗಳಾದ 'ಹೀನಯಾನ' ಮತ್ತು 'ಮಹಾಯಾನ'ಗಳಿಗೆ ಪ್ರತಿಯಾಗಿ ನವಯಾನ ಪಂಥದ್ದೆಂದು ಕರೆಯಲಾಗುವ ಈ ಬೌದ್ಧ ಮೀಮಾಂಸೆಯನ್ನು ಅದು ಬೌದ್ಧ ಧರ್ಮದ ಆಧಾರವೆಂದು ಪರಿಗಣಿತವಾಗಿರುವ ('ಆಸೆಯೇ ದುಃಖಕ್ಕೆ ಕಾರಣ'ದಿಂದ ಆರಂಭವಾಗುವ ನಾಲ್ಕು ಆರ್ಯಸತ್ಯಗಳಿಂದ ಮೂಡಿಲ್ಲವಾದ್ದರಿಂದ ಹಲವುಬೌದ್ಧ ವಿದ್ವಾಂಸರು ಅದನ್ನು ಬೌದ್ಧ ಪಂಥವೆಂದು ಒಪ್ಪಲಿಲ್ಲವಾದರೂ, ಇತ್ತೀಚಿನ ದಿನಗಳಲ್ಲಿ ದಲೈಲಾಮಾ ಅವರಿಂದ ಆರಂಭವಾದಂತೆ 'ಅಷ್ಟಾಂಗ ಮಾರ್ಗ'ದಿಂದ ಸ್ಫೂರ್ತಿ ಪಡೆದ ಅದರ ನೀತಿ ಸಂಹಿತೆಯ ಕಾರಣದಿಂದ ಅದಕ್ಕೆ ಕ್ರಮೇಣ ಅಧಿಕೃತ ಮಾನ್ಯತೆ ನೀಡಲಾಗುತ್ತಿದೆ. ಅಂಬೇಡ್ಕರ್ ಅವರ ಪರಿನಿರ್ವಾಣದ ನಂತರ ೧೯೫೭ರಲ್ಲಿ ಪ್ರಕಟವಾದ ಈ ಗ್ರಂಥದ ಸಾರವನ್ನು ಹಿಡಿದಿಡುವ ಪೀಠಿಕಾ ಭಾಗದ ಕನ್ನಡಾನುವಾದವನ್ನು ಇಲ್ಲಿ ನೀಡಲಾಗಿದೆ.–ಸಂ.

## ಪ್ರಪಂಚದಲ್ಲಿ ಸತ್ಯ ಸ್ಥಾಪಿಸುವುದೇ ಸದ್ಧರ್ಮ

ದೇವರನ್ನು ಅನ್ವೇಷಿಸುವಂತೆ ಮನುಷ್ಯನನ್ನು ಪ್ರೇರೇಪಿಸುವುದು ಮತ್ತು ಆತ್ಮೋದ್ಧಾರದ ಪ್ರಾಮುಖ್ಯತೆಯನ್ನು ಬೋಧಿಸುವುದು ಮತದ ಉದ್ದೇಶ ಎಂದು ತಿಳಿಸಲಾಗಿದೆ.

ಕೆಲವು ಧರ್ಮಗಳು ಸ್ವರ್ಗ ಸಾಮ್ರಾಜ್ಯ, ಮರ್ತ್ಯ ಸಾಮ್ರಾಜ್ಯ ಮತ್ತು ನರಕ ಸಾಮ್ರಾಜ್ಯ ಎಂಬ ಮೂರು ಸಾಮ್ರಾಜ್ಯಗಳನ್ನು ಪ್ರಸ್ತಾಪಿಸುತ್ತವೆ. ಸ್ವರ್ಗ ಸಾಮ್ರಾಜ್ಯವನ್ನು ದೇವರೇ ನೇರವಾಗಿ ಆಳುವುದರಿಂದ ಅಲ್ಲಿ ಋಜುತನದ ಸಾಮ್ರಾಜ್ಯ ನೆಲೆಸಿದೆ ಎಂದು ಕೆಲವು ಧರ್ಮಗಳಲ್ಲಿ ಹೇಳಲಾಗಿದೆ.

ಇನ್ನುಳಿದ ಧರ್ಮಗಳ ಪ್ರಕಾರ, ದೇವರು ಮತ್ತು ಅವನ ಪ್ರವಾದಿಯಲ್ಲಿ ನಂಬಿಕೆ ಇರುವವರು ಮಾತ್ರ ಸ್ವರ್ಗಸಾಮ್ರಾಜ್ಯವನ್ನು ತಲುಪುತ್ತಾರೆ. ಸ್ವರ್ಗವನ್ನು ಸೇರಿದ ಬಳಿಕ ಸುಖಭೋಗಗಳೆಲ್ಲ ಅವರಿಗೆ ಲಭಿಸುತ್ತವೆ. ಸ್ವರ್ಗ ಸಾಮ್ರಾಜ್ಯವನ್ನು ತಲುಪುವುದೇ ಮನುಷ್ಯರ ಪರಮ ಧ್ಯೇಯ ಮತ್ತು ಹೇಗೆ ತಲುಪಬೇಕೆನ್ನುವುದೇ ಅವರ ಗುರಿ ಎಂದು ಎಲ್ಲಾ ಧರ್ಮಗಳೂ ಬೋಧಿಸುತ್ತವೆ. ನರಕ ಸಾಮ್ರಾಜ್ಯವನ್ನು ಸೈತಾನ ಆಳುತ್ತಾನೆ ಎಂದು ವರ್ಣಿಸಲಾಗಿದೆ. ಮರ್ತ್ಯ ಸಾಮ್ರಾಜ್ಯ ವಿವಾದಿತ ಕ್ಷೇತ್ರವಾಗಿದೆ. ಅಲ್ಲಿ ಸೈತಾನನ ಪ್ರಾಬಲ್ಯ ಇಲ್ಲ. ದೇವರ ಪಾರಮ್ಯವೂ ಇಲ್ಲ.

ಆದರೆ, "ಧರ್ಮದ ಧ್ಯೇಯ ಏನು?"ಎಂಬ ಪ್ರಶ್ನೆಗೆ ಬುದ್ಧನ ಉತ್ತರ ತುಂಬಾ ಭಿನ್ನವಾಗಿದೆ. ಕಾಲ್ಪನಿಕ ಸ್ವರ್ಗವನ್ನು ತಲುಪುವುದೇ ಜೀವನದ ಗುರಿ ಎಂದು ಅವನು ಹೇಳಲಿಲ್ಲ. ಋಜುತನದ ಸಾಮ್ರಾಜ್ಯವು ಈ ಭೂಮಿಯಲ್ಲೇ ಇದೆ; ಅದನ್ನು ಋಜುತನದಿಂದ ತಲುಪಬೇಕಾಗಿದೆ; ಜನರು ತಮ್ಮ ಸಂಕಟವನ್ನು ನಿರ್ಮೂಲ ಮಾಡಬೇಕಾದರೆ, ಅವರು ಇತರರ ಜೊತೆ ಋಜುತನದಿಂದ ನಡೆದುಕೊಳ್ಳಬೇಕು; ಆ ಮೂಲಕ, ಭೂಮಿಯನ್ನು ಋಜುತನದ ಸಾಮ್ರಾಜ್ಯವನ್ನಾಗಿ ಮಾಡಬೇಕು ಎಂದು ಅವನು ಬೋಧಿಸಿದನು.

ಈ ಅಂಶವೇ ಬುದ್ಧನ ಧರ್ಮವನ್ನು ಇತರ ಧರ್ಮಗಳಿಂದ ಪ್ರತ್ಯೇಕಿಸುತ್ತದೆ. ಆತನ ಧರ್ಮ ಪಂಚಶೀಲ, ಅಷ್ಟಾಂಗಮಾರ್ಗ ಮತ್ತು ಪರಿಮಿತತೆಗಳಿಗೆ ಒತ್ತು ಕೊಡುತ್ತದೆ. ಬುದ್ಧ ಏಕೆ ಇವುಗಳನ್ನು ತನ್ನ ಧರ್ಮದ ಆಧಾರವನ್ನಾಗಿ ಮಾಡಿದನೆಂದರೆ, ಅವು ಮಾತ್ರ ಮನುಷ್ಯನನ್ನು ಋಜು ಜೀವನವಿಧಾನದತ್ತ ಕರೆದೊಯ್ದು ಋಜುತನದ ಸಾಮ್ರಾಜ್ಯವನ್ನು ಸ್ಥಾಪಿಸುತ್ತವೆ ಎಂದು ಅವನು ತಿಳಿದಿದ್ದ.

ಮನುಷ್ಯರ ಸಂಕಟವು, ಮನುಷ್ಯರು ಮನುಷ್ಯರಿಗೆ ಮಾಡುವ ಅನ್ಯಾಯದ ಫಲವಾಗಿದೆ. ಋಜುತನ ಮಾತ್ರವೇ ಈ ಅನ್ಯಾಯವನ್ನು ಮತ್ತು ಅದರ ಫಲವಾದ ಸಂಕಟವನ್ನು ನಿರ್ಮೂಲನೆ ಮಾಡಬಲ್ಲದು. ಆದ್ದರಿಂದಲೇ ಆತನು 'ಕೇವಲ ಧರ್ಮ ಬೋಧನೆ ಸಾಲದು; ಋಜು ನಡತೆಯ ಸರ್ವೋಚ್ಚ ಅನಿವಾರ್ಯತೆಯನ್ನು ಜನರ ಮನಸ್ಸಿನಲ್ಲಿ ನಾಟಿಸಬೇಕು' ಎಂದು ನುಡಿದನು. ಋಜುತನವನ್ನು ಒತ್ತಿಹೇಳುವ ಉದ್ದೇಶದಿಂದಲೇ ಧರ್ಮಕ್ಕೆ ಇತರ ಕರ್ತವ್ಯಗಳಿವೆ ಎಂದು ಹೇಳಿದನು. ಯಾವುದು ಋಜು ಎಂಬುದನ್ನು ತಿಳಿಯುವಂತೆ ಮತ್ತು ಋಜುಮಾರ್ಗ ಅನುಸರಿಸುವಂತೆ ಧರ್ಮವು ಬೋಧಿಸಬೇಕು ಎಂದು ಆತ ತಿಳಿಸಿದನು.

ಪ್ರಾರ್ಥನೆ ಸಲ್ಲಿಸುವಿಕೆ, ಶಾಸ್ತ್ರಾಚರಣೆ ಅಥವಾ ಯಜ್ಞ ಮಾಡುವಿಕೆಗಿಂತ ಮನುಷ್ಯನ ಪ್ರವೃತ್ತಿಗಳಿಗೆ ಮತ್ತು ಸ್ವಭಾವಗಳಿಗೆ ತರಬೇತಿ ಕೊಡುವುದು ಮುಖ್ಯ ಎಂದು ಬುದ್ಧ ಭಾವಿಸಿದ್ದ. ಮನುಷ್ಯರ ಸ್ವಭಾವದ ತರಬೇತಿಗೆ ಸಮನಾಗಿ ಮನಸ್ಸಿನ ತರಬೇತಿಗೆ ಆತ ಪ್ರಥಮ ಸ್ಥಾನ ಕೊಟ್ಟನು. ಮನುಷ್ಯರು ಏಕಾಂಗಿಗಳಾಗಿಯಾದರೂ, ಋಜುವಾದದ್ದರ ಪರ ನಿಲ್ಲುವ ಧೈರ್ಯ ತೋರುವುದು ಮುಖ್ಯ ಎಂದು ಆತನು ಹೇಳಿದನು. ಈ ಅಂಶವನ್ನು ಸಲ್ಲೇಖ ಸುತ್ತದಲ್ಲಿ ಬುದ್ಧ ಹೀಗೆ ದೃಢಪಡಿಸಿಕೊಳ್ಳಲು ಪ್ರತಿಯೊಬ್ಬರಿಗೂ ಬೋಧಿಸಿದ್ದಾನೆ.

'ಇತರರು ತೊಂದರೆ ಮಾಡಿದರೂ ನಾನು ತೊಂದರೆ ಮಾಡುವುದಿಲ್ಲ.' 'ಇತರರು ಕೊಲೆ ಮಾಡಿದರೂ ನಾನು ಕೊಲೆ ಮಾಡುವುದಿಲ್ಲ.' 'ಇತರರು ಕಳವು ಮಾಡಿದರೂ ನಾನು ಕಳವು ಮಾಡುವುದಿಲ್ಲ.' 'ಇತರರು ಉನ್ನತ ಜೀವನ ನಡೆಸದಿದ್ದರೂ ನಾನು ಉನ್ನತ ಜೀವನ ನಡೆಸುತ್ತೇನೆ.' 'ಇತರರು ಸುಳ್ಳು, ನಿಂದೆ, ಚಾಡಿ ಅಥವಾ ಹರಟೆಯಲ್ಲಿ ತಲ್ಲೀನರಾದರೂ, ನಾನು ಇವುಗಳಲ್ಲಿ ತಲ್ಲೀನನಾಗುವುದಿಲ್ಲ.' 'ಇತರರು ದುರಾಸೆಯವರಾದರೂ, ನಾನು ದುರಾಸೆ ಪಡುವುದಿಲ್ಲ.' 'ಇತರರು ಹಾನಿಕಾರಿಗಳಾದರೂ, ನಾನು ಹಾನಿಕಾರಿಯಾಗುವುದಿಲ್ಲ.' 'ಇತರರು ತಪ್ಪು ದೃಷ್ಟಿ, ತಪ್ಪು ಉದ್ದೇಶ, ತಪ್ಪು ನುಡಿ, ತಪ್ಪು ಕೆಲಸ, ತಪ್ಪು ಏಕಾಗ್ರತೆ ತೋರಿದರೂ, ನಾನು ಅಷ್ಟಾಂಗಮಾರ್ಗದ ಋಜು ದೃಷ್ಟಿ, ಋಜು ಉದ್ದೇಶ, ಋಜು ನುಡಿ, ಋಜು ಕೆಲಸ, ಋಜು ಜೀವನ ವಿಧಾನ, ಋಜು ಪ್ರಯತ್ನ, ಋಜು ಆಲೋಚನೆ, ಋಜು ಏಕಾಗ್ರತೆಯನ್ನು ಅನುಸರಿಸುತ್ತೇನೆ' 'ಇತರರು ಆಲಸಿಗಳಾದರೂ, ನಾನು ಆಲಸಿಯಾಗುವುದಿಲ್ಲ.' 'ಇತರರು ದುರಹಂಕಾರಿಗಳಾದರೂ, ನಾನು ದುರಹಂಕಾರಿಯಾಗುವುದಿಲ್ಲ.' 'ಇತರರು ಸಂಶಯ ಸ್ವಭಾವದವರಾದರೂ, ನಾನು ಸಂಶಯ ಸ್ವಭಾವದವನಾಗುವುದಿಲ್ಲ.' 'ಇತರರು ಕೋಪ, ದ್ವೇಷ, ಅಸೂಯೆ, ಅನುಮಾನ, ಕೃಪಣತೆ, ದುರಾಸೆ, ಬೂಟಾಟಿಕೆ, ಮೋಸ, ಮೊಂಡುತನ, ದುರಹಂಕಾರ, ದುಷ್ಟ ಸಹವಾಸ, ಆಲಸ್ಯ, ಅಪನಂಬಿಕೆ, ನಿರ್ಲಜ್ಜೆ, ಹೇಸದಿರುವಿಕೆ, ತಿಳುವಳಿಕೆಯ ಅಭಾವ, ಜಡತೆ, ದಿಗ್ಭ್ರಮೆ, ಅವಿವೇಕಗಳನ್ನು ತುಂಬಿಕೊಂಡಿದ್ದರೂ, ನಾನು ಇವುಗಳನ್ನು ತುಂಬಿಕೊಳ್ಳುವುದಿಲ್ಲ.' 'ಇತರರು ಕೇವಲ ಪ್ರಾಪಂಚಿಕತೆಗೆ ಅಂಟಿಕೊಂಡರೂ, ನಾನು ಪ್ರಾಪಂಚಿಕತೆಗೆ ಅಂಟಿಕೊಂಡಿರುವುದಿಲ್ಲ.' 'ಕೆಲಸ ಮತ್ತು ನುಡಿಯ ಬಗ್ಗೆ ಹೇಳುವ, ಪ್ರಜ್ಞೆಯ ಋಜುಸ್ಥಿತಿಯನ್ನು ಬೆಳೆಸುವ ಸಂಕಲ್ಪ ಹೆಚ್ಚು ಪ್ರಭಾವಶಾಲಿಯಾದುದು' ಎಂದು ಬುದ್ಧನು ವಿವರಿಸಿದ್ದಾನೆ.

## ವಿದ್ಯೆಯನ್ನು ಎಲ್ಲರಿಗೂ ತೆರೆದಿಡುವುದು

ವಿದ್ಯೆಯನ್ನು ಎಲ್ಲರಿಗೂ ತೆರೆದಿಟ್ಟಾಗ ಧರ್ಮ ಸದ್ಧರ್ಮವಾಗುತ್ತದೆ. ಬ್ರಾಹ್ಮಣ ಸಿದ್ಧಾಂತವು ಜ್ಞಾನ ಗಳಿಕೆಯನ್ನು ಎಲ್ಲರಿಗೂ ಕೊಡಬಾರದೆಂದು ನಿರ್ದೇಶಿಸಿತು. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಈ ಮೂರು ವರ್ಣಗಳ ಪುರುಷರಿಗೆ ಮಾತ್ರ ಜ್ಞಾನ ಗಳಿಕೆಗೆ ಅವಕಾಶ ನೀಡಲಾಯಿತು. ಈ ವರ್ಣಗಳ ಸ್ತ್ರೀಯರಿಗೆ, ಮತ್ತು ಶೂದ್ರ ವರ್ಣದ ಸ್ತ್ರೀ–ಪುರುಷರಿಗೆ, ಅಕ್ಷರಜ್ಞಾನವನ್ನು ಮತ್ತು ಜ್ಞಾನಗಳಿಕೆಯನ್ನು ನಿಷೇಧಿಸಲಾಗಿತ್ತು.

ಬ್ರಾಹ್ಮಣರ ಈ ಘೋರ ಸಿದ್ಧಾಂತದ ವಿರುದ್ಧ ಬುದ್ಧನು ದಂಗೆ ಎದ್ದನು. ಎಲ್ಲಾ ವರ್ಣಗಳ ಸ್ತ್ರೀ–ಪುರುಷರಿಗೆ ಜ್ಞಾನದ ಮಾರ್ಗ ತೆರೆದಿಡಬೇಕೆಂದು

(೧೫ನೇ ಪುಟಕ್ಕೆ

# ಅಂಬೇಡ್ಕರ್ ಕಟೌಟ್ : ಆ ತೋರು ಬೆರಳ ಕಥೆ

ಯುವ ಲಹರಿ

–ಗೋವಿಂದರಾಜು ಎಂ. ಕಲ್ಲೂರು



**ಗಾ**ಂಧಿ ಪ್ರತಿಕೃತಿಗೆ ಗುಂಡಿಟ್ಟುಕೊಲ್ಲುವ, ಅಂಬೇಡ್ಕರರ ಪ್ರತಿಮೆಗಳನ್ನು ಉರುಳಿಸುವ, ಇವರ ಫೋಟೋಗಳಿಗೆ ಸಗಣಿ, ಮಸಿ ಬಳಿದು ಅಪಮಾನಿಸುವ ಕಾಲದಲ್ಲಿ ನಾವಿದ್ದೇವೆ. ಆದಾಗ್ಯೂ ದೇಶಾದ್ಯಂತ ನ್ಯಾಯದ ಪರವಾದ ಯಾವ ಹೋರಾಟವೇ ನಡೆದರೂ ಅದರ ಮುಂಚೂಣಿ ನಾಯಕರಾಗಿ, ನೊಂದವರ ಧ್ವನಿಯಾಗಿ, ಕರೆದರೂ ಕರೆಯದಿದ್ದರೂ ನಮ್ಮ ಜೊತೆಗೆ ಬಂದು ಧರಣಿ ಕೂರುವ ಇವರಿಬ್ಬರ ಫೋಟೋಗಳನ್ನು ಕಂಡಾಗಲೆಲ್ಲ ನನಗೆ ತೀವ್ರ ಅಚ್ಚರಿಯಾಗುತ್ತದೆ.

ಗಾಂಧಿ–ಅಂಬೇಡ್ಕರ್ ತಮ್ಮನ್ನು ತಾವು ಹೇಗೆ ಸಕಾಲಿಕಗೊಳಿಸಿಕೊಳ್ಳುತ್ತಾರೆ ಅಥವಾ ಹೇಗೆ ಸಕಾಲಿಕಗೊಳ್ಳುತ್ತಾರೆ ಎಂಬುದಕ್ಕೆ ಕೆಲವು ಘಟನೆಗಳನ್ನು ನೆನಪಿಸಿಕೊಳ್ಳುತ್ತೇನೆ. ಭಾರತದ ಬಹುತೇಕರಂತೆ ನಾವೂ ಸಹ ಗಾಂಧಿ–ಅಂಬೇಡ್ಕರರನ್ನು ಓದಿನಿಂದಾಗಲೀ, ಅಧ್ಯಯನ ಶಿಸ್ತಿನ ಒತ್ತಡದಿಂದಾಗಲೀ, ಪರೀಕ್ಷೆಯ ಭಯದಿಂದಾಗಲೀ ಅರಿತವರಲ್ಲ. ಇವರಿಬ್ಬರೂ ನಮಗೆ ರಾಮಾಯಣ, ಮಹಾಭಾರತಗಳಿದ್ದಂತೆ.

ಅಕ್ಷರ ಕಲಿಯುವುದಕ್ಕೂ ಮೊದಲು ಈರ್ವರ ಬಗ್ಗೆ ಪರವೋ, ವಿರೋಧವೋ ಓದಿದ್ದಕ್ಕಿಂತ ಕೇಳಿದ್ದೇ ಹೆಚ್ಚು. ನಮಗೆ ಗಾಂಧಿ–ಅಂಬೇಡ್ಕರ್ ಎಂದರೆ ಒಂದು ರೀತಿಯ ಹಾಡುಗಬ್ಬಗಳು. ಬಾಲ್ಯದಲ್ಲಿ ನಮ್ಮ ಅನೇಕರ ಮನೆಗಳಲ್ಲಿ ದೇವರ ಫೋಟೋಗಳ ಸಾಲಿನಲ್ಲಿ ಇರುತ್ತಿದ್ದ ಇವರ ಚಿತ್ರಗಳನ್ನು ನೋಡಿ ನಮಗೆ ಗಾಂಧಿ–ಅಂಬೇಡ್ಕರ್ ಸಹ ದೇವರಂತೆಯೇ ಕಂಡಿದ್ದಾರೆ.

ಸಣ್ಣಂದಿನ ದಿನಗಳಲ್ಲಿ ಗಾಂಧಿ–ಅಂಬೇಡ್ಕರ್ ಕುರಿತು ಭಾಷಣಗಳಲ್ಲಿ ಪ್ರತಿವರ್ಷವೂ ಕೇಳುತ್ತಿದ್ದ ಕೆಲವು ಪ್ರಧಾನ ಸಂಗತಿಗಳನ್ನು ಮಾತ್ರ ಇಲ್ಲಿ ಪ್ರಸ್ತಾಪಿಸುತ್ತೇನೆ. ಇವೆಲ್ಲವೂ ನಮ್ಮ ಮೇಷ್ಟ್ರುಗಳು ತರಗತಿಗಳಲ್ಲಿ ಹೇಳಿದ, ಅಲ್ಲಲ್ಲಿ ಭಾಷಣಗಳಲ್ಲಿ ಕೇಳಿದ ಸಂಗತಿಗಳು. ಇವರ ಕುರಿತು ಹಾಡುಗಳಿವೆ, ಕಥೆಗಳಿವೆ, ಕೊರಳಿಗೆ ತೊಡುವ ಡಾಲರ್, ಧರಿಸುವ ಬಟ್ಟೆ, ಸಿನಿಮಾ, ಚಿತ್ರಕಲೆ ಹೀಗೆ ಈ ಭಾರತದ ಅನೇಕ ವಸ್ತು–ಸ್ಥಳ–ಮನಸ್ಸುಗಳನ್ನು ಇವರು ಆವರಿಸಿಬಿಟ್ಟಿದ್ದಾರೆ. ಒಂದು ರೀತಿಯಲ್ಲಿ ಗಾಂಧಿ–ಅಂಬೇಡ್ಕರರು ಪಡೆದುಕೊಂಡ ಜಾನಪದ ರೂಪಾಂತರ ಇದು. ರಾಮ ಬಂದು ಹೋದ ಸ್ಥಳಗಳು ಇಂದಿಗೆ ಐತಿಹ್ಯಗಳಾಗಿರುವಂತೆ ಗಾಂಧಿ–ಅಂಬೇಡ್ಕರರು ಬಂದು ಹೋದ ಸ್ಥಳಗಳಿಗೂ ಒಂದೊಂದು ಐತಿಹ್ಯ ಸೃಷ್ಟಿಯಾಗಿದೆ. ಗಾಂಧಿ–ಅಂಬೇಡ್ಕರ್ ಕುರಿತ ಅನೇಕ ಕಥನಗಳು ಬಾಯಿಂದ ಬಾಯಿಗೆ ಹರಡಿ ಇವರುಗಳನ್ನು ಜಾನಪದವಾಗಿ ಗ್ರಹಿಸುವಂತೆಯೂ ಮಾಡಿವೆ.

ನಮಗೆ ಗಾಂಧಿಗಿಂತಲೂ ಮೊದಲು ಮತ್ತು ಹೆಚ್ಚು ಪರಿಚಿತವಿದ್ದ ಮುಖ ಅಂಬೇಡ್ಕರದ್ದು. ನಮ್ಮ ಹಟ್ಟಿಯ ಅಂಗನವಾಡಿಯಲ್ಲಿ ಒಂದು ದೊಡ್ಡ ಕಟೌಟ್ ಇತ್ತು. ಅದು ಸುಮಾರು ಹತ್ತು–ಹನ್ನೊಂದು ಅಡಿಯ ಆಸುಪಾಸಿನದ್ದಿರಬಹುದು. ಅದರಲ್ಲಿರುವ ಬೃಹತ್ ಆಕಾರದ ಮನುಷ್ಯನಿಗೆ ಹೆದರದ ನಮ್ಮ ಹಟ್ಟಿಯ ಮಕ್ಕಳೇ ಇರಲಿಲ್ಲ. ಅಂಗನವಾಡಿಯಲ್ಲಿ ಇಟ್ಟಿದ್ದ ದೊಡ್ಡ ಕಟೌಟನ್ನು ಪ್ರತಿವರ್ಷದ ಅಂಬೇಡ್ಕರರ ಜನ್ಮದಿನದಂದು ಮಾತ್ರ ಶುಚಿಗೊಳಿಸಿ, ಅಂದ ಕೆಡದಂತೆ ಬೊಟ್ಟಿಟ್ಟು ಅದರ ಉದ್ದಕ್ಕೂ ನಿಲ್ಲುವ ಹಾರಹಾಕಿ ಅಂಗನವಾಡಿಯ ಹೊರಗೆ ನಡೆಯುತ್ತಿದ್ದ ಕಾರ್ಯಕ್ರಮದ ಸ್ಥಳಕ್ಕೆ ತಂದು ವೇದಿಕೆಯ ಗೋಡೆಗೆ ಒರಗಿಸಿ ನಿಲ್ಲಿಸುತ್ತಿದ್ದರು. ದಿನಾಚರಣೆಯಲ್ಲಿ ಅಂಬೇಡ್ಕರರ ಕುರಿತು ಮಾತನಾಡಲು ಬರುತ್ತಿದ್ದ 'ದೊಡ್ಡವರು' ಅಂಬೇಡ್ಕರರನ್ನು 'ದಲಿತರ ಸೂರ್ಯ' ಎನ್ನುತ್ತಿದ್ದರೆ ಎಲ್ಲರೂ ಚಪ್ಪಾಳೆ ತಟ್ಟುತ್ತಿದ್ದೆವು. ಊರಿನ ಪಂಚಾಯ್ತಿಯವರನ್ನು ಬಿಟ್ಟರೆ ಉಳಿದ ಬೇರೆ ಜಾತಿಯ ಜನ ಹಟ್ಟಿಯೊಳಗೆ ಹೆಚ್ಚು ಸೇರುತ್ತಿರಲಿಲ್ಲ.

*****

ಶಾಲೆಗಳಲ್ಲಿಯೂ ಯಾವುದೇ ಜಯಂತಿಗಳು ಬಂದವೆಂದರೆ ನಮಗೆಲ್ಲ ಖುಷಿಯೋ ಖುಷಿ. ಅದು ಸಿಹಿಯ ಆಸೆಗೋ, ಅರ್ಧ ದಿನದ ರಜೆಯ ಆಸೆಗೋ, ಊರು ಸುತ್ತಾ ಮೆರವಣಿಗೆ ಹೋಗುವ ಕಾರಣಕ್ಕೋ ಇರಬಹುದು. ಪ್ರತಿವರ್ಷವೂ ಗಾಂಧಿ ಜಯಂತಿಯಂದು ನಮ್ಮ ಸರ್ಕಾರಿ ಶಾಲೆಯ ಐದಾರು ಮಕ್ಕಳು ಗಾಂಧೀ ತಾತನಂತೆ ವೇಷ ಹಾಕಿಕೊಂಡು ಹಿರಿಯರ ಹಳೇ ಕನ್ನಡಕದ ಗಾಜನ್ನು ಮೆಲ್ಲಗೆ ಬಿಡಿಸಿ ಬರೀ ಫ್ರೇಮ್‌ನ ಕನ್ನಡಕ, ಯಾವುದಾದರೂ ಎರಡು ಬಿಳಿಯ ಪಂಚೆ

**ಅಂಗನವಾಡಿಯಲ್ಲಿ ಯಾರಾದರೂ ಮಕ್ಕಳು ಗಲಾಟೆ ಮಾಡಿದರೆ ಎಡ ಕೈಯಲಿ ಸಂವಿಧಾನದ ಪ್ರತಿ ಹಿಡಿದು ಬಲಗೈ ಮೇಲೆತ್ತಿ ನಿಂತಿದ್ದ ಅಂಬೇಡ್ಕರರ ಆ ಕಟೌಟ್ ತೋರಿಸಿ ಅವರನ್ನು ಅಂಬೇಡ್ಕರನಿಗೆ ಹಿಡಿದುಕೊಡುತ್ತೇನೆ ಎಂದು ಅಲ್ಲಿನ ಮೇಡಂ ಹೆದರಿಸುತ್ತಿದ್ದರು. ಊಟ ತಿನ್ನಲು, ಅಂಗನವಾಡಿಗೆ ಹೋಗಲು ಹಠ ಮಾಡುವ ನಮ್ಮ ಕೇರಿಯ ಮಕ್ಕಳಿಗೆಲ್ಲ ಇದ್ದದ್ದು ಅಂಬೇಡ್ಕರ್ ಭಯ**

ಧರಿಸಿ, ಉದ್ದಕೋಲೊಂದನ್ನು ಹಿಡಿದು ಬರುತ್ತಿದ್ದರೆ ಎಲ್ಲರೂ ಬೆರಗುಗಣ್ಣುಗಳಿಂದ ನೋಡುತ್ತಿದ್ದೆವು. ಗಾಂಧಿ ಜಯಂತಿಯಂದು ಗಾಂಧಿ ವೇಷ ಹಾಕಿ ಬಂದ ಮಕ್ಕಳನ್ನು ಅಂದು ವೇದಿಕೆಯ ಮುಂಭಾಗ ಸಾಲಾಗಿ ಕೂರಿಸಿ ಇಡೀ ಕಾರ್ಯಕ್ರಮ ಮಾಡುತ್ತಿದ್ದರು. ಗಾಂಧಿ ವೇಷಧಾರಿಗಳಿಗೆ ಅಂದು ಒಂದು ಹಿಡಿ ಹೆಚ್ಚಿಗೆ ಬೂಂದಿಯೂ ಸಿಗುತ್ತಿತ್ತು. ಸುಭಾಷ್ ಚಂದ್ರ ಬೋಸರ ದಿನಾಚರಣೆಯಲ್ಲಿಯೂ ಅಷ್ಟೆ. ಬೋಸರ ವೇಷ ತೊಟ್ಟ ಹತ್ತಾರು ಹುಡುಗರು ಇರುತ್ತಿದ್ದರು. ಸುಭಾಷರ ವೇಷತೊಟ್ಟ ನಮ್ಮ ಗೆಳೆಯರ ಬಳಿಹೋಗಿ ಆ ಪೋಲಿಸಿನಂತಹ ಬಟ್ಟೆ, ಟೋಪಿ, ಶೂ, ಲಾಠಿಗಳನ್ನು ಮುಟ್ಟಿ ಸಂತಸ ಪಡುತ್ತಿದ್ದೆವು. ಆದರೆ ನನ್ನ ಶಾಲೆಯ ದಿನಗಳಲ್ಲಿ ಅಂಬೇಡ್ಕರರ ವೇಷ ತೊಟ್ಟ ಒಬ್ಬರನ್ನೂ ಕಾಣಲಿಲ್ಲ.!

*****

ಅಂಗನವಾಡಿಯಲ್ಲಿ ಯಾರಾದರೂ ಮಕ್ಕಳು ಗಲಾಟೆ ಮಾಡಿದರೆ ಎಡ ಕೈಯಲಿ ಸಂವಿಧಾನದ ಪ್ರತಿ ಹಿಡಿದು ಬಲಗೈ ಮೇಲೆತ್ತಿ ನಿಂತಿದ್ದ ಅಂಬೇಡ್ಕರರ ಆ ಕಟೌಟ್ ತೋರಿಸಿ ಅವರನ್ನು ಅಂಬೇಡ್ಕರನಿಗೆ ಹಿಡಿದುಕೊಡುತ್ತೇನೆ ಎಂದು ಅಲ್ಲಿನ ಮೇಡಂ ಹೆದರಿಸುತ್ತಿದ್ದರು. ಊಟ ತಿನ್ನಲು, ಅಂಗನವಾಡಿಗೆ ಹೋಗಲು ಹಠಮಾಡುವ ನಮ್ಮ ಕೇರಿಯ ಮಕ್ಕಳಿಗೆಲ್ಲ ಇದ್ದದ್ದು ಅಂಬೇಡ್ಕರ್ ಭಯ. ಯಾಕೆಂದರೆ ನಾವ್ಯಾರೂ ಅಲ್ಲಿಯವರೆಗೆ ಅಷ್ಟು ದೊಡ್ಡ ಮನುಷ್ಯ ಆಕೃತಿಯನ್ನು ನೋಡಿದ್ದು ಸಿನಿಮಾಗಳಲ್ಲಷ್ಟೆ. ಅದೂ ರಾಮಾಯಣದಲ್ಲಿ ಬರುವ ಕುಂಭಕರ್ಣ, ಸಮುದ್ರವನ್ನು ಹಾರುವಾಗ ಬೆಳೆದು ನಿಲ್ಲುವ ಹನುಮಂತರ ಪಾತ್ರಗಳ ಮೂಲಕ ಮಾತ್ರ. ಬಬ್ರುವಾಹನ ಸಿನಿಮಾದಲ್ಲಿ ಘಟೋತ್ಕಜ ಅರ್ಜುನನನ್ನು ನಾಗಲೋಕದಿಂದ ಅಂಗೈಮೇಲೆ ಎತ್ತಿತಂದು ಕೃಷ್ಣನ ಬಳಿಗೆ ಬಿಡುವಂತೆ ಈ ಅಂಬೇಡ್ಕರ್ ಕಟೌಟ್ ಊಟ ಮಾಡದೆ ಮಲಗುವ ಮಕ್ಕಳನ್ನು ಮನೆಯ ಸಮೇತ ಎಲ್ಲಿಗಾದರೂ ಎತ್ತಿಕೊಂಡು ಹೋಗಿ ಬಿಸಾಕಿ ಬಂದರೆ ನಮ್ಮ ಗತಿ ಏನು? ಎಂದು ಕಲ್ಪಿಸಿಕೊಳ್ಳುತ್ತಿದ್ದೆವು. ಕೊರಗುತ್ತಿದ್ದೆವು. ನನ್ನ ಬಾಲ್ಯಮಿತ್ರ ರಾಜು "ಅಂಬೆಟಿಗಾರು ಹೊಡೀತಾನೆ, ನಾ ಸಿಸುವಾರಕ್ಕೆ ಹೋಗಲ್ಲ ಕಣ್ರೀ" ಎಂದು ಕೇರಿಯ ಜನರೆಲ್ಲ ಮರುಗುವಂತೆ ಅಮ್ಮ–ಅಕ್ಕನ ವಿರುದ್ಧ ಉಗ್ರ ಹೋರಾಟ ಮಾಡುತ್ತಿದ್ದ. ಇಂತಹ ಯಾವ ಹೋರಾಟಗಳಿಗೂ ಜಗ್ಗದ ನಮ್ಮ ಕೇರಿಯ ಕೆಲವು ತಾಯಂದಿರು ಮಕ್ಕಳನ್ನು ತಂದು ಅಂಗನವಾಡಿಗೆ ಬ್ಯಾಗ್ ರೀತಿ ಎಸೆದು ತಮ್ಮ ಕೆಲಸಗಳಿಗೆ ಹೋಗುತ್ತಿದ್ದರು. ಅವರು ಬಿಟ್ಟುಹೋದರೆಂದು ಅಳುತ್ತಾ ಆ ಕಟೌಟ್ ನೋಡುತ್ತಿದ್ದ ನಮಗೆಲ್ಲ ಅಂಬೇಡ್ಕರ್ ನಮ್ಮನ್ನು ಹೊಡೆಯಲು ಕೈ ಎತ್ತಿ ನಿಂತಂತೆ ಕಾಣುತ್ತಿತ್ತು.

*****

ಈಗ ಊರಿನ ಅಂಗನವಾಡಿಯಲ್ಲಿ ಆ ಕಟೌಟ್ ಇಲ್ಲ. ಅದು ಏನಾಯಿತು ಎಂಬುದೂ ತಿಳಿದಿಲ್ಲ. ಸ್ನಾತಕೋತ್ತರ ಶಿಕ್ಷಣಕ್ಕೆಂದು ವಿಶ್ವವಿದ್ಯಾನಿಲಯಕ್ಕೆ ಬಂದಾಗ ಅದೇ ಅಂಬೇಡ್ಕರ್ ಕಟೌಟ್ ಹೆಚ್ಚು–ಹೆಚ್ಚು ಕಾಡತೊಡಗಿತು. ನನಗೆ ಅಂಬೇಡ್ಕರ್ ಎಂದರೆ ಈಗಲೂ ನೆನಪಾಗುವುದು ಅದೇ ಕಟೌಟ್. ಆದರೆ ಅಂದು ಮಕ್ಕಳನ್ನು ಹೊಡೆಯಲು ಎತ್ತಿದಂತೆ ಕಾಣುತ್ತಿದ್ದ ಕೈ ಈಗ ನಮಗೆ ಯಾವುದೋ ಬೆಳಕಿನ ಕಡೆಗೆ ನಡೆಯಲು ದಾರಿ ತೋರಲು ಚಾಚಿದ ಕೈಯಾಗಿ ಕಾಣುತ್ತಿದೆ. ಭಾರತದ ಅಸಂಖ್ಯ ಜನರ ಸಂಕಟಗಳ ಕುರಿತು ಮಾತನಾಡಲು ಅವಕಾಶಕ್ಕಾಗಿ ಈ ವಿಶ್ವದ ಎದುರಿಗೆ ವಿಶ್ವದ ಪ್ರತಿನಿಧಿಯೊಬ್ಬ ಎತ್ತಿದ ಕೈಯಂತೆ ಕಾಣುತ್ತಿದೆ.



**(ಲೇಖಕ ಗೋವಿಂದರಾಜು ತುಮಕೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಲ್ಲಿ 'ನಾಡು ನುಡಿಯ ರೂಪಕ: ಡಾ. ರಾಜಕುಮಾರ್ ಸಿನಿಮಾ' ವಿಷಯ ಕುರಿತಂತೆ ಅಧ್ಯಯನ ನಡೆಸುತ್ತಿರುವ ಸಂಶೋಧನಾ ವಿದ್ಯಾರ್ಥಿಯಾಗಿದ್ದಾರೆ)**

ಪ್ರಚಲಿತ-೧

# ಕರೋನಾ ಮಹಾಮಾರಿಯಿಂದ ಕಲಿಯಬಹುದಾದ ಪಾಠಗಳು

–ಪ್ರಭಾತ್ ಪಟ್ನಾಯಕ್



**ಕೋವಿಡ್-೧೯ ಸಾಂಕ್ರಾಮಿಕವು ಜಗತ್ತಿನಾದ್ಯಂತ, ನಿರ್ದಿಷ್ಟವಾಗಿ ಭಾರತದಲ್ಲಿ ಉಂಟು ಮಾಡಿರುವ ಅನಾಹುತ, ಕೇವಲ ಆರೋಗ್ಯ ಪಾಲನೆಯ ಸವಾಲಿಗೆ ಸಂಬಂಧಿಸಿದ್ದಲ್ಲ. ಈ ವೈರಾಣು ಉದಿಸಿ ಹರಡತೊಡಗಿದ ಚೀನಾ, ಜಗತ್ತಿನ ಅತಿ ವೇಗವಾಗಿ ಬೆಳೆಯುತ್ತಿದ್ದ ಮತ್ತು ಅತಿ ದೊಡ್ಡ ಆರ್ಥಿಕತೆಗಳಲ್ಲೊಂದಾಗಿ ಜಗತ್ತಿನ ಆರ್ಥಿಕತೆಯ ಆಧಾರ ಸ್ತಂಭಗಳಲ್ಲಿ ಒಂದಾಗಿದ್ದುದರಿಂದ, ಅದರ ಆರ್ಥಿಕ ಪರಿಣಾಮಗಳು ಶ್ರೀಸಾಮಾನ್ಯನ ಬದುಕಿನ ಹಲವು ಸ್ತರಗಳಲ್ಲಿ ಕಾಣತೊಡಗಲಿದೆ. ಜಗತ್ತು ಇಂದು ಅಳವಡಿಸಿಕೊಂಡಿರುವ ನವ ಉದಾರೀಕರಣದ ಆರ್ಥಿಕ ನೀತಿಯ ಹಿನ್ನೆಲೆಯಲ್ಲಿ ಭಾರತ ಎದುರಿಸಬಹುದಾದ ಸಮಸ್ಯೆಗಳನ್ನು ಮತ್ತು ಅವುಗಳ ಸಾಧ್ಯ ಪರಿಹಾರಗಳನ್ನೂ ಈ ಲೇಖನದಲ್ಲಿ ಚರ್ಚಿಸಲಾಗಿದೆ.-ಸಂ.**

ನೂರು ವರ್ಷಗಳ ಹಿಂದೆ ಜಗತ್ತನ್ನು ಆವರಿಸಿಕೊಂಡಿದ್ದ ಸ್ಪಾನಿಷ್ ಫ್ಲೂ ಬಲಿತೆಗೆದುಕೊಂಡ ಸಂಖ್ಯೆಗೆ ಹೋಲಿಸಿದರೆ ಈಗ ಕರೋನ ವೈರಾಣುವಿನಿಂದ ಸತ್ತವರ ಸಂಖ್ಯೆ ಕಡಿಮೆ ಇರಬಹುದು. ಆಗ ಅದು ಜಗತ್ತಿನಾದ್ಯಂತ ೫೦೦ ಮಿಲಿಯನ್ ಜನರಿಗೆ ತಗುಲಿತ್ತು. ಅಂದರೆ ಆಗಿನ ಜಗತ್ತಿನ ಜನಸಂಖ್ಯೆಯ ಶೇಕಡ ೨೭ರಷ್ಟು ಜನ ಅದರಿಂದ ತೊಂದರೆಗೊಳಗಾಗಿದ್ದರು. ಅವರಲ್ಲಿ ಸುಮಾರಿಗೆ ಶೇಕಡ ೧೦ರಷ್ಟು ಜನ ಸತ್ತಿದ್ದರು (ಈ ಸಂಖ್ಯೆಯ ಬಗ್ಗೆ ವಿಭಿನ್ನ ಅಂದಾಜುಗಳಿವೆ. ಇದು ಒಂದು ಸರಾಸರಿ). ಭಾರತದಲ್ಲೇ ೧೭ ಮಿಲಿಯನ್ನಷ್ಟು ಜನ ಇದರಿಂದ ಪ್ರಾಣಕಳೆದುಕೊಂಡಿದ್ದರು. ಅದಕ್ಕೆ ವ್ಯತಿರಿಕ್ತವಾಗಿ ಕರೋನಾ ವೈರಾಣುವಿನಿಂದ ಜಗತ್ತಿನಾದ್ಯಂತ ಪೀಡಿತರಾದವರ ಸಂಖ್ಯೆ ಸಧ್ಯಕ್ಕೆ ಎರಡು ಲಕ್ಷ ಮೀರಿಲ್ಲ. ಸೋಂಕಿತರಲ್ಲಿ ಪ್ರಾಣ ಕಳೆದುಕೊಂಡವರ ಸಂಖ್ಯೆ ಸುಮಾರು ಶೇಕಡ ಮೂರು. ಈ ಮಹಾಮಾರಿ ಮುಂದೆ ಯಾವ ಹಾದಿಯಲ್ಲಿ ಸಾಗುತ್ತದೆ ಎಂಬುದು ಸ್ಪಷ್ಟವಿಲ್ಲ. ಈ ಸಾಂಕ್ರಮಿಕ ಖಾಯಿಲೆಗಳೇ ಹಾಗೆ, ವಿಚಿತ್ರವಾಗಿ ನಡೆದುಕೊಳ್ಳುತ್ತವೆ. ೧೯೧೮ರಲ್ಲಿ ಬಂದಿದ್ದ ಸ್ಪಾನಿಷ್ ಜ್ವರ ಹೋಯಿತು ಅಂದುಕೊಳ್ಳುತ್ತಿದ್ದ ಹಾಗೆ, ಮತ್ತೆ ಎರಡನೇ ಬಾರಿ ತೀರಾ ತೀವ್ರವಾಗಿ ಎರಗಿತು. ಕೆಲವೇ ದಿನಗಳಲ್ಲಿ ಮತ್ತೆ ಹೊರಟು ಹೋಯಿತು. ಈಗಿನ ಕರೋನಾ ಕೂಡ ಹಾಗೆ. ಊಹಿಸುವುದಕ್ಕೆ ಸಾಧ್ಯವಿಲ್ಲ.

ಆದರೆ ಅದರಿಂದ ನಾವು ಕಲಿಯಬೇಕಾದ ಮೂಲಭೂತ ಪಾಠ ಈಗಾಗಲೇ ಸ್ಪಷ್ಟವಾಗಿದೆ. ಅದು ಬೇಗ ಹೋಗಿಬಿಟ್ಟರೆ ಪರವಾಗಿಲ್ಲ. ನಾವು ತೆರಬೇಕಾದ ಬೆಲೆ ಕಡಿಮೆಯಾಗಬಹುದು. ಆದರೆ ಧೀರ್ಘ ಕಾಲ ಉಳಿದುಬಿಟ್ಟರೆ ಅದರ ಪರಿಣಾಮ ಘೋರವಾಗಿರಬಹುದು. ಹಿಂದೆಯೇ ನಾವು ಪಾಠ ಕಲಿತಿದ್ದರೆ ಹೀಗಾಗುತ್ತಿರಲಿಲ್ಲ. ವಿಶೇಷವಾಗಿ ಅದು ನಮಗೆ ಎರಡು ಬಹು ಮುಖ್ಯ ಪಾಠಗಳನ್ನು ಕಲಿಸಿದೆ.

ಮೊದಲನೆಯದು ದೇಶದಲ್ಲಿ ಉತ್ತಮ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಬೇಕು. ಅದು ಇಡೀ ದೇಶದ ಜನರಿಗೆ ದೊರಕುವಂತಿರಬೇಕು. ಭಾರತದಲ್ಲಿ ಇಲ್ಲಿಯವರೆಗೆ ಕೇವಲ ೧೪೦ ಪ್ರಕರಣಗಳು ಮಾತ್ರ ಕಾಣಿಸಿಕೊಂಡಿವೆ. ಇರುವ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲೇ ಒಂದಿಷ್ಟು ವಿಶೇಷ ವ್ಯವಸ್ಥೆಯನ್ನು ಮಾಡಿಕೊಂಡು ಚಿಕಿತ್ಸೆ ಮಾಡಬಹುದು. ಹಾಗೆಯೇ ಸೋಂಕಿನ ಪರೀಕ್ಷೆ ಮಾಡಿರುವ ಸಂಖ್ಯೆಯೂ ಕಡಿಮೆ ಇರುವುದರಿಂದ ಲಭ್ಯವಿರುವ ಸಾರ್ವಜನಿಕ ವ್ಯವಸ್ಥೆಯಲ್ಲಿ ಅಂತಹ ಕಷ್ಟವಿಲ್ಲದೆ ಪರೀಕ್ಷೆಗೆ ವ್ಯವಸ್ಥೆ ಮಾಡಬಹುದು. ಆದರೆ ಹೀಗೆ ಪರೀಕ್ಷೆ ಮಾಡಬೇಕಾದವರ ಹಾಗೂ ಸೋಂಕಿಗೆ ಒಳಗಾದವರ ಸಂಖ್ಯೆ ಹೆಚ್ಚಾದರೆ ಈಗಿರುವ ಸಾರ್ವಜನಿಕ ಆರೋಗ್ಯ ಸೌಲಭ್ಯಗಳು ಸಾಲುವುದಿಲ್ಲ. ಖಾಸಗೀ ಆಸ್ಪತ್ರೆಗಳು ದುಬಾರಿ ಹಣ ಪಡೆಯದೆ ಪರೀಕ್ಷೆಯನ್ನಾಗಲಿ, ಚಿಕಿತ್ಸೆಯನ್ನಾಗಲಿ ಮಾಡುವುದಿಲ್ಲ. ಹಾಗಾಗಿ ಹೆಚ್ಚಿನ ರೋಗಿಗಳು ನರಳಬೇಕಾಗುತ್ತದೆ. ಬಡವರನ್ನು ಇದು ತೀವ್ರವಾಗಿ ಬಾಧಿಸುತ್ತದೆ.

ಸರ್ಕಾರ ಈಗಿನ ತುರ್ತುಪರಿಸ್ಥಿತಿಯ ಹಿನ್ನಲೆಯಲ್ಲಿ ರೋಗಿಗಳನ್ನು ಪರೀಕ್ಷಿಸಲು ಹಾಗೂ ಚಿಕಿತ್ಸೆ ನೀಡಲು ಖಾಸಗೀ ಆಸ್ಪತ್ರೆಗಳನ್ನು ಒತ್ತಾಯಿಸಿದರೆ ಪರಿಸ್ಥಿತಿ ಬೇರೆಯಾಗಬಹುದು. ಆದರೆ ಅದರ ಸಾಧ್ಯತೆ ಕಡಿಮೆ. ಈವರೆಗಿನ ಭಾರತದ ಪರಿಸ್ಥಿತಿಯನ್ನು ನೋಡಿದರೆ ಖಾಸಗೀ ಆಸ್ಪತ್ರೆಗಳು ತುರ್ತಾಗಿ ಸೇರಲೇಬೇಕಾಗಿ ಬಂದ ಪ್ರಕರಣಗಳನ್ನು ದಾಖಲು ಮಾಡಿಕೊಂಡು ಚಿಕಿತ್ಸೆ ನೀಡುವ ಸಾಧ್ಯತೆ ಇಲ್ಲ. ದಿಢೀರನೆ ಹೃದಯಾಘಾತವಾದವರನ್ನೋ, ಅಪಘಾತಕ್ಕೆ ಒಳಗಾದವರನ್ನೋ, ಹೀಗೆ 'ಆಯ್ಕೆಯಿಲ್ಲದೆ' ಬಂದವರನ್ನು ಹಣ ಕಟ್ಟದೆ ಸೇರಿಸಿಕೊಳ್ಳುವ ಯಾವ ನೀತಿಯೂ ಇಲ್ಲ. ಸಂಪೂರ್ಣವಾಗಿ ಮಾರುಕಟ್ಟೆಯ ಆರ್ಥಿಕತೆಯನ್ನು ಅನುಸರಿಸುವ ಅಮೇರಿಕೆಯಲ್ಲಿ ಹಲವು ರಾಜ್ಯಗಳಲ್ಲಿ ಅಂತಹ ಅವಕಾಶಗಳು ಇವೆ. ತುರ್ತು ಚಿಕಿತ್ಸೆ ಬೇಕಾದಾಗ ಪ್ರಮುಖ ಸರ್ಜರಿಯೂ ಸೇರಿದಂತೆ ಚಿಕಿತ್ಸೆ ಮಾಡಲಾಗುತ್ತದೆ. ವಿಮಾ ಸೌಲಭ್ಯವಿಲ್ಲದಿದ್ದಾಗಲೂ ಪುಕ್ಕಟೆಯಾಗಿ ಚಿಕಿತ್ಸೆ ನೀಡಲಾಗುತ್ತದೆ. ಆದರೆ ಭಾರತದಲ್ಲಿ ಅಂತಹ ಆಕಸ್ಮಿಕ ಸಂದರ್ಭದಲ್ಲೂ ಚಿಕಿತ್ಸೆ ನೀಡಬೇಕಾದ ಯಾವ ಒತ್ತಾಯವೂ ಖಾಸಗಿ ಆಸ್ಪತ್ರೆಗಳಿಗೆ ಇಲ್ಲ. ಅವುಗಳು ರಿಯಾಯತಿ ದರದಲ್ಲಿ ಭೂಮಿ ಹಾಗೂ ಇತರ ಹಲವು ಅನುಕೂಲಗಳನ್ನು ಸರ್ಕಾರದಿಂದ ಪಡೆದುಕೊಂಡಿರುತ್ತವೆ. ಆದರೂ ಅಲ್ಲಿ ಅಂತಹ ಪ್ರಕರಣಗಳಲ್ಲಿ ಪುಕ್ಕಟೆಯಾಗಿ ಚಿಕಿತ್ಸೆ ದೊರಕುವುದಿಲ್ಲ.

ನಮ್ಮ ಆರೋಗ್ಯ ವ್ಯವಸ್ಥೆಯಲ್ಲಿ ದಿನದಿಂದ ದಿನಕ್ಕೆ ಖಾಸಗೀ ಕ್ಷೇತ್ರದ ಮೇಲೆ ಅವಲಂಬನೆ ಕ್ರಮೇಣ ಹೆಚ್ಚುತ್ತಿದೆ. ಹಾಗಾಗಿ ಇಂತಹ ಸಾಂಕ್ರಾಮಿಕ ಕಾಯಿಲೆಗಳು ವ್ಯಾಪಕವಾದಾಗ ನಿಭಾಯಿಸುವುದು ಕಷ್ಟವಾಗುತ್ತದೆ. ಜಾಗತೀಕರಣದಿಂದಾಗಿ ಇಂತಹ ಸಾಂಕ್ರಮಿಕಗಳು ಆಗಾಗ ಸಂಭವಿಸುತ್ತವೆ. ನಿಜ ೧೯೧೮ರ ಇನ್‌ಫ್ಲುಯೆಂಜ ಸಾಂಕ್ರಾಮಿಕದಷ್ಟು ತೀವ್ರವಾಗಿಲ್ಲದೇ ಇರಬಹುದು. ಆದರೆ ಜನ ಅವುಗಳಿಂದ ನರಳುವುದನ್ನು ತಪ್ಪಿಸಬೇಕಾದರೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ತುಂಬಾ ಅವಶ್ಯಕ.

ಈ ಸಂದರ್ಭದಲ್ಲಿ ಇನ್ನೊಂದು ಪಾಠವನ್ನು ನಾವು ಕಲಿಯಬೇಕು. ಅವಶ್ಯಕ ವಸ್ತುಗಳ ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆ ಅವಶ್ಯಕವಾಗಿ ಬೇಕು. ಈ ಸಾಂಕ್ರಾಮಿಕ ಮಹಾಪಿಡುಗು, ಜಾಗತಿಕ ಆರ್ಥಿಕ ಹಿನ್ನಡೆಯ ಮೇಲೆ ಮಾಡುತ್ತಿರುವ ಪರಿಣಾಮವನ್ನು ಕುರಿತಂತೆ ಹಲವು ಬರಹಗಳು ಬಂದಿವೆ. ಈವರೆಗೂ ಜಗತ್ತಿನಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿದ್ದ ಆರ್ಥಿಕತೆಯಾಗಿದ್ದ ಚೀನಾ ಇಂದು ಈ ಮಹಾಮಾರಿಯ ಕೇಂದ್ರವಾಗಿದೆ. ಅಲ್ಲಿ ಉತ್ಪನ್ನ ಕಡಿಮೆಯಾಗಿರುವುದರಿಂದ ಜಗತ್ತಿನ ಒಟ್ಟಾರೆ ಬೇಡಿಕೆಯಲ್ಲೇ ಕುಸಿತವಾಗಿದೆ. ಅಲ್ಲಿಂದ ಜಗತ್ತಿಗೆ ಸರಬರಾಜಾಗುತ್ತಿದ್ದ ಸರಕುಗಳು ಪೂರೈಕೆ ಆಗುತ್ತಿಲ್ಲ. ಅದರಿಂದ ಜಗತ್ತಿನ ಉತ್ಪನ್ನದ ಮೇಲೂ ಪ್ರತಿಕೂಲ ಪರಿಣಾಮವಾಗಿದೆ. ಜೊತೆಗೆ ಪ್ರವಾಸಿಗರ ಹಾಗೂ ಪ್ರಯಾಣಿಕರ ಸಂಖ್ಯೆ ಪೂರ್ಣ ಕುಸಿದಿದೆ. ಇದರಿಂದ ವಿಮಾನ ಹಾಗು ಹೋಟೆಲ್ ಕೈಗಾರಿಕೆ, ಇತ್ಯಾದಿ ಉದ್ದಿಮೆಗಳಿಗೂ ಹಾನಿಯಾಗಿದೆ. ಅದರ ಪರಿಣಾಮವಾಗಿ ಉಳಿದ ಉದ್ದಿಮೆಗಳೂ ಕುಸಿದಿವೆ. ಈ ಸಾಂಕ್ರಾಮಿಕದಿಂದ ಜಾಗತಿಕ ಆರ್ಥಿಕತೆ ಕುಸಿಯುವುದು ಅನಿವಾರ್ಯ.

ಇದಕ್ಕೆ ಇನ್ನೊಂದು ಆಯಾಮ ಇದೆ. ಅದನ್ನು ನಾವು ಅಷ್ಟಾಗಿ ಗಮನಿಸಿಲ್ಲ. ಮಿಲಿಯನ್‌ಗಟ್ಟಲೆ ಜನ ಸಂಪೂರ್ಣವಾಗಿ ಮನೆಯಲ್ಲೇ ಉಳಿದುಕೊಂಡಿರುವುದರಿಂದ ಬಹುಪಾಲು ಅವಶ್ಯಕ ಸರಕುಗಳಿಗೆ ಬೇಡಿಕೆ ಏರುತ್ತದೆ. ಅವರು ಅದನ್ನು ಬಳಕೆಗಾಗಿ ಮಾತ್ರ ದಾಸ್ತಾನು ಮಾಡಿಕೊಳ್ಳುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ಎಲ್ಲರೂ ದಾಸ್ತಾನು ಮಾಡಿಕೊಳ್ಳುತ್ತಿರುವುದರಿಂದ ಮುಂದೆ ಕೊರತೆಯುಂಟಾಗಬಹುದು ಅನ್ನುವ ಭೀತಿಯಿಂದಲೂ ಜನ ಆತಂಕದಿಂದ ಪೇರಿಸಿಕೊಳ್ಳುತ್ತಿದ್ದಾರೆ. ಜನ ಮನೆ ಬಿಟ್ಟು ಆಚೆ ಹೋಗಲಾಗದ ಪರಿಸ್ಥಿತಿ ಬಂದಾಗ, ಅದೂ ದೀರ್ಘಕಾಲ ಪರಿಸ್ಥಿತಿ ಮುಂದುವರಿಯಬಹುದು ಎಂಬ ಆತಂಕ ಆವರಿಸಿಕೊಂಡಾಗ ತಮ್ಮ ಅವಶ್ಯಕತೆಗಿಂತ ಹೆಚ್ಚಾಗಿ ಸೇರಿಸಿಟ್ಟುಕೊಳ್ಳುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಜೊತೆಗೆ ಹಾಗೆ ಅತಿಯಾಗಿ ದಾಸ್ತಾನು ಮಾಡಿಕೊಳ್ಳುವುದರಿಂದ ಕೊರತೆ ಬೀಳಬಹುದೆಂಬ ಲೆಕ್ಕಾಚಾರದಿಂದ ಕಾಳಸಂತೆಕೋರರು ದಾಸ್ತಾನುಗಳನ್ನು ಕೂಡಿಡುವುದು ಹೆಚ್ಚಾಗುತ್ತದೆ. ಅದರಿಂದ ಸರಕುಗಳ ಬೆಲೆ ಮತ್ತಷ್ಟು ಹೆಚ್ಚುತ್ತದೆ. ಅದರಿಂದ ಈ ಸಾಂಕ್ರಾಮಿಕದಿಂದ ವಿವಿಧ ಅವಶ್ಯಕ ವಸ್ತುಗಳ ತೀವ್ರ ಕೊರತೆಯುಂಟಾಗುತ್ತದೆ.

ಈ ಪ್ರಕ್ರಿಯೆ ಭಾರತದಲ್ಲಿ ಈಗಾಗಲೇ ಪ್ರಾರಂಭವಾಗಿದೆ. ಸಾಂಕ್ರಾಮಿಕ ತೀವ್ರವಾದರೆ ಬರುವ ದಿನಗಳಲ್ಲಿ ಪರಿಸ್ಥಿತಿ ತುಂಬಾ ಗಂಭೀರವಾಗಬಹುದು. ಅದು ದುಡಿಯುವ ಜನತೆಯ ಮೇಲೆ ಕೆಟ್ಟ ಪರಿಣಾಮ ಉಂಟುಮಾಡಬಹುದು. ಅವರೆಲ್ಲಾ ಸಾರ್ವಜನಿಕ ಪಡಿತರ ಪದ್ಧತಿಯ ವ್ಯಾಪ್ತಿಯಲ್ಲಿ ಬರುವುದರಿಂದ ಈ ಬಗ್ಗೆ ಯೋಚಿಸಬೇಕಾಗಿಲ್ಲ ಅನ್ನಬಹುದು. ಆದರೆ ಈ ವಾದ ಎರಡು ಕಾರಣಕ್ಕೆ ಸರಿಯಿಲ್ಲ. ಒಂದು ಸಾರ್ವಜನಿಕ ಪಡಿತರ ಪದ್ಧತಿಯಲ್ಲಿ ಎಲ್ಲಾ ಅವಶ್ಯಕ ವಸ್ತುಗಳನ್ನು ವಿತರಿಸುವುದಿಲ್ಲ. ಎರಡನೆಯದಾಗಿ ಎಲ್ಲಾ ಕಾರ್ಮಿಕರು ಸಾರ್ವಜನಿಕ ವಿತರಣ ವ್ಯವಸ್ಥೆಯ ವ್ಯಾಪ್ತಿಯಲ್ಲಿ ಬರವುದಿಲ್ಲ. ಎಪಿಎಲ್ ಮತ್ತು ಬಿಪಿಎಲ್ ನಡುವೆ ವ್ಯತ್ಯಾಸ

(೭ನೇ ಪುಟಕ್ಕೆ

ಪ್ರಚಲಿತ~೨

# ಸರ್ವೋಚ್ಚ ನ್ಯಾಯಾಲಯದ (ಹೊಸ) ಮೀಸಲಾತಿ ತೀರ್ಪಿನ ಸುತ್ತಮುತ್ತ

–ಗೌತಮ್ ಭಾಟಿಯಾ



**ಭಾರತದ ಸರ್ವೋನ್ನತ ನ್ಯಾಯಾಲಯವು ಉತ್ತರಾಖಂಡದ ಉಚ್ಚ ನ್ಯಾಯಾಲಯದ ಆದೇಶವೊಂದನ್ನು ಕುರಿತ ವಿವಾದವನ್ನು ಇತ್ಯರ್ಥಪಡಿಸುತ್ತಾ ಮೀಸಲಾತಿಯು ಪ್ರಜೆಯ ಮೂಲಭೂತ ಹಕ್ಕಲ್ಲ ಎಂದು ಪ್ರತಿಪಾದಿಸಿದೆ. ಸಾಂವಿಧಾನಿಕ ಭಾಷೆಯಲ್ಲಿ ಇದರ ಅರ್ಥವೇನು? ಅದರರ್ಥ ಏನೇ ಇದ್ದರೂ, ಇದು ಅಂತಿಮ ತೀರ್ಪಾಗಲು ಅದರಲ್ಲೇ ಇರುವ ಸಮಸ್ಯೆಗಳೇನು ಎಂಬುದನ್ನು ಲೇಖಕರು ಮೀಸಲಾತಿಗೆ ಸಂಬಂಧಿಸಿದ ಸಂವಿಧಾನದ ೧೬ನೇ ಅನುಚ್ಛೇದ ಮತ್ತು ಅದು ಒಳಗೊಂಡಿರುವ ವಿಧಿ–ಉಪವಿಧಿಗಳ ಅರ್ಥ–ಹಿನ್ನೆಲೆ–ವ್ಯಾಖ್ಯಾನಗಳ ಸೂಕ್ಷ್ಮ ವಿಶ್ಲೇಷಣೆಗಳ ಮೂಲಕ ಎಂಬುದನ್ನು ವಿವರಿಸಿದ್ದಾರೆ. ಕಾನೂನುಗಳ ಪರಿಭಾಷೆಯ ಪರಿಚಯವಿಲ್ಲದವರಿಗೆ ಇದರ ಓದು ಕಷ್ಟವಾಗಬಹುದು; ಆದರೆ ಅಸಾಧ್ಯವೇನೂ ಆಗಲಾರದು ಎಂದು ಭಾವಿಸಿದ್ದೇವೆ.–ಸಂ.**

**ಕ**ಳೆದ ಫೆಬ್ರವರಿ ೭ ರಂದು ಸರ್ವೋಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠವು, ಸಂವಿಧಾನದ ಅನುಚ್ಛೇದ ೧೬(೪) ಕೇವಲ ಒಂದು ಅಧಿಕಾರ ನೀಡುವ ಉಪಬಂಧ(provision), ಅದು ಮೀಸಲಾತಿಯ 'ಹಕ್ಕನ್ನು' ನೀಡುವುದಿಲ್ಲ ಎಂಬ ತೀರ್ಪೊಂದನ್ನು ನೀಡಿತು. ಈ ಪ್ರಕರಣದ ಸಂದರ್ಭವು ಈ ರೀತಿ ಇತ್ತು: ೨೦೧೨ರಲ್ಲಿ ಉತ್ತರಾಖಂಡ್ ಸರ್ಕಾರವು ತನ್ನ ರಾಜ್ಯದ ಸಾರ್ವಜನಿಕ ಸೇವಾ ಕ್ಷೇತ್ರದ ಹುದ್ದೆಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮೀಸಲಾತಿ ನೀಡದೆ ತುಂಬಲು ತೀರ್ಮಾನಿಸಿತು. ಇದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು ಮತ್ತು ಉತ್ತರಾಖಂಡ್ ಉಚ್ಚ ನ್ಯಾಯಾಲಯದಲ್ಲಿ ಒಂದು ಸುತ್ತಿನ ವಿಚಾರಣೆಯ ನಂತರ ನ್ಯಾಯಾಲಯವು ೦೫.೦೯.೨೦೧೨ರಂದು ಸರ್ಕಾರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಪ್ರಾತಿನಿಧ್ಯ ಕೊರತೆಯಾಗಿರುವ ಬಗ್ಗೆ ಸೂಕ್ತ ಅಂಕಿ ಸಂಖ್ಯೆಯನ್ನು ಸಂಗ್ರಹಿಸಬೇಕು, ಇದರಿಂದ ಮೀಸಲಾತಿಯನ್ನು ನೀಡುವ ಅಥವಾ ನೀಡದಿರುವ ಬಗ್ಗೆ ಅಗತ್ಯವಾದ ವಿಚಾರ ಮಾಡಿ ತೀರ್ಮಾನ ಕೈಗೊಳ್ಳುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗುವುದು ಎಂದು ತಿಳಿಸಿತು. ಈ ಸೂಚನೆಯ ವಿರುದ್ಧ ಸರ್ವೋಚ್ಚ ನ್ಯಾಯಾಲಯದ ಮುಂದೆ, ಮೇಲ್ಮನವಿ ಸಲ್ಲಿಸಿದವರು, ರಾಜ್ಯ ಸರ್ಕಾರವು ಮೀಸಲಾತಿ ನೀಡಬೇಕಾದುದು ಸಾಂವಿಧಾನಿಕ ಕರ್ತವ್ಯವಲ್ಲದ ಕಾರಣ ಉತ್ತರಾಖಂಡ್ ಉಚ್ಚ ನ್ಯಾಯಾಲಯದ ತೀರ್ಪು ಸರಿಯಲ್ಲ, ಹಾಗಾಗಿ ಒಮ್ಮೆ (೨೦೧೨) ಸರ್ಕಾರವು ತೀರ್ಮಾನ ಕೈಗೊಂಡ ನಂತರ ಅದನ್ನು ಪ್ರಶ್ನಿಸುವಂತಿಲ್ಲ ಎಂದು ವಾದಿಸಿದರು. ಅಲ್ಲದೆ ಮೇಲ್ಮನವಿದಾರರು ಮುಂದುವರೆದು 'ಸೂಕ್ತ ಅಂಕಿ ಅಂಶವನ್ನು' ಸಂಗ್ರಹಿಸುವುದು ಮೀಸಲಾತಿಯನ್ನು ನೀಡುವುದಕ್ಕಾದ್ದರಿಂದ, ಸರ್ಕಾರವು ಮೀಸಲಾತಿ ನೀಡದಿರುವ ತೀರ್ಮಾನವನ್ನು ಒಮ್ಮೆ ಕೈಗೊಂಡ ಮೇಲೆ ಅಂಕಿ ಅಂಶವನ್ನು ಸಂಗ್ರಹಿಸುವ ಅಗತ್ಯವಿಲ್ಲವೆಂದೂ ವಾದಿಸಿದರು.

ನ್ಯಾಯಾಲಯವು ಈ ವಾದವನ್ನು ಒಪ್ಪಿಕೊಂಡಿತು. ೨೦೧೬ ರಲ್ಲಿ 'ಸುರೇಶ್ ಕುಮಾರ್ ಗೌತಮ್ ವಿರುದ್ಧ ಉತ್ತರ ಪ್ರದೇಶ ರಾಜ್ಯ' ಎಂಬ ಪ್ರಕರಣದಲ್ಲಿ ಇದೇ ವಾದವನ್ನು ಒಪ್ಪಿಕೊಂಡಿದ್ದರ ಬಗ್ಗೆ ಕೂಡ ಸಹಮತ ವ್ಯಕ್ತಪಡಿಸಿತು. ತನ್ನ ಆ ತೀರ್ಪಿನ ಪ್ಯಾರಾ ೧೨ ರಲ್ಲಿ "ಸಾರ್ವಜನಿಕ ಹುದ್ದೆಗಳ ನೇಮಕಾತಿ ಮತ್ತು ಬಡ್ತಿಗೆ ಮೀಸಲಾತಿಯ ಅಗತ್ಯವಿದೆಯೇ ಎಂಬುದನ್ನು ರಾಜ್ಯ ಸರ್ಕಾರವು ತೀರ್ಮಾನಿಸಬೇಕು. ಸಂವಿಧಾನದ ಅನುಚ್ಛೇದ ೧೬ ರ ಕಲಂ ೪ ಮತ್ತು (೪–ಎ)ಗಳಲ್ಲಿನ ಭಾಷೆಯು ಸ್ಪಷ್ಟವಾಗಿದ್ದು, ಅದರ ಪ್ರಕಾರ ಪ್ರಾತಿನಿಧ್ಯದ ಕೊರತೆಯು ರಾಜ್ಯದ ವಸ್ತುನಿಷ್ಠ ತೃಪ್ತಿಗೆ ಒಳಪಟ್ಟ (subjective satisfaction) ವಿಚಾರವಾಗಿದೆ. ರಾಜ್ಯವು ಈಗಾಗಲೇ ತನ್ನ ಬಳಿ ಇರುವ ಅಂಕಿ–ಅಂಶಗಳ ಆಧಾರದ ಮೇಲೆ ತನ್ನದೇ ಆದ ಅಭಿಪ್ರಾಯವನ್ನು ರೂಪಿಸಿಕೊಳ್ಳಬಹುದು ಅಥವಾ ಅದು ಆಯೋಗ/ಸಮಿತಿ, ವ್ಯಕ್ತಿ ಅಥವಾ ಪ್ರಾಧಿಕಾರದ ಮೂಲಕ ಅಂತಹ ಮಾಹಿತಿಗಳನ್ನು ಸಂಗ್ರಹಿಸಬಹುದು. ಹಾಗೆ ಅಭಿಪ್ರಾಯವನ್ನು ರೂಪಿಸಿಕೊಳ್ಳಲು ಅಂಕಿ–ಅಂಶಗಳ ಆಧಾರವಿರಬೇಕಾಗಿರುವುದು ಅವಶ್ಯಕ. ಆದಾಗ್ಯೂ ಇದು ರಾಜ್ಯವು ಮೀಸಲಾತಿಗೆ ಅವಕಾಶವಿತ್ತ ಸಂದರ್ಭಗಳಿಗೆ ಸೀಮಿತವಾಗಿತ್ತು ಮತ್ತು ರಾಜ್ಯದ ವಿವೇಚನೆಗೆ ಬಿಟ್ಟದ್ದಾಗಿತ್ತು. ಪರಿಣಾಮವಾಗಿ; "ಬಡ್ತಿಗಳಿಗೆ ಸಂಬಂಧಿಸಿದಂತೆ ಮೀಸಲಾತಿ ನೀಡಲೇಬೇಕೆಂಬ ನಿರ್ಬಂಧ ಸರ್ಕಾರಕ್ಕೆ ಇಲ್ಲದಿರುವುದರಿಂದ, ೦೫.೦೯.೨೦೧೨ರ ನಡಾವಳಿಗಳನ್ನು ನ್ಯಾಯಬದ್ಧವಲ್ಲವೆಂದು ಘೋಷಿಸಲು ಉಚ್ಚ ನ್ಯಾಯಾಲಯಕ್ಕೆ ಸಮರ್ಥನೀಯವಾದ ಕಾರಣಗಳಿಲ್ಲ ಎಂಬುದು ನಮ್ಮ ಅಭಿಪ್ರಾಯವಾಗಿದೆ". ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಮೀಸಲಾತಿಯನ್ನು ನಿರಾಕರಿಸುವುದಕ್ಕಾಗಿ ಮಾಹಿತಿಯನ್ನು ಸಂಗ್ರಹಿಸಬೇಕಾದ ಕಟ್ಟುಪಾಡೇನೂ ರಾಜ್ಯಕ್ಕೆ ಇಲ್ಲ. ಆದರೆ ಈ ರೀತಿಯ ವಾದದಲ್ಲಿ ಎರಡು ಸಮಸ್ಯೆಗಳಿವೆ. ಅವುಗಳನ್ನು ನಾನು ಈ ಮುಂದೆ ಪ್ರಸ್ತುತಪಡಿಸುತ್ತೇನೆ.

ಮೊದಲನೆಯದು ನ್ಯಾಯಾಲಯವು, ಅನುಚ್ಛೇದ ೧೬(೪) ಅನ್ನು ಬರೀ ಅಧಿಕಾರ ನೀಡುವ ಉಪಬಂಧ ಎಂದು ವಿವರಿಸುವುದು ಮತ್ತು ಅದರಿಂದ ಪ್ರಾತಿನಿಧ್ಯದ ಕೊರತೆಯೆಂಬುದು ರಾಜ್ಯದ ವಸ್ತುನಿಷ್ಠ ತೃಪ್ತಿಯ ವ್ಯಾಪ್ತಿಗೆ ಒಳಪಡುವ ವಿಚಾರ ಎಂಬ ತೀರ್ಮಾನಕ್ಕೆ ಬರುವುದು. ಇದು ಸರ್ವೋಚ್ಚ ನ್ಯಾಯಾಲಯದಿಂದ ವ್ಯಾಖ್ಯಾನಕ್ಕೆ ಒಳಗಾದಂತೆ ಅನುಚ್ಛೇದ ೧೬ ರ ವಿಶಾಲ ಉದ್ದೇಶಕ್ಕೆ ವಿರುದ್ಧವಾಗಿದೆ. ೧೯೭೦ ರ ಮಧ್ಯಭಾಗದವರೆಗೆ ಅನುಚ್ಛೇದ ೧೬(೪) ಎಂಬುದು ಅನುಚ್ಛೇದ ೧೬ (೧) ರಲ್ಲಿ ಬರುವ ಅವಕಾಶಗಳ ಸಮಾನತೆಯ ಖಾತ್ರಿಗೆ ಒಂದು ವಿನಾಯಿತಿ ಎಂಬುದು ನ್ಯಾಯಾಲಯದ ನಿಲುವಾಗಿರುತ್ತಿತ್ತು. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಅವಕಾಶಗಳ ಸಮಾನತೆಯ ನೀತಿಯು ಅನ್ವಯವಾಗದ ಸ್ಥಳಗಳಲ್ಲಿ (ಸಮರ್ಪಕವಾಗಿ ಪ್ರಾತಿನಿಧ್ಯ ಪಡೆಯಲಾರದ ವರ್ಗಗಳಿಗೆ) ಒಂದು ಅವಕಾಶವನ್ನು ನಿರ್ಮಿಸಿಕೊಡುವುದು ಅನುಚ್ಛೇದ ೧೬(೪)ರ ಉದ್ದೇಶ ಎಂದಾಗಿರುತ್ತಿತ್ತು. ಹೇಗಾದರೂ ಈ ವಿನಾಯಿತಿಯನ್ನು ಬಳಸಿಕೊಂಡು ಮೀಸಲಾತಿ ನೀಡುವುದು ಅಥವಾ ಬಿಡುವುದು ರಾಜ್ಯಕ್ಕೆ ಸಂಬಂಧಿಸಿದ ವಿಚಾರವೇ ಆಗಿರುತ್ತಿತ್ತು.

ನ್ಯಾ. ಎನ್. ಎಂ. ಥಾಮಸ್‌ರಿಂದ ಆ ಪರಿಸ್ಥಿತಿ ಬದಲಾಯಿತು. ಅನುಚ್ಛೇದ ೧೬(೪) ಅನುಚ್ಛೇದ ೧೬೧(೧)ರ ವಿನಾಯತಿಯಲ್ಲ ಪ್ರತಿಯಾಗಿ ಅದು ೧೬೧(೧) ರ ಒಂದು ಭಾಗ ಎನ್ನಲಾಯಿತು. ಈ ಬದಲಾದ ವ್ಯಾಖ್ಯಾನವು, ಅನುಚ್ಛೇದ ೧೪–೧೫–೧೬ರಲ್ಲಿ ಅಡಕವಾಗಿರುವ 'ಸಮಾನತೆಯ ಸಂಹಿತೆ' ಬರೀ ಔಪಚಾರಿಕ ಸಮಾನತೆಯ ಬಗೆಗಲ್ಲ, ಅದು ವಾಸ್ತವಿಕ ಸಮಾನತೆಯ ಬಗೆಗೆ (substantive equality)- ಅಂದರೆ ಸದ್ಯ ಅಸ್ತಿತ್ವದಲ್ಲಿರುವ ಸಾಮಾಜಿಕ ಮತ್ತು ರಾಚನಿಕ ಅನನುಕೂಲತೆಗಳನ್ನು ಪರಿಗಣಿಸುವ, ಮತ್ತು ಸರ್ಕಾರವು ಅದನ್ನು ಪರಿಹರಿಸಿ ಸಾಧಿಸಬೇಕಾದ ಸಮಾನತೆ. ಇದು ಸರ್ವೋಚ್ಚ ನ್ಯಾಯಾಲಯದ ವಿಕಾಸವಾಗುತ್ತಿರುವ ವ್ಯಾಖ್ಯಾನದ ದಿಕ್ಕು. ಎನ್ ಎಂ ಥಾಮಸ್ ನಂತರ ಈ ಸಾಂವಿಧಾನಿಕ ವಾಸ್ತವಿಕ ಸಮಾನತೆಯನ್ನು ಎಂದೂ ಗಂಭೀರವಾಗಿ ಪ್ರಶ್ನಿಸಲಾಗಿಲ್ಲ ಮತ್ತು ಅದನ್ನು ಇತ್ತೀಚೆಗೆ (ಅನುಚ್ಛೇದ ೧೪ ಮತ್ತು ೧೫ ರ ಸಂದರ್ಭದಲ್ಲಾದರೂ) ನವತೇಜ್ ಜೋಹರ್ ಮತ್ತು ಜೋಸೆಫ್ ಶೈನ್ ಪ್ರಕರಣದಲ್ಲಿ ಪುನಃ ದೃಢೀಕರಿಸಲಾಗಿದೆ. ಪರಿಣಾಮವಾಗಿ, ಅನುಚ್ಛೇದ ೧೬(೪), ಅನುಚ್ಛೇದ ೧೬(೧)ರ ಒಂದು ಮುಖವಾದರೆ, ಆಗ ಅನುಚ್ಛೇದ ೧೬(೧)ವು ಸಮಾನತೆಯ ವಾಸ್ತವಿಕ ಅವಕಾಶಗಳನ್ನು ಪಡೆಯುವ ಹಕ್ಕನ್ನು ಖಾತ್ರಿಪಡಿಸುತ್ತದೆ ಎಂದಾಗುತ್ತದೆ. (ಮತ್ತು ೧೬(೪) ಅನುಚ್ಛೇದವು – ಎನ್.ಎಂ. ಥಾಮಸ್ ಅವರ ಮಾತುಗಳಲ್ಲಿ– 'ಆ ಹಕ್ಕಿನ ದೃಢವಾದ ಪುನರುಚ್ಚಾರ') ಹೀಗಾಗಿ, ಮೀಸಲಾತಿಯ ಹಕ್ಕು ಎಂಬುದು ಇಲ್ಲ ಎಂದು ಹೇಳುವುದು ಸರಿಯೇ ಆದರೂ(ಅನುಚ್ಚೇದ(೧೬(೪)ರ ಭಾಷೆಯು ಅಧಿಕಾರ ಸಾಧಕವಾಗಿರುವುದರಿಂದಾಗಿ) ಅದರ ಜೊತೆ ವಾಸ್ತವಿಕ ಸಮಾನತೆಯ ಹಕ್ಕು ಇದೆ ಎಂದು ಹೇಳುವುದೂ ಸರಿಯಾಗುತ್ತದೆ. ತನ್ಮೂಲಕ ಅರ್ಥವಾಗುವುದೇನೆಂದರೆ, ಯಥಾಸ್ಥಿತಿ ಕಾಯ್ದುಕೊಳ್ಳುವಿಕೆಯು ವ್ಯಕ್ತಿಗಳನ್ನು, ಒಂದು ವಾಸ್ತವಿಕ ಅಸಮಾನವಾದ ಪರಿಸ್ಥಿತಿಯಲ್ಲಿ, ಔಪಚಾರಿಕವಾಗಿ ಸಮಾನವಾಗಿ ನಡೆಸಿಕೊಳ್ಳುವುದೆಂದರೆ– ಸಾರ್ವಜನಿಕ ಸೇವೆಯ ವಿಚಾರದಲ್ಲಿ ನೇಮಕಾತಿ ಮತ್ತು ಬಡ್ತಿಯ ವಿಚಾರಕ್ಕೆ ಬಂದಾಗ–ಅನುಚ್ಛೇದ ೧೬(೧) ಅನ್ನು ಉಲ್ಲಂಘಿಸಿದಂತೆಯೇ ಆಗುತ್ತದೆ.

ಉತ್ತರಾಖಂಡ್ ಉಚ್ಚ ನ್ಯಾಯಾಲಯಕ್ಕೆ ಈ ವ್ಯತ್ಯಾಸವು ಚೆನ್ನಾಗಿಯೇ ತಿಳಿದಿತ್ತು. ಹಾಗಾಗಿ ಅದು ಮೀಸಲಾತಿ ನೀಡಬೇಕೆಂದು ಸರ್ಕಾರಕ್ಕೆ ಆದೇಶ ನೀಡಲಿಲ್ಲ. ಬದಲಿಗೆ ಅದು ಮಾಡಿದ್ದೇನೆಂದರೆ ಪ್ರಾತಿನಿಧ್ಯದ ಕೊರತೆಯ ಬಗ್ಗೆ ಅಂಕಿ–ಅಂಶ ಸಂಗ್ರಹಿಸಬೇಕೆಂದು ಆದೇಶಿಸಿದ್ದು, ಅದರಿಂದ ಸರ್ಕಾರ ಈಗ ಇರುವ ವಾಸ್ತವಿಕ ಅಸಮಾನತೆಯನ್ನು ಸರಿಪಡಿಸುವ ತೀರ್ಮಾನವನ್ನು ಕೈಗೊಳ್ಳಬಹುದು ಎಂದು ಅದು ಭಾವಿಸಿತು. ಇದು–ಸರ್ವೋಚ್ಚ ನ್ಯಾಯಾಲಯದ ಒಬ್ಬ ವೃತ್ತಿನಿರತ ವಕೀಲ ಕರಣ್ ಲಾಹಿರಿ ಒಂದು ಲೇಖನದಲ್ಲಿ ವಾದಿಸಿರುವ ಹಾಗೆ–ಸರ್ಕಾರದ ಮೇಲೆ ಒಂದು ಅಧಿಕಾರಸಹಿತವಾದ ಕರ್ತವ್ಯವನ್ನು ಹೊರಿಸುವ ಅನುಚ್ಛೇದ ೧೬ ರ

ವಿಶಾಲ ಉದ್ದೇಶದ ಅರ್ಥೈಸುವಿಕೆ.

ಲಾಹಿರಿ ಅವರು ಬರೆಯುವಂತೆ "ಒಂದು ರಾಜ್ಯಕ್ಕೆ ಅನುಜ್ಞಾದಾಯಕ ಭಾಷೆಯಲ್ಲಿ ನಿರೂಪಿಸಲ್ಪಟ್ಟ, ಅವಕಾಶ ಒದಗಿಸುವುದಕ್ಕೆ ಸಂಬಂಧಿಸಿದ ಅಧಿಕಾರವನ್ನು/ವಿವೇಚನೆಯ ಅಧಿಕಾರವನ್ನು ನೀಡುವ ಸಾಂವಿಧಾನಿಕ ಅವಕಾಶವನ್ನು, ಕರ್ತವ್ಯದ ಜೊತೆ ಬೆರೆತ ಅಧಿಕಾರವನ್ನು ಹೊಂದಿರುವಂತಹದು ಎಂಬಂತೆ ಪರಿಗಣಿಸಬೇಕು. ಹೀಗೆ ಅಧಿಕಾರ ಪಡೆದ ಪ್ರಾಧಿಕಾರವು ಸೋತರೆ ಅಥವಾ ಕಾರ್ಯಪ್ರವೃತ್ತರಾಗುವಲ್ಲಿ ಪ್ರಜ್ಞಾಪೂರ್ವಕ ಲೋಪವೆಸಗಿದರೆ, ಅದು ಮತ್ತೊಂದು ಸಾಂವಿಧಾನಿಕ ಅವಕಾಶದ/ಉಪಬಂಧ ಪರಿಣಾಮವನ್ನು ನಿಷ್ಕ್ರಿಯಗೊಳಿಸಿದಂತೆ, ಅಥವಾ ಸಾಂವಿಧಾನಿಕ ಉಪಬಂಧಗಳ ಸಂಕೀರ್ಣ ವಿನ್ಯಾಸದಿಂದ ಮೂಡಿ ಬರುವ ಸಾಂವಿಧಾನಿಕ ತತ್ವವನ್ನು ವ್ಯರ್ಥ ಮಾಡಿದಂತೆ."

ನಂತರ ಲಾಹಿರಿಯವರು ಮುಂದುವರಿದು, ೧೬(೪) ಅನುಚ್ಛೇದವನ್ನು ಕರ್ತಧಾರಕವಾಗಿ ಪರಿಗಣಿಸದೆ ಕೇವಲ ಅಧಿಕಾರ ಸಾಧಕವಾಗಿ ಪರಿಗಣಿಸಿದರೆ ಅದು ಒಂದು ರಾಜ್ಯವು ಮೀಸಲಾತಿಯನ್ನು ನೀಡುವುದಕ್ಕೆ ಆಧಾರವಾಗಿ ಅಂಕಿ–ಅಂಶಗಳನ್ನು ಸಂಗ್ರಹಿಸಬೇಕು ಎಂಬ ನಿರ್ಬಂಧವಿದೆಯೇ ಹೊರತು ಮೀಸಲಾತಿ ನೀಡದಿರಲು ನಿರ್ಧರಿಸಿದಲ್ಲಿ ಅಂತಹ ನಿರ್ಬಂಧವಿರುವುದಿಲ್ಲ ಎಂಬ ಅರ್ಥ ಬರುತ್ತದೆ ಎನ್ನುತ್ತಾರೆ. ಏನೇ ಆದರೂ ಇದರರ್ಥ:

"ಇದು ಹಿಂದುಳಿದ ವರ್ಗಗಳನ್ನು ಮೇಲೆತ್ತಲು ಅಡ್ಡಿಯನ್ನು ನಿರ್ಮಿಸಲಾಗಿದೆಯೇ ಹೊರತು ಅವರನ್ನು ಕೆಳಕ್ಕೆ ದೂಡಲು ಅಥವಾ ಸಂಪೂರ್ಣವಾಗಿ ನಿರ್ಲಕ್ಷಿಸಲು ಅಲ್ಲ. ಇದು ನಮ್ಮ ಸಂವಿಧಾನದ ಸಮಾನತೆಯ ಸಂಹಿತೆಗೆ ಹೊಂದಿಕೆಯಾಗುವುದಿಲ್ಲ ಮತ್ತು ಅನುಚ್ಛೇದ ೧೬ರಲ್ಲಿ ಇಂತಹ ಅಸಮಸೂತ್ರತೆಗೆ ಯಾವುದೇ ಪಠ್ಯಾಧಾರಗಳಿಲ್ಲ. ಈ ಅಸಮಸೂತ್ರತೆಯನ್ನೇ ಸರ್ವೋನ್ನತ ನ್ಯಾಯಾಲಯ ಅನುಚ್ಛೇದ ೧೬ ತನ್ನೊಳಗೆ ಅಧಿಕಾರ ಸಾಧಕತೆಯನ್ನು ಮಾತ್ರವಲ್ಲ ಕರ್ತವ್ಯದಾರಕತೆಯನ್ನೂ ಅಡಕ ಮಾಡಿಕೊಂಡಿದೆ ಎಂಬುದನ್ನು ಮಾನ್ಯ ಮಾಡುವ ಮೂಲಕ ಸರಿಪಡಿಸಬಹುದು."

ಅಸಮಸೂತ್ರದ ಸಮಸ್ಯೆಯನ್ನು ಎನ್.ಎಂ. ಥಾಮಸ್ ಅವರು ಅನುಚ್ಛೇದ ೧೬ ರ ಅರ್ಥೈಸುವಿಕೆಯ (reading) ಮೂಲಕ ನಿರ್ವಹಿಸಿರುವುದನ್ನು ನಾವು ಗಮನಿಸಬೇಕು. ಹಿಂದುಳಿದ ವರ್ಗಗಳನ್ನು ಮೇಲಕ್ಕೆತ್ತುವುದು ರಾಜ್ಯದ ಬಾಧ್ಯತೆಯಾಗಿದೆ ಎಂದು ಅವರು ಅದನ್ನು ಅರ್ಥೈಸುತ್ತಾರೆ. ಆದರೆ ಸರ್ವೋಚ್ಚ ನ್ಯಾಯಾಲಯದ ತೀರ್ಪು ಅದನ್ನು "ಮೀಸಲಾತಿಯನ್ನು ನೀಡುವುದು/ವಾಸ್ತವಿಕ ಸಮಾನತೆ ('ಮೇಲಕ್ಕೆತ್ತುವುದು') ಸರ್ಕಾರಕ್ಕೆ ಬೇಕಾಗಿದ್ದಲ್ಲಿ ಅದು ಅದಕ್ಕೆ ಆಧಾರವಾಗಿ ಅಂಕಿಅಂಶವನ್ನು ಸಂಗ್ರಹಿಸಬೇಕು; ಅದರೆ ಮೀಸಲಾತಿಯನ್ನು/ ವಾಸ್ತವಿಕ ಸಮಾನತೆಯನ್ನು ನಿರಾಕರಿಸುವುದು (ಕೆಳಕ್ಕೆಳೆಯುವುದು/ಅವಗಣನೆ ಮಾಡುವುದು) ಅದರ ಉದ್ದೇಶವಾದರೆ ಅಂತಹದೇನನ್ನೂ ಮಾಡಬೇಕಾಗಿಲ್ಲ" ಎಂದು ಅರ್ಥೈಸಿರುವುದು ಎದ್ದು ಕಾಣುವಂತಿದೆ. ಇದು ಖಂಡಿತವಾಗಿ ಸಾಂವಿಧಾನಿಕ ಯೋಜನೆಗೆ ಭಿನ್ನವಾಗಿದೆ.

ಎರಡನೆಯದು ಬಹಳ ನೇರವಾದದ್ದು. 'National Legal Services Authority(NALSA) ವಿರುದ್ಧ ಭಾರತ ಒಕ್ಕೂಟ' ಪ್ರಕರಣದಲ್ಲಿ ಏನಾಯಿತು ಎಂಬುದನ್ನು ಸ್ಮರಿಸಿಕೊಳ್ಳಿ. ಸರ್ವೋಚ್ಚ ನ್ಯಾಯಾಲಯವು ತೃತೀಯ ಲಿಂಗಿಗಳ ಸಮುದಾಯವು ಸರ್ಕಾರಿ ಸೇವೆಗಳಲ್ಲಿ ಕಡಿಮೆ ಪ್ರಾತಿನಿಧ್ಯ ಹೊಂದಿದೆ ಎಂಬ ಬಗ್ಗೆ ನ್ಯಾಯಿಕ ಪರಿಗಣನೆ ಮಾಡಿತು ಮತ್ತು ಅದರ ಆಧಾರದಲ್ಲಿ ಅನುಚ್ಛೇದ ೧೬ ರ ಅಡಿಯಲ್ಲಿ ನಿರ್ದಿಷ್ಟ ಗುರಿಯ ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕೆಂದು ನಿರ್ದೇಶಿಸಿತು. ಇದರ ಅರ್ಥ, ಒಂದು ಗುಂಪು ನಿಜವಾಗಿಯೂ ಅನುಚ್ಛೇದ ೧೬(೪) ರ ವ್ಯಾಪ್ತಿಗೆ ಒಳಪಡುತ್ತದೆ ಎಂದಾದರೆ ಅನುಚ್ಛೇದ ೧೬(೧) ರ ಅಡಿಯಲ್ಲಿ ವಾಸ್ತವಿಕ ಸಮಾನತೆಯ ಆಶಯವು ನಿಜವಾದ ಮತ್ತು ಪರಿಣಾಮಕಾರಿಯಾದ ಸಮಾನತೆಯನ್ನು ಸಾಧಿಸುವುದಕ್ಕಾಗಿ ಕ್ರಮಗಳನ್ನು ತೆಗೆದುಕೊಳ್ಳಲು ಒತ್ತಾಯಿಸುತ್ತದೆ. ಹೀಗೆ ಮೀಸಲಾತಿ ಒಂದು ಸರ್ವಸ್ವತಂತ್ರ ಹಕ್ಕಲ್ಲ ಎಂದು ಒಪ್ಪಿಕೊಂಡರೂ, ಒಂದು ಗುಂಪಿಗೆ ಸರಿಯಾದ ಪ್ರಾತಿನಿಧ್ಯವಿಲ್ಲ ಎಂದು ಕಂಡುಬಂದಾಗ ಅದು ಹಕ್ಕಿನ ರೂಪ ಪಡೆದು ಜಾರಿಯಾಗಬೇಕಾಗುತ್ತದೆ.

ಪರಿಸ್ಥಿತಿ ಹೀಗಿರುವಾಗ ರಾಜ್ಯವು ಅಂಕಿ–ಅಂಶ ಸಂಗ್ರಹಣೆಯ ಕಾರ್ಯವನ್ನು ಕೈಗೊಳ್ಳದಿರಲು ತೀರ್ಮಾನಿಸುವ ಮೂಲಕ ಈ ಹಕ್ಕನ್ನು ಸುಮ್ಮನೆ ನಿರರ್ಥಕಗೊಳಿಸಿಬಿಡಬಹುದು. ಹಾಗಾಗಿ NALSA ಪ್ರಕರಣದಲ್ಲಿ ಕಾಣುವಂತೆ ಪ್ರಾತಿನಿಧ್ಯದಲ್ಲಿ ಕೊರತೆಯನ್ನು ನಿರ್ಧರಿಸುವುದಕ್ಕಾಗಿ ರಾಜ್ಯವು ಅಂಕಿ–ಅಂಶ ಸಂಗ್ರಹಣೆ ಮಾಡಬೇಕಾದುದು ನಿಜಕ್ಕೂ ಕಡ್ಡಾಯವೇ. ಏಕೆಂದರೆ ಸಕಾರಾತ್ಮಕ ಕ್ರಮ ಕೈಗೊಳ್ಳುವುದಕ್ಕೆ ಅಂಕಿಅಂಶ ಸಂಗ್ರಹಣೆ ಒಂದು ಪೂರ್ವ ಅಗತ್ಯವಾಗಿರುತ್ತದೆ.

ಆದ್ದರಿಂದ ಸರ್ವೋಚ್ಚ ನ್ಯಾಯಾಲಯದ ತೀರ್ಪು ಎನ್.ಎಂ ಥಾಮಸ್, nalsa, ಅನುಚ್ಛೇದ ೧೬ ಮತ್ತು ಸಮಾನತೆಯ ಸಂಹಿತೆಗೆ ವಿರೋಧವಾಗಿದೆ. ಅನುಚ್ಛೇದ ೧೬(೧) ಅವಕಾಶಗಳ ವಾಸ್ತವಿಕ ಸಮಾನತೆಯನ್ನು ಖಚಿತಪಡಿಸುತ್ತದೆ ಎಂಬುದನ್ನು ಒಮ್ಮೆ ನಾವು ಒಪ್ಪಿಕೊಂಡರೆ ಅನುಚ್ಛೇದ ೧೬(೪)ರ ಸುಸಂಬದ್ಧ ಓದು ಅನುಚ್ಛೇದ ೧೬(೪) ರ ಅಡಿಯಲ್ಲಿ ರಾಜ್ಯದ ವಿವೇಚನೆಯು ಅಸೀಮವಾದುದಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಅನುಚ್ಛೇದ ೧೬(೪) ಒಂದು "ಅಧಿಕಾರದ ಜೊತೆಗೂಡಿರುವ ಕರ್ತವ್ಯ"ಎಂಬುದನ್ನು ಸೂತ್ರೀಕರಿಸುತ್ತದೆ :ಮೀಸಲಾತಿಯ ಬಗ್ಗೆ ತೀರ್ಮಾನ ಕೈಗೊಳ್ಳಲು ರಾಜ್ಯಕ್ಕೆ ಅಧಿಕಾರವಿದೆಯಾದರೂ, ಆ ತೀರ್ಮಾನಕ್ಕೆ ಬರಲು ಅದು ಅಂಕಿ–ಅಂಶವನ್ನು ಸಂಗ್ರಹಿಸಬೇಕಾದ ಕರ್ತವ್ಯವೂ ಅದಕ್ಕಿದೆ. ಬೇರೆ ಯಾವುದೇ ರೀತಿಯ ಅರ್ಥೈಸುವಿಕೆಯು ಅನುಚ್ಛೇದ ೧೬(೧)ರ ಅಡಿಯ ವಾಸ್ತವಿಕ ಸಮಾನತೆಯ ಕಲ್ಪನೆಯನ್ನು ನಿರರ್ಥಕಗೊಳಿಸುತ್ತದೆ.



**(ರೋಡ್ಸ್ ಸ್ಕಾಲರ್‌ಶಿಪ್ ಪಡೆದ ಪ್ರತಿಭಾವಂತ ಯುವ ಕಾನೂನು ಪಂಡಿತರಾದ ಗೌತಮ್ ಭಾಟಿಯಾ ನಮ್ಮ ಸರ್ವೋನ್ನತ ನ್ಯಾಯಾಲಯದ ವಕೀಲರೂ ಹೌದು)**

(ಕೃಪೆ: **ಜನತಾ,** ೧೫, ಫೆಬ್ರು., ೨೦೨೦ ಕನ್ನಡಕ್ಕೆ: **ಎಂ. ರಾಜು**)

---

೫ನೇ ಪುಟದಿಂದ)

ಕಲ್ಪಿಸಿದ ನಂತರ ಸಾರ್ವಜನಿಕ ವಿತರಣ ವ್ಯವಸ್ಥೆ ಕೇವಲ ಬಿಪಿಎಲ್ ಇರುವವರಿಗೆ ಮಾತ್ರ ಸೀಮಿತವಾಯಿತು. ದೊಡ್ಡ ಸಂಖ್ಯೆಯ ಜನ ಅದರ ವ್ಯಾಪ್ತಿಯಿಂದ ಹೊರಗುಳಿದರು. ಹಾಗಾಗಿ ಮುಂದೆ ಜನ ಅತಿಯಾಗಿ ಸ್ಟಾಕ್ ಮಾಡಿಕೊಳ್ಳುವುದರಿಂದ ಹಾಗು ಕಾಳಸಂತೆಕೋರರ ಹಾವಳಿಯಿಂದ ಸರಕುಗಳು ಮಾಯವಾಗತೊಡಗಿದಾಗ ಈ ಜನ ತೊಂದರೆಗೆ ಒಳಗಾಗುತ್ತಾರೆ. ಇದೇ ಕಾರಣಕ್ಕೆ ಕೇವಲ ಆಹಾರಧಾನ್ಯಗಳು ಮಾತ್ರವಲ್ಲದೆ ಬಹುತೇಕ ಎಲ್ಲಾ ಅವಶ್ಯಕ ಪದಾರ್ಥಗಳನ್ನು ಮಾರುವ ಸಮಗ್ರ ಸಾರ್ವಜನಿಕ ವಿತರಣಾ ವ್ಯವಸ್ಥೆ ಅವಶ್ಯಕ.

ಈ ಕಷ್ಟ ಕಾಲದಲ್ಲಿ ಇಂತಹ ವ್ಯವಸ್ಥೆಯ ಅವಶ್ಯಕತೆ ನಮಗೆ ಗೋಚರವಾಗುತ್ತದೆ. ಆದರೆ ಇಂತಹ ಸಂದರ್ಭಗಳು ಅಪರೂಪವೇನಲ್ಲ. ಹಾಗಾಗಿ ವಿಭಿನ್ನ ಅವಶ್ಯಕ ವಸ್ತುಗಳನ್ನು ಮಾರುವ ವ್ಯವಸ್ಥೆ ಆರ್ಥಿಕತೆಯ ಒಂದು ಶಾಶ್ವತ ಲಕ್ಷಣವಾಗಬೇಕು.

ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಈ ಸಾಂಕ್ರಮಿಕ ಮಹಾಮಾರಿ ಒಂದು ಯುದ್ಧದ ಪರಿಸ್ಥಿತಿಯನ್ನು ಸೃಷ್ಟಿಸಿದೆ. ಯುದ್ಧದ ಸಮಯದಲ್ಲಿ ಆಗುವಂತೆ ಈಗಲೂ ಕೊರತೆಗಳು ಉಂಟಾಗುತ್ತದೆ. ಅಷ್ಟೇ ಅಲ್ಲ ಅದನ್ನು ಕೃತಕವಾಗಿ ಸೃಷ್ಟಿಸಲಾಗುತ್ತದೆ. ಅದಕ್ಕೆ ಸಾರ್ವತ್ರಿಕ ವಿತರಣಾ ವ್ಯವಸ್ಥೆ ಒಂದು ಅವಶ್ಯಕ ಪರಿಹಾರ. ಸಧ್ಯಕ್ಕೆ ಮಾತ್ರವಲ್ಲ ಅದು ಆರ್ಥಿಕತೆಯ ಒಂದು ಶಾಶ್ವತ ಭಾಗವಾಗಿಬಿಡಬೇಕು.

ಸಮಗ್ರ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಹಾಗೂ ಒಂದು ಸಾರ್ವತ್ರಿಕ ವಿತರಣಾ ವ್ಯವಸ್ಥೆ ಇಂದಿನ ಪರಿಸ್ಥಿತಿಯಲ್ಲಿ ತುಂಬಾ ಅವಶ್ಯಕ ಅನ್ನವುದು ಸ್ಪಷ್ಟ. ನವಉದಾರವಾದಿ ವ್ಯವಸ್ಥೆ ಎರಡನ್ನೂ ನಾಶ ಮಾಡಿದೆ. ಅದು ಶಿಕ್ಷಣ ಹಾಗೂ ಆರೋಗ್ಯ ಸೇವೆಯಂತಹ ಅವಶ್ಯಕ ಸೇವೆಗಳನ್ನು ಖಾಸಗೀಕರಣಗೊಳಿಸಲು ಪ್ರೋತ್ಸಾಹಿಸಿದೆ. ಅದು ಬಹುರಾಷ್ಟ್ರೀಯ ಕಂಪನಿಗಳು ಸೇರಿದಂತೆ ಖಾಸಗೀ ವ್ಯಾಪಾರಿಗಳನ್ನು ಆಹಾರಧಾನ್ಯಗಳ ಮಾರುಕಟ್ಟೆಗೆ ತಂದಿದೆ. ಶ್ರೀಮಂತ ರಾಷ್ಟ್ರಗಳು ಜಾಗತಿಕ ವ್ಯಾಪಾರಿ ಸಂಘಟನೆಯ (ಡಬ್ಲ್ಯು.ಟಿ.ಓ) ಮಾತುಕತೆಯ ಸಂದರ್ಭದಲ್ಲಿ ಭಾರತ ಪಡಿತರ ಪದ್ಧತಿಯನ್ನು ನಿಲ್ಲಿಸಬೇಕೆಂದು ಬಯಸಿದವು. ಧಾನ್ಯಗಳನ್ನು ರೈತರಿಂದ ಕೊಂಡುಕೊಳ್ಳುವ ವ್ಯವಸ್ಥೆಯನ್ನು ನಿಲ್ಲಿಸಲು ಒತ್ತಾಯಿಸಿದವು. ಆದರೆ ಯಾವುದೇ ಭಾರತೀಯ ಸರ್ಕಾರವೂ ಇದಕ್ಕೆ ಧೈರ್ಯ ಮಾಡಲಿಲ್ಲ. ಹಾಗಾಗಿ ಇಂದಿಗೂ ನಮ್ಮಲ್ಲಿ ಭಾಗಶಃವಾದರೂ ಪಡಿತರ ಪದ್ಧತಿ ಉಳಿದುಕೊಂಡಿದೆ. ಅದು ಬಿಪಿಎಲ್ ರೂಪದಲ್ಲಿ ಅಸ್ತಿತ್ವದಲ್ಲಿದೆ. ಈ ಬದಲಾವಣೆಯನ್ನು ತಂದ ನವ ಉದಾರವಾದೀ ಆಡಳಿತವೂ ದೇಶವನ್ನು ಇಂತಹ ಮಹಾಮಾರಿಯ ಉಪಟಳಕ್ಕೆ ಪದೇ ಪದೇ ಒಡ್ಡುತ್ತಲೇ ಇದೆ. ಈ ಬದಲಾವಣೆಗಳನ್ನು ತಪ್ಪಿಸಿ ಮತ್ತೆ ಹಳೆಯ ವ್ಯವಸ್ಥೆಯನ್ನು ತರಬೇಕಾಗಿದೆ.

ಪ್ರಸ್ತುತ ಮಹಾಮಾರಿಯಿಂದ ನಾವು ಕಲಿಯಬೇಕಾದ ಒಟ್ಟಾರೆ ಪಾಠ ಅಂದರೆ ಸಮಗ್ರ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಹಾಗೂ ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಮತ್ತೆ ಪರಿಚಯಿಸಬೇಕು. ಇಲ್ಲದೇ ಹೋದರೆ ಹಲವು ಪ್ರಶಸ್ತ ಜೀವಗಳನ್ನು ಅನಾವಶ್ಯಕವಾಗಿ ಕಳೆದುಕೊಳ್ಳಬೇಕಾಗುತ್ತದೆ.



**(ಲೇಖಕರು ಜೆಎನ್‌ಯುನಲ್ಲಿ ಅರ್ಥಶಾಸ್ತ್ರ ಬೋಧಿಸಿದ ದೇಶದ ಹಿರಿಯ ಆರ್ಥಿಕ ತಜ್ಞರು ಮತ್ತು ರಾಜಕೀಯ ವಿಶ್ಲೇಷಕರು)**

(ಕೃಪೆ: **ಪೀಪಲ್ಸ್ ಡೆಮಾಕ್ರಸಿ,** ೨೨ ಮಾರ್ಚ್, ೨೦೨೦ **ಕನ್ನಡಕ್ಕೆ: ಟಿ.ಎಸ್. ವೇಣುಗೋಪಾಲ್**)

ಪ್ರಚಲಿತ-೩

# ‘ನಮಸ್ತೆ ಟ್ರಂಪ್’ ಮತ್ತು ತಂಗ್ರಿ ಕಬಾಬ್ ಹಾಗೂ ಪವಿತ್ರ ಗೋವುಗಳು.

**–ಮಧುಮಿತ ದತ್ತ, ಸಿರೀಶ ನಾಯ್ಡು**



**ಭಾ**ರತೀಯರು ತಮ್ಮ ತಂಗ್ರಿ ಕಬಾಬ್‌ಗಳನ್ನು, ಅಂದರೆ ಸುಟ್ಟ ಕೋಳಿಕಾಲುಗಳನ್ನು ತಿನ್ನುವುದನ್ನು ಇಷ್ಟ ಪಡುತ್ತಾರೆ. ಅಮೆರಿಕನ್ನರು ತಮ್ಮ ಶೀತಕಗಳಲ್ಲಿ ತುಂಬಿಸಿಟ್ಟುಕೊಂಡಿರುವ ಮಿಲಿಯಾಂತರ ಟನ್ ಕೋಳಿ ಕಾಲುಗಳನ್ನು ಮಾರಲು ಕಾತುರರಾಗಿದ್ದಾರೆ. ಎರಡು ಬಹು ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳೆಂದು ಕರೆಯಲ್ಪಡುವ ದೇಶಗಳ ನಾಯಕರು ಫೆಬ್ರವರಿ ೨೪ ರಿಂದ ೨೬ ರ ನಡುವಿನ ಮೂರು ದಿನಗಳ ಡೊನಾಲ್ಡ್ ಟ್ರಂಪ್ ಭಾರತ ಭೇಟಿಯ ಸಂದರ್ಭದಲ್ಲಿ ಮಾರಾಟ ಮಾಡುವವರ ಮತ್ತು ಅವರ ಗಿರಾಕಿಗಳ ಇಚ್ಛೆಗಳಿಗೆ ಉದಾತ್ತವಾಗಿ ಸ್ಪಂದಿಸಿದ್ದಾರೆ.

ಅಮೆರಿಕ, ಭಾರತಗಳ ನಡುವೆ ವ್ಯಾಪಾರೀ ಒಪ್ಪಂದ ಸಾಧ್ಯವಿಲ್ಲದಿರುವಾಗ, ಭಾರತವು ಕೋಳಿಕಾಲುಗಳ ಮೇಲಿನ ಆಮದು ಸುಂಕವನ್ನು ೧೦೦% ನಿಂದ ೨೫%ಗೆ ಇಳಿಸುವ ನಿರ್ಧಾರ ಭಾರತದ ಸಣ್ಣ ಕುಕ್ಕುಟೋದ್ಯಮದ ರೈತರನ್ನು ನಾಶಮಾಡಬಲ್ಲ ನಡೆಯಾಗಿದೆ. ಅದರೆ ಸಹಸ್ರಾರು ಸಂಖ್ಯೆಯ ಉದ್ಯೋಗ ನಷ್ಟ ಹಾಗೂ ಇನ್ನೂ ಹೆಚ್ಚಿನ ರೈತರ ಆತ್ಮಹತ್ಯೆಗಳಂತಹ ಸಣ್ಣ ಪುಟ್ಟ ಸಂಗತಿಗಳಾದರೂ ಟ್ರಂಪ್– ಮೋದಿ ಬಾಂಧವ್ಯವನ್ನು ಹಾಳು ಮಾಡಲು ಏಕೆ ಬಿಡಬೇಕು ಅಲ್ಲವೆ?

ಕಾಂಗ್ರೆಸ್ ನೇತೃತ್ವದ ಹಿಂದಿನ ಯುಪಿಎ ಸರ್ಕಾರವು ೨೦೦೬ ರಿಂದ ಪಕ್ಷಿಸಂಬಂಧಿ ಇನ್‌ಫ್ಲೂಯೆಂಜಾ ಸೋಂಕಿನ ಸಾಧ್ಯತೆಯ ಕಾರಣವನ್ನು ಮುಂದೊಡ್ಡಿ, ವಾಸ್ತವದಲ್ಲಿ ಭಾರತದ ಕುಕ್ಕುಟ ಉದ್ದಿಮೆಯನ್ನು ರಕ್ಷಿಸುವ ಉದ್ದೇಶದಿಂದ ಅಮೆರಿಕದ ಕೋಳಿ ಆಮದಿನ ವಿರುದ್ಧ ತಡೆಯನ್ನು ವಿಧಿಸಿತ್ತು. ಪ್ರತಿಯಾಗಿ ಅಮೆರಿಕವು ಭಾರತದ ವಿರುದ್ಧ ವಿಶ್ವ ವಾಣಿಜ್ಯ ಸಂಸ್ಥೆಗೆ(WTO) ದೂರು ನೀಡಿತ್ತು. ಸಂಸ್ಥೆಯು ೨೦೧೪ ರಲ್ಲಿ ಅಮೆರಿಕದ ಪರವಾಗಿ ತೀರ್ಪು ನೀಡಿದ್ದು ಅದರ ವಿರುದ್ಧ ಭಾರತವು ೨೦೧೫ ರಲ್ಲಿ ಮೇಲ್ಮನವಿ ಸಲ್ಲಿಸಿ ಸೋಲು ಕಂಡಿತ್ತು. ವಿಶ್ವ ವಾಣಿಜ್ಯ ಸಂಸ್ಥೆಯ ತೀರ್ಪನ್ನು ಮನ್ನಿಸದ ಕಾರಣಕ್ಕೆ ೨೦೧೬ರಲ್ಲಿ ಅಮರಿಕವು ಭಾರತಕ್ಕೆ ಆರ್ಥಿಕ ದಿಗ್ಬಂಧನ ವಿಧಿಸುವ ಬೆದರಿಕೆ ಒಡ್ಡಿ ಪರಿಹಾರಕ್ಕಾಗಿ ಒತ್ತಾಯಿಸಿತ್ತು. ಜಾಗತಿಕ ಕುಕ್ಕುಟ ಉತ್ಪಾದನೆಯಲ್ಲಿ ಶೇ. ೧೮ ಪಾಲು ಹೊಂದಿರುವ ಅಮೆರಿಕದ ಕುಕ್ಕುಟ ಉದ್ದಿಮೆಯು ಪ್ರಪಂಚದಲ್ಲೇ ಅತಿ ದೊಡ್ಡ ಕುಕ್ಕುಟ ಉದ್ದಿಮೆಯಾಗಿದೆ. ಕ್ಷಿಪ್ರವಾಗಿ ಬೆಳೆಯುತ್ತಿರುವ ಸ್ಥಳೀಯ ಬೇಡಿಕೆಯೊಂದಿಗೆ ಭಾರತವು ಈ ಉದ್ಯಮದಲ್ಲಿ ಜಾಗತಿಕವಾಗಿ ೫ನೆಯ ಸ್ಥಾನದಲ್ಲಿದೆ. ಈಗ ಆಮದಿನ ಮೇಲೆ ನಿರ್ಬಂಧವನ್ನು ತೆಗೆದು ಹಾಕಿರುವುದರಿಂದ ಅಮೆರಿಕದ ಕುಕ್ಕುಟ ಉದ್ದಿಮೆಗೆ ಕನಿಷ್ಟ ೩೦೦ ಮಿಲಿಯನ್ ಅಮೆರಿಕನ್ ಡಾಲರ್‌ಗಳ ಮಾರುಕಟ್ಟೆಯನ್ನು ಒದಗಿಸಿದಂತಾಗಿದೆ.

ಕೋಳಿ ಕಾಲು ಮಾತ್ರವಲ್ಲದೆ ಭಾರತವು ತನ್ನ ಹೈನೋದ್ಯಮ ಮಾರುಕಟ್ಟೆಯನ್ನೂ ಸಹ ಅಮೆರಿಕದ ಆಮದಿಗೆ ಮುಕ್ತಗೊಳಿಸುವ ಪ್ರಸ್ತಾವನೆಗೆ ಸಮ್ಮತಿಸಿದೆ. ಅದು ಸುಮಾರು ೭೫ ಮಿಲಿಯನ್ ಬಡ ಮತ್ತು ಭೂಹೀನ ರೈತರಿಗೆ ದುರದೃಷ್ಟದ ಮುನ್ಸೂಚನೆಯಾಗಿದೆ. ಈ ಎರಡೂ ವರ್ಗಗಳ ಪ್ರತಿಯೊಬ್ಬ ವ್ಯಕ್ತಿಯೂ, ವರ್ಷದುದ್ದಕ್ಕೂ ಜೀವನೋಪಾಯಕ್ಕೆ ದಾರಿ ಮಾಡುವ ಕನಿಷ್ಠ ಎರಡು ಕರಾವನ್ನು (ಹಸು, ಕುರಿ) ಹೊಂದಿರುತ್ತಾನೆ. ಇದು ಗ್ರಾಮೀಣ ಆರ್ಥಿಕತೆಗೆ ದೊಡ್ಡ ಕೊಡುಗೆ ನೀಡುತ್ತಿದೆ. ಆದರೆ ಆರ್ಥಿಕ ಲೆಕ್ಕಾಚಾರವನ್ನು ಮೀರಿ ಮೋದಿ ಸರ್ಕಾರವನ್ನು ಬಾಧಿಸುತ್ತಿರುವ ವಿಚಾರ ಅಮೆರಿಕದಲ್ಲಿ ದನಗಳ ಮೇವಿನ ಸಮಸ್ಯೆ! ಕೇವಲ ದನದ ಮಾಂಸವನ್ನು ಹೊಂದಿದ್ದಾರೆ ಅಥವಾ ತಿನ್ನುತ್ತಾರೆ ಎಂಬ ಸಂಶಯವೇ ಮುಸ್ಲಿಮರ ಅಥವಾ ದಲಿತರ ಕೊಲೆಗೆ ಕಾರಣವಾಗುವ ‘ಪವಿತ್ರ ಗೋವುಗಳ’ ನಾಡಾದ ಭಾರತಕ್ಕೆ, ದನದ ಸಾರವನ್ನೇ(bovine extract) ಮೇಯುವ ಅಮೆರಿಕದ ದನಗಳ ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುವುದು, ಬಳಸುವುದು ಒಂದು ವಿಪರ್ಯಾಸವೇ ಅಲ್ಲ! ದನದ ಮೇವಿನ ಈ ಅಪಚಾರ ನಡೆದಿಲ್ಲ ಎಂದು ದೃಢೀಕರಣ ನೀಡಲು ಅಮೆರಿಕವು ನಿರಾಕರಿಸಿದಲ್ಲಿ ಧರ್ಮದುರಂಧರರ, ಕೊಲೆಗಡುಕ ಗುಂಪುಗಳ ಕೋಪಕ್ಕೆ ಗುರಿಯಾಗಿ ಈ ಮಾಂಸ ಭಕ್ಷಕ ದನಗಳು ಜೀವವನ್ನೇ ಕಳೆದುಕೊಳ್ಳುವ ಅಪಾಯವಿದೆ. ಮೋದಿಯವರ ದೇಶಕ್ಕೆ ಟ್ರಂಪ್ ಭೇಟಿಯು, ಅದು ಬರೀ ತಂಗ್ರೀ ಕಬಾಬ್ ಮತ್ತು ಹೈನೋದ್ಯಮ ಉತ್ಪಾದನೆಯ ಉದ್ದೇಶಕ್ಕಾದರೂ, ಒಂದು ಅಸಾಧ್ಯವಾದ

**ಟ್ರಂಪ್‌ರ ಮೂರು ಘಂಟೆ ಭೇಟಿಗಾಗಿ ಮಾಡಲಾದ ಖರ್ಚು ಬರೋಬ್ಬರಿ ೮೫ ಕೋಟಿ! ಇದು ಸುಮಾರು ಗುಜರಾತ್ ರಾಜ್ಯದ ವಾರ್ಷಿಕ ಬಜೆಟ್‌ನ ಶೇ.೧.೫ ರಷ್ಟು. ಗುಜರಾತ್‌ನ ೪೨% ಮಕ್ಕಳು ಕುಂಠಿತ ಬೆಳವಣಿಗೆಯಿಂದ ನರಳುತ್ತಿದ್ದಾರೆ ಮತ್ತು ಮಕ್ಕಳ ನವೆಯುವಿಕೆಯ ವಿಚಾರದಲ್ಲಿ ಭಾರತವು ಜಾಗತಿಕ ಮಟ್ಟದಲ್ಲಿ ಶೇ.೨೦.೮ ನೊಂದಿಗೆ ಪ್ರಥಮ ಸ್ಥಾನದಲ್ಲಿದೆ.**

ಪರಿಣಾಮವನ್ನು ಉಂಟು ಮಾಡಬಹುದೆಂದು ನಿರೀಕ್ಷಿಸಲಾಗುತ್ತಿದೆ.

ಅಹಮದಾಬಾದ್‌ನಲ್ಲಿ ಜರುಗಿದ ಈ ‘ನಮಸ್ತೆ ಟ್ರಂಪ್’ ಬೃಹತ್ ಪ್ರದರ್ಶನಕ್ಕಾಗಿ ನಡೆದ ತಯಾರಿಯು ೨೦ ಕಿಮೀ ಉದ್ದದ ೧೮ ರಸ್ತೆಗಳ ಪುನರ್ನಿರ್ಮಾಣ, ಅಥವಾ ಅಗಲೀಕರಣ, ಅರ್ಧ ಕಿಮೀ ಉದ್ದದ ಇಟ್ಟಿಗೆ ಗೋಡೆ ನಿರ್ಮಾಣ, ನಗರದ ಅಲಂಕಾರಗಳನ್ನು ಒಳಗೊಂಡಿತ್ತು. ವಿಮಾನ ನಿಲ್ದಾಣದಿಂದ ಕಾರ್ಯಕ್ರಮಕ್ಕಾಗಿ ಇನ್ನೂ ನಿರ್ಮಾಣ ಹಂತದಲ್ಲಿರುವ ಮೆಗಾ ಕ್ರಿಕೆಟ್ ಮೈದಾನದವರೆಗೆ ತಾಳೆ ಜಾತಿಯ ಮರಗಳನ್ನು ನೆಡುವುದೂ ಈ ಅಲಂಕಾರದ ಭಾಗವಾಗಿತ್ತು. ಈ ಎಲ್ಲ ಡೌಲು ಪ್ರದರ್ಶನಕ್ಕಾಗಿ ಅಹಮದಾಬಾದ್‌ನ ಕೊಳೆಗೇರಿಯ ಸಾವಿರಾರು ಜನರನ್ನು ಅವರ ನೆಲೆಗಳಿಂದ ಹೊಸ ಇಟ್ಟಿಗೆ ಗೋಡೆಯಾಚೆಗೆ ಎತ್ತಂಗಡಿ ಮಾಡಲಾಯಿತು. ಆದರೆ ಗೋಡೆಯ ಬಗೆಗಿನ ಯಾವುದೇ ಅಸಮಾಧಾನವು ಅದರ ಮೇಲೆ ಕೈಯಿಂದ ಚಿತ್ರಿಸಿದ ಇಬ್ಬರು ಮಹಾನ್ ನಾಯಕರ ಚಿತ್ರಗಳನ್ನು ಮತ್ತು ‘ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವವು ಜಗತ್ತಿನ ಅತ್ಯಂತ ಪುರಾತನ ಪ್ರಜಾಪ್ರಭುತ್ವವನ್ನು ಸಂಧಿಸುತ್ತದೆ’ ಎಂಬ ಘೋಷಣೆಗಳನ್ನು ನೋಡಿದ ಕೂಡಲೇ ಕರಗಿಹೋಗುವಂತಿದ್ದವು! ಟ್ರಂಪ್‌ರ ಮೂರು ಘಂಟೆ ಭೇಟಿಗಾಗಿ ಮಾಡಲಾದ ಖರ್ಚು ಬರೋಬ್ಬರಿ ೮೫ ಕೋಟಿ! ಇದು ಸುಮಾರು ಗುಜರಾತ್ ರಾಜ್ಯದ ವಾರ್ಷಿಕ ಬಜೆಟ್‌ನ ಶೇ.೧.೫ ರಷ್ಟು. ಗುಜರಾತ್‌ನ ಶೇ.೪೨ ಮಕ್ಕಳು ಕುಂಠಿತ ಬೆಳವಣಿಗೆಯಿಂದ ನರಳುತ್ತಿದ್ದಾರೆ ಮತ್ತು ಮಕ್ಕಳ ನವೆಯುವಿಕೆಯ ವಿಚಾರದಲ್ಲಿ ಭಾರತವು ಜಾಗತಿಕ ಮಟ್ಟದಲ್ಲಿ ಶೇ.೨೦.೮ ನೊಂದಿಗೆ ಪ್ರಥಮ ಸ್ಥಾನದಲ್ಲಿದೆ..

ಮೋದಿ ಮತ್ತು ಟ್ರಂಪ್ ಅವರುಗಳು ಪರಸ್ಪರ ಸತ್ಕಾರದಲ್ಲಿ ತೊಡಗಿದ್ದಾಗ, ಅವರುಗಳು ತಮ್ಮ ಮನಸ್ಸಿಗೆ ಬಂದಹಾಗೆ ಆಡಳಿತ ನಡೆಸುತ್ತಿರುವ ದೇಶಗಳಲ್ಲಿ ಮೂಡುತ್ತಿರುವ ಸಂಕಷ್ಟದ ಎರಡು ಸಮಾನಾಂತರ ಕಥೆಗಳನ್ನು ನಾವು ಕಾಣುತ್ತಿದ್ದೆವು. ಅಮೆರಿಕದಲ್ಲಿ ಅದು, ಮಧ್ಯ ಅಮೆರಿಕ ದೇಶಗಳಿಂದ ಜೀವನೋಪಾಯ ಹುಡುಕಿಕೊಂಡು ಬಂದ ವಲಸಿಗರು ಕ್ರೂರವಾದ ದೈಹಿಕ ಮತ್ತು ಆರ್ಥಿಕ ಕ್ರಮಗಳಿಂದ, ತಪ್ಪಿಸಿಕೊಂಡು ಓಡುತ್ತಿರುವುದು, ಭಾರತದಲ್ಲಿ ೩೭೦ ನೆಯ ವಿಧಿಯನ್ನು ರದ್ದುಪಡಿಸಿದ್ದರಿಂದ ಕಾಶ್ಮೀರದ ಜನತೆಯ ಜೀವನ ಮತ್ತಷ್ಟು ಹೆಚ್ಚು ಸಂಕಷ್ಟಕ್ಕೊಳಗಾಗಿದ್ದು. ಪೌರತ್ವ ತಿದ್ದುಪಡಿ ಮಸೂದೆಯು ಸಮಂಜಸವಾದ ದಾಖಲೆಗಳನ್ನು ಒದಗಿಸಲಾರದ ಹೆಚ್ಚಿನ ಸಂಖ್ಯೆಯ ಪ್ರಜೆಗಳಲ್ಲಿ ಅಸುರಕ್ಷಿತತೆಯ ಭಾವನೆಯನ್ನು ಮೂಡಿಸಿದೆ. ಸರ್ಕಾರವನ್ನು ಟೀಕಿಸುವ ಸಂಸ್ಥೆಗಳು ಮತ್ತು ವ್ಯಕ್ತಿಗಳ ವಿರುದ್ಧ ದೈಹಿಕ/ಪರೋಕ್ಷ ದಾಳಿಗಳು ಹೆಚ್ಚುತ್ತಿವೆ. ಅವರನ್ನು ಬೆಂಬತ್ತಲಾಗುತ್ತಿದೆ/‘ಟ್ರೋಲ್ ಮಾಡಲಾಗುತ್ತದೆ ಅಥವಾ ದೇಶದ್ರೋಹದ ಆಪಾದನೆ ಹೊರಿಸಲಾಗುತ್ತದೆ. ಪ್ರಭುತ್ವದ ಮತ್ತು ಬಹುಸಂಖ್ಯಾತವಾದಿ ಹಿಂಸೆಯು ಹೆಚ್ಚುತ್ತಿದೆ. ಅದೇ ಸಮಯಕ್ಕೆ ನೋಟು ಅಮಾನ್ಯೀಕರಣ ಜಿಎಸ್‌ಟಿಗಳಂತಹ ಅನಾಹುತಕಾರಿ ಆರ್ಥಿಕ ನೀತಿಗಳು ಜೀವನೋಪಾಯಗಳನ್ನೇ ನಾಶಮಾಡುತ್ತಿವೆ. ಮೋದಿ ಸರ್ಕಾರವು ಅಧಿಕೃತ ಆರ್ಥಿಕ ಮಾಹಿತಿಗಳನ್ನು ಮತ್ತು ಅಂಕಿ ಅಂಶಗಳನ್ನು ಬಿಡುಗಡೆ ಮಾಡುವುದನ್ನು ಬಿಗಿಯಾಗಿ ನಿಯಂತ್ರಿಸುವುದರಿಂದ ಭಾರತದ ಆರ್ಥಿಕತೆಯ ಸಮಗ್ರ ಮೌಲ್ಯಮಾಪನಕ್ಕೆ ಅಡ್ಡಿಯನ್ನುಂಟು ಮಾಡುತ್ತಿದೆ.

ಮೋದಿಯವರ ಆಡಳಿತದಲ್ಲಿ ಭಾರತ ಮತ್ತು ಟ್ರಂಪ್ ಆಡಳಿತದಲ್ಲಿ ಅಮೆರಿಕ ಒಂದು ಕಾಯಿಯ ಒಳಗಿರುವ ಬಟಾಣಿ ಕಾಳುಗಳಂತೆ ಒತ್ತೊತ್ತಾಗಿವೆ. ಅವರು ಮಾಡಿಕೊಳ್ಳುವ ಒಪ್ಪಂದಗಳು ಏನೇ ಇದ್ದರೂ ಕಳೆದುಕೊಳ್ಳುವವರು ಎರಡೂ ದೇಶಗಳ ಸಾಮಾನ್ಯ ಜನ.



**(ಮಧುಮಿತಾ ದತ್ತ ಮತ್ತು ಸಿರೀಶ ನಾಯ್ಡು ಅವರು ಅಮೆರಿಕದಲ್ಲಿ ನೆಲೆಸಿರುವ ಸಂಶೋಧಕರು)**

**(ಕೃಪೆ: ಜನತಾ, ೧, ಮಾರ್ಚ್ ೨೦೨೦ ಕನ್ನಡಕ್ಕೆ: ಎಂ. ರಾಜು)**

ಪ್ರಚಲಿತ-೪

# ಉತ್ತರಪ್ರದೇಶವೋ? 'ಉಲ್ಟಾ ಪ್ರದೇಶ'ವೋ?: ಆದಿತ್ಯನಾಥರ ಎರ್‍ರಾಬಿರ್‍ರಿ ಆಡಳಿತ...

–ನ್ಯಾ. ಮಾರ್ಕಂಡೇಯ ಕಟ್ಜು



ಇತ್ತೀಚೆಗೆ 'ಉಲ್ಟಾ ಪ್ರದೇಶ'(ಕ್ಷಮಿಸಿ, ಉತ್ತರ ಪ್ರದೇಶ)ದಲ್ಲಿ ನಡೆಯುತ್ತಿರುವುದನ್ನು ಗಮನಿಸಿ ನಾನು ದಿಗಿಲುಗೊಂಡಿದ್ದೇನೆ. ೨೦ ವರ್ಷ ವಕೀಲನಾಗಿ ಮತ್ತು ೨೦ ವರ್ಷ ನ್ಯಾಯಾಧೀಶನಾಗಿ ಕೆಲಸ ಮಾಡಿರುವ ನಾನು ಕಾನೂನಿನ ತತ್ವಗಳನ್ನು ಚೆನ್ನಾಗಿ ಬಲ್ಲವನೆಂದುಕೊಂಡಿದ್ದೆ. ಆದರೆ ಈಗ, ಲೂಯಿಸ್ ಕೆರೋಲ್‌ರ 'ಅಲೈಸ್ ಇನ್ ವಂಡರ್‌ಲ್ಯಾಂಡ್'ನಲ್ಲಿ ಮಾತ್ರ ಇರಬಹುದಾದ, ಒಂದು ಹೊಸ ನ್ಯಾಯಶಾಸ್ತ್ರವನ್ನು ಕಲಿಯುತ್ತಿದ್ದೇನೆ. ಹೆಸರುವಾಸಿಯಾದ ಆ ಪುಸ್ತಕದಲ್ಲಿ ಬರುವ 'ಹೃದಯಗಳ ರಾಣಿ'(ಕ್ವೀನ್ ಆಫ್ ಹಾರ್ಟ್ಸ್)ಯು ಕೈದಿಗಳತ್ತ ತಿರುಗಿ 'ಇವರ ತಲೆಗಳನ್ನು ಕಡಿದು ಹಾಕಿ' ಎಂದು ಅರಚುತ್ತಾಳೆ. ವಿಚಾರಣೆ ನಡೆಸುವ ಬಗ್ಗೆ ಒಬ್ಬರು ಸ್ವಲ್ಪ ಧೈರ್ಯವಹಿಸಿ ಕೇಳಿದಾಗ, ಅವಳು, 'ಮೊದಲು ತಲೆಗಳನ್ನು ಕಡಿದು ಹಾಕಿ, ಆಮೇಲೆ ವಿಚಾರಣೆ' ಎಂದು ಹೇಳುತ್ತಾಳೆ.

ಅದೇ ರೀತಿ, ಉ.ಪ್ರದೇಶದಲ್ಲಿ ಸಿಎಎ ವಿರೋಧಿ ಪ್ರತಿಭಟನೆಗಳ ಸಂದರ್ಭದಲ್ಲಿ ಚಿಗುರಿಕೊಂಡಿರುವ ಹಲವಾರು ವೀರಪುತ್ರರು ಯಾವ ಕಾನೂನಿನ ಅನುಮೋದನೆಯೂ ಇಲ್ಲದೇ, ಯಾವ ವಿಚಾರಣೆಯೂ ನಡೆಸದೇ(ಅದೇನಾದರೂ ಇದೆಯೆಂದಾದರೆ, ಮುಂದೆಂದೋ ನಡೆಯುವ) ಭಾರೀ ದಂಡಗಳನ್ನು ವಿಧಿಸುತ್ತಿದ್ದಾರೆ. ಅಂಗಡಿಮುಂಗಟ್ಟುಗಳಿಗೆ ಬೀಗಮುದ್ರೆ ಜಡಿದು, ಹಿಂದೆ ಮುಂದೆ ನೋಡದೇ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದಾರೆ...

ಅಂತೆಯೇ, ಮುರಾದಾಬಾದ್‌ನ ಈದ್ಗಾ ಮೈದಾನದಲ್ಲಿ ನಡೆದ ಸಿಎಎ ವಿರೋಧಿ ಪ್ರತಿಭಟನೆಯ ಸಂಬಂಧವಾಗಿ, ಮುರಾದಾಬಾದ್‌ನ ವೀರಪುತ್ರ, ಜಿಲ್ಲಾ ಮ್ಯಾಜಿಸ್ಟ್ರೇಟರಾದ ರಾಕೇಶ್ ಸಿಂಗ್ ಅವರು, ಕವಿ ಇಮ್ರಾನ್ ಪ್ರತಾಪ್‌ಗರ್ಹಿಯವರಿಗೆ ರೂ.೧.೦೫ ಕೋಟಿ ಮೊತ್ತದ ದಂಡ ವಿಧಿಸಿದ್ದಾರೆ. ಈ ದಂಡದ ಮೊತ್ತವನ್ನು, ಈದ್ಗಾ ಪ್ರತಿಭಟನೆಯ ಸ್ಥಳದಲ್ಲಿ ನಿಯೋಜಿಸಿರುವ ಪೊಲೀಸ್ ಮತ್ತು ಅರೆಸೈನಿಕ ಪಡೆಗಳ ದಿನದ ಖರ್ಚಿನ ಆಧಾರದ ಮೇಲೆ ಲೆಕ್ಕಾಚಾರ ಮಾಡಲಾಗಿದೆ.

ಪ್ರತಿಭಟನೆಯನ್ನು ನಡೆಸುವ ಮುನ್ನ ತಮ್ಮ ಅನುಮತಿಯನ್ನು ಪಡೆದಿಲ್ಲ ಎನ್ನುವುದು ಜಿಲ್ಲಾ ಮ್ಯಾಜಿಸ್ಟ್ರೇಟರ ಹೇಳಿಕೆ. ಆದರೆ ಸಂವಿಧಾನದ ೧೯(೧)(ಬಿ) ಕಲಮು ಈ ರೀತಿ ಹೇಳುತ್ತದೆ: "ಎಲ್ಲ ನಾಗರೀಕರೂ ಶಾಂತಿಯುತವಾಗಿ ಮತ್ತು ನಿಶ್ಶಸ್ತ್ರರಾಗಿ ಸಭೆ ಸೇರುವ ಹಕ್ಕುಳ್ಳವರಾಗಿದ್ದಾರೆ." ಮತ್ತು ಈ ಮೂಲಭೂತ ಹಕ್ಕನ್ನು ಚಲಾಯಿಸಲು ಜಿಲ್ಲಾ ಮ್ಯಾಜಿಸ್ಟ್ರೇಟರ ಅನುಮತಿಯನ್ನು ಪಡೆಯಬೇಕಿಲ್ಲ.

ಹೌದು, ಸಂವಿಧಾನದ ೧೯(೩)ನೇ ಕಲಮಿನ ಪ್ರಕಾರ, ಸಾರ್ವಜನಿಕ ಸುವ್ಯವಸ್ಥೆಯ ಅಥವಾ ಪ್ರಭುತ್ವದ ಸಾರ್ವಭೌಮತ್ವವನ್ನು ಕಾಪಾಡುವ ದೃಷ್ಟಿಯಿಂದ, ಸಕಾರಣವಾದ ಕೆಲ ನಿರ್ಬಂಧಗಳನ್ನು, ಈ ಹಕ್ಕಿನ ಮೇಲೆ ಹೇರುವ ಕಾನೂನನ್ನು ಜಾರಿ ಮಾಡಬಹುದು. ಆದರೆ ಮುರಾದಾಬಾದ್‌ನ ಈದ್ಗಾ ಮೈದಾನದಲ್ಲಿ ನಡೆದ ಸಿಎಎ ಪ್ರತಿಭಟನೆಯ ಮೇಲೆ, ಪ್ರಭುತ್ವದ ಅಥವಾ ಸಾರ್ವಜನಿಕ ಸುವ್ಯವಸ್ಥೆಯ ಸಾರ್ವಭೌಮತ್ವವನ್ನು ಉಲ್ಲಂಘಿಸಿರುವ ಯಾವ ಆಪಾದನೆಯೂ ಇರಲಿಲ್ಲ ಎನ್ನುವುದನ್ನು ಗಮನಿಸಬೇಕು.

ಮುಜ಼ಫರ್ ನಗರದ ವೀರಪುತ್ರ(ಜಿಲ್ಲಾ ಮ್ಯಾಜಿಸ್ಟ್ರೇಟ್), ಸಿಎಎ ವಿರೋಧಿ ಪ್ರತಿಭಟನಾಕಾರರಿಗೆ ಸೇರಿದ್ದೆನ್ನಲಾದ ೬೭ ಅಂಗಡಿ ಮುಂಗಟ್ಟುಗಳಿಗೆ ಬೀಗಮುದ್ರೆ ಜಡಿಯುವ ಆಜ್ಞೆಯನ್ನು ಹೊರಡಿಸಿದ್ದಾರೆ. ಆದರೆ, ಯಾವ ಕಾನೂನಿನ ಆಧಾರದ ಮೇಲೆ ಮತ್ತು ಹೇಗೆ ಅವರುಗಳನ್ನು ಗುರುತಿಸಲಾಯಿತು, ಅವರುಗಳ ಹೇಳಿಕೆಗಳಿಗೆ ಅವಕಾಶವನ್ನೇನಾದರೂ ಕೊಟ್ಟಿದ್ದರಾ ಎನ್ನುವುದು ಯಾರಿಗೂ ತಿಳಿಯದ ವಿಷಯವಾಗಿದೆ!. ಕಾನೂನನ್ನು ಗಾಳಿಗೆ ತೂರುವ ಈ ರೀತಿಯಾದ ಕ್ರಿಯೆಗಳನ್ನು ನಿಲ್ಲಿಸದೇ ಹೋದರೆ, ಭಾರತದಲ್ಲಿ ಫ್ಯಾಸಿಸ್ಟ್ ಯುಗ ಆರಂಭವಾದಂತೆಯೇ.

ಉ.ಪ್ರದೇಶದ ಮಣ್ಣಿನಲ್ಲಿ ಇಂಥ ಹಲವು ವೀರಪುತ್ರರು ಹುಟ್ಟಿಕೊಳ್ಳುತ್ತಿದ್ದಾರೆ ಎನಿಸುತ್ತಿದೆ. ಇತ್ತೀಚಿನ ವೀರಪುತ್ರ ಎಂದರೆ, ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಕೆ.ಪಿ.ಸಿಂಗ್. ಅವರು ಒಂದು ತುಘಲಕ್ ಆಜ್ಞೆಯನ್ನು ಹೊರಡಿಸಿದ್ದಾರೆ. ಅದೇನೆಂದರೆ, ೨೦೧೯ರ ಡಿಸೆಂಬರ್‌ನಲ್ಲಿ ಲಕ್ನೋದ ಹಜ಼ರತ್‌ಗಂಜ್‌ನ ಪರಿವರ್ತನ್ ಚೌಕದಲ್ಲಿ ನಡೆದ ಸಿಎಎ ವಿರೋಧಿ ಪ್ರತಿಭಟನೆಯ ಸಂದರ್ಭದಲ್ಲಿ ಉಂಟಾದ ಗಲಾಟೆಯಿಂದ ಸಾರ್ವಜನಿಕ ಆಸ್ತಿಗಳಿಗೆ ಹಾನಿಯಾಗಿರುವ ಕಾರಣವನ್ನಿಟ್ಟುಕೊಂಡು, ೨೮ ಜನ ಸಿಎಎ ವಿರೋಧಿ ಪ್ರತಿಭಟನಾಕಾರರಿಂದ ೬೩ ಲಕ್ಷ ರೂಪಾಯಿಗಳನ್ನು ೩೦ ದಿನಗಳೊಳಗಾಗಿ ವಸೂಲು ಮಾಡಬೇಕೆಂಬುದು!

ಈ ೨೮ ಜನರಲ್ಲಿ ೭೭ ವರ್ಷ ವಯಸ್ಸಿನ ನಿವೃತ್ತ ಐಪಿಎಸ್ ಅಧಿಕಾರಿ ಎಸ್.ಆರ್.ಧಾರಾಪುರಿ, ೭೩ ವರ್ಷದ ಸಾಮಾಜಿಕ ಕಾರ್ಯಕರ್ತ ಮೊಹಮದ್ ಶೋಯೆಬ್ ಇದ್ದಾರೆ. ದೊಂಬಿ ನಡೆದಾಗ್ಲ ಅವರುಗಳು ಗೃಹಬಂಧನದಲ್ಲಿದ್ದುದಾಗಿ ಪ್ರತಿಪಾದಿಸಿದ್ದಾರೆ ಕೂಡಾ. ಬಂಧನಕ್ಕೊಳಗಾಗಿ ಪೊಲೀಸರ ಕೆಟ್ಟ ವರ್ತನೆಗಳಿಂದ ನೊಂದಿರುವ ಮತ್ತೊಬ್ಬರು ಸಾಮಾಜಿಕ ಕಾರ್ಯಕರ್ತೆ ಸದಾಫ್ ಜಫರ್, ತಮಗೂ ಈ ಹಿಂಸಾಕೃತ್ಯಕ್ಕೂ ಏನೇನೂ ಸಂಬಂಧವಿಲ್ಲ ಎಂದು ಪ್ರತಿಪಾದಿಸಿದ್ದಾರೆ.

ಉನ್ನತ ಆಧಿಕಾರದಲ್ಲಿರುವವರ ಇಂಥಾ ಉದ್ಧಟತನದ ಕ್ರಿಯೆಗಳ ಬಗೆಗಿನ ಬಹುಮುಖ್ಯ ತಕರಾರೇನೆಂದರೆ, ಅವುಗಳು ನ್ಯಾಯಾಲಯದ ಆಜ್ಞೆಯಿಲ್ಲದೇ ಕಾನೂನಾತ್ಮಕವಾಗಿ ನಡೆಯಲು ಸಾಧ್ಯವಿಲ್ಲದಂಥವು ಮತ್ತು ಅವು, ಆರೋಪಿಗೆ ತನ್ನ ಹೇಳಿಕೆಯನ್ನು ನೀಡಲು ಅವಕಾಶ ಕೊಡುವ, ಆರೋಪಿಯು ಇಚ್ಛಿಸಿದಲ್ಲಿ ವಕೀಲರ ಮೂಲಕ ಹೇಳಿಕೆ ನೀಡಲು ಸಂಪೂರ್ಣ ಅವಕಾಶ ಕೊಡುವಂಥ ಕ್ರಮಬದ್ಧ ವಿಚಾರಣೆಯನ್ನು ನಡೆಸದೇ ನ್ಯಾಯಾಲಯದ ಆಜ್ಞೆ ಪಡೆಯಲಾಗದಂಥವು ಎಂಬುದು.

ಭಾರತೀಯ ದಂಡ ಸಂಹಿತೆಯ ೧೪೭ ನೇ ಸೆಕ್ಷನ್‌ನ ಅಡಿಯಲ್ಲಿ ಮತ್ತು ೧೯೮೪ ರ ಸಾರ್ವಜನಿಕ ಆಸ್ತಿಗಳಿಗೆ ಹಾನಿ ತಡೆಗಟ್ಟುವ ಕಾಯ್ದೆಯ ಅಡಿಯಲ್ಲಿ ಸಾರ್ವಜನಿಕ ಆಸ್ತಿಗೆ ಹಾನಿಯಾದ ಸಂದರ್ಭದಲ್ಲಿ ದಂಡಗಳನ್ನು ವಿಧಿಸಬಹುದು ಎಂಬುದರಲ್ಲಿ ಸಂಶಯವಿಲ್ಲ. ಆದರೆ ಇವು ದಂಡ ವಿಧಿಸುವ ಕಾನೂನುಗಳು. ದಂಡನೀಯ ಅಪರಾಧದ ಆರೋಪಿಗಳಿಗೆ ಯಾವುದೇ ದಂಡ ವಿಧಿಸುವ ಮೊದಲು ಅಪರಾಧ ಕಾರ್ಯವಿಧಾನ ಸಂಹಿತೆ(ಕೋಡ್ ಆಫ್ ಕ್ರಿಮಿನಲ್ ಪ್ರೊಸೀಜರ್)ಯ ನಿಯಮಾವಳಿಯಂತೆ ವಿಚಾರಣೆ ನಡೆಸುವುದು ಕಡ್ಡಾಯ.

ಪ್ರಭುತ್ವವು ದಂಡ ವಿಧಿಸುವ, ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವ ಅಥವಾ ಅಂಗಡಿಗಳಿಗೆ ಬೀಗಮುದ್ರೆ ಹಾಕುವ ಯಾವುದೇ ದಂಡನೀಯ ಕ್ರಮ ಕೈಗೊಳ್ಳುವುದಾದರೂ, ಅವು ನ್ಯಾಯಾಲಯದ ಆಜ್ಞೆಯ ಮೂಲಕ ಕೈಗೊಳ್ಳಬೇಕಾಗಿದೆಯೇ ಹೊರತು ಉನ್ನತ ಅಧಿಕಾರಿಗಳು ಅದಿಲ್ಲದೆ ದಂಡ ವಿಧಿಸುವಂತಿಲ್ಲ. ಆದರೆ, 'ಉಲ್ಟಾ ಪ್ರದೇಶ'ದ ಮಣ್ಣಿನಲ್ಲಿ ಹುಟ್ಟಿಕೊಂಡಿರುವ ಹೊಸ ನ್ಯಾಯಶಾಸ್ತ್ರಕ್ಕೆ ಇವ್ಯಾವುವೂ ಬೇಕೇ ಇಲ್ಲ... ಹೇಗೂ ನಾವು 'ವಂಡರ್‌ಲ್ಯಾಂಡ್'ನಲ್ಲಿ ಬದುಕುತ್ತಿದ್ದೇವಲ್ಲ!



**(ಲೇಖಕರು ನಮ್ಮ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು ಮತ್ತು ಪತ್ರಿಕಾ ಮಂಡಳಿಯ ಮಾಜಿ ಅಧ್ಯಕ್ಷರು)....**

(ಕೃಪೆ: **ಜನತಾ**, ೨೩, ಫೆಬ್ರವರಿ, ೨೦೨೦

ಕನ್ನಡಕ್ಕೆ: ಟಿ.ಎಲ್.ರೇಖಾಂಬ)

**ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ (ರಿ.)**, ಶಿವಮೊಗ್ಗ

**ದಶಮಾನೋತ್ಸವ ವರ್ಷ** (೨೦೧೦-೨೦೨೦)

**ಈ ಸಂದರ್ಭಕ್ಕಾಗಿ ಡಿ.ಎಸ್. ನಾಗಭೂಷಣ ಅವರು ಸಂಪಾದಿಸಿರುವ ಮತ್ತು ಬಳ್ಳಾರಿಯ ಲೋಹಿಯಾ ಪ್ರಕಾಶನವು ಸುಲಭ ಬೆಲೆಗಳಲ್ಲಿ ಪ್ರಕಟಿಸಿರುವ ಎರಡು ಕೃತಿಗಳು ಓದುಗರಿಗೆ ಈಗ ಲಭ್ಯವಿವೆ:**






**ರಸಿಕ ರುದ್ರ ತಪಸ್ವಿ ಲೋಹಿಯಾ** — ಪು: ೧೧೦ ಬೆಲೆ: ರೂ. ೫೧/-

**ಸಮಾಜವಾದದ ಸಾಲು ದೀಪಗಳು** — **ಪುಟ**: ೧೧೭ **ಬೆಲೆ: ರೂ.** ೫೧/-

**ಪ್ರತಿಗಳಿಗೆ ಸಂಪರ್ಕಿಸಿ:**

**ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ, ಶಿವಮೊಗ್ಗ : ೯೪೮೧೩೫೧೦೭೯**

**ಲೋಹಿಯಾ ಪ್ರಕಾಶನ, ಬಳ್ಳಾರಿ: ೯೯೦೦೭೫೦೫೪೯**

# ಕಸ್ತೂರಬಾ-೧೫೦ (೨ನೇ ಭಾಗ)

ಸ್ಮರಣೆ



**ಕಸ್ತೂರಬಾ ಅವರ ೧೫೦ನೇ ಜನ್ಮೋತ್ಸವದ ಸಂದರ್ಭದಲ್ಲಿ ಡಿ.ಎಸ್. ನಾಗಭೂಷಣ ಅವರ 'ಗಾಂಧಿ ಕಥನ'ದಿಂದ ಆಯ್ದ ಘಟನೆಗಳ ಮೂಲಕ ಬಾ ಅವರ ಬದುಕು, ನಿರ್ದಿಷ್ಟವಾಗಿ ಅವರ ದಾಂಪತ್ಯದ ಬಗ್ಗೆ ಒಳನೋಟಗಳನ್ನು ಪಡೆಯುವ ಪ್ರಯತ್ನದ ಎರಡನೆಯ ಭಾಗವಿದು. ಗಾಂಧಿ ದ.ಆಫ್ರಿಕಾವನ್ನು ಬಿಡುವ ಮುನ್ನ ವಿದಾಯ ಭಾಷಣಗಳಲ್ಲಿ ಇನ್ನು ಮುಂದೆ ತಮಗಿಂತ ಹೆಚ್ಚಾಗಿ ತಮ್ಮ ಪತ್ನಿಯ ಬಗ್ಗೆ ಜನ ಹೆಚ್ಚು ಕೇಳಲಿದ್ದಾರೆ ಎಂದವರು, ಭಾರತಕ್ಕೆ ಬಂದಾಗ ತಮಗೆ ದೊರೆತ ಸ್ವಾಗತ ಸಮಾರಂಭಗಳಲ್ಲಿ ತಮ್ಮನ್ನು ಕಸ್ತೂರಬಾ ಅವರ ಪತಿ ಎಂದು ಕರೆದುಕೊಳ್ಳಲು ಇಷ್ಟಪಡುವುದಾಗಿ ಹೇಳಿಕೊಂಡರು. ಆದರೆ ಈ ದಾಂಪತ್ಯ ಸುಗಮವಾದದ್ದೇನಾಗಿರಲಿಲ್ಲ ಇಂತಹ ಸಂಕೀರ್ಣತೆಯ ಕೆಲವು ಚಿತ್ರಗಳು ಇಲ್ಲಿವೆ–ಸಂ..**

## ಕುಟುಂಬದಲ್ಲೊಂದು ಸಣ್ಣ ಬಿರುಗಾಳಿ-ಗಾಂಧಿಯ ಉಪವಾಸ



ಅಸ್ವಸ್ಥರಾಗಿದ್ದ ಕಸ್ತೂರಬಾ ಪ್ರಯಾಣ ಮಾಡಲು ಶಕ್ತರಾದ ಮೇಲೆ ಮೇ ತಿಂಗಳ ಹೊತ್ತಿಗೆ ಅವರು ಫೀನಿಕ್ಸ್‌ಗೆ ಬಂದರು. ಬಂದೊಡನೆ ಅವರಿಗೊಂದು ಕೆಟ್ಟ ಸುದ್ದಿ ಕಾದಿತ್ತು. ಮಣಿಲಾಲ ಮತ್ತು ಜೇಕಿಯ ನಡುವೆ ಮತ್ತೆ ಪ್ರೇಮ ಪ್ರಸಂಗಗಳ ಪುಕಾರು ಹಬ್ಬಿತ್ತು. ಈ ಬಗ್ಗೆ ಬಾ ಕಳವಳ ವ್ಯಕ್ತಪಡಿಸಿದಾಗ, ಗಾಂಧಿ ತಮ್ಮದೇ ರೀತಿಯಲ್ಲಿ ಗುಪ್ತ ತನಿಖೆ ನಡೆಸಿ ಅದು ಸುಳ್ಳು ಎಂಬ ತೀರ್ಮಾನಕ್ಕೆ ಬಂದರಾದರೂ, ಬಾ ಈ ಬಗ್ಗೆ ಮನೆಯಲ್ಲಿ ದಿನನಿತ್ಯ ರಗಳೆ ಶುರು ಮಾಡಿದರು. ಅವರು, ಗಾಂಧಿ ಬೇಕೆಂದೇ ಜೇಕಿಯ ರಕ್ಷಣೆಗೆ ನಿಂತಿದ್ದಾರೆಂದು ದೂರಿದರು. ಇದಕ್ಕೆ ಪ್ರತಿಯಾಗಿ ಗಾಂಧಿ, ಬಾಗೆ ಜೇಕಿಯನ್ನು ಕಂಡರೆ ಕಣ್ಣುರಿ ಎಂದು ದೂರಿದರು. ಇದರ ಪರಿಣಾಮವಾಗಿ ಒಂದು ದಿನ ಗಂಡ ಹೆಂಡಿರ ನಡುವೆ ಭಾರಿ ಕೂಗಾಟಗಳ ಜಗಳವೇ ನಡೆದುಹೋಗಿ ಗಾಂಧಿಯ ಮನಸ್ಸು ಕೆಟ್ಟು ಹೋಯಿತು. ಈ ಬಗ್ಗೆ ಗಾಂಧಿ ತನ್ನ ಅಂತರಂಗವನ್ನೆಲ್ಲ ಸದಾ ತೋಡಿಕೊಂಡು ಹಗುರಾಗುತ್ತಿದ್ದ ಆಪ್ತಮಿತ್ರ ಕಲೆನ್‌ಬಾಕ್‌ಗೆ ಬರೆದ 'ನಾನು ನಿನ್ನೆ ಬಾಳಿನ ಬಹು ಪ್ರಮುಖ ಪಾಠವೊಂದನ್ನು ಕಲಿತೆ' ಎಂದು ಆರಂಭವಾಗುವ ಪತ್ರದಲ್ಲಿ 'ಅವಳು ಕಾಯಿಲೆಯಲ್ಲಿ ಸಾಯಬಾರದಿತ್ತೇ!' ಎಂದು ತಮಗನ್ನಿಸಿದ್ದನ್ನು ಹೇಳಿಕೊಂಡಿದ್ದಾರೆ. ಜೊತೆಗೆ 'ಅವಳನ್ನು, ತಾಯಿಯನ್ನು ಮಗ ನೋಡಿಕೊಂಡಂತೆ ನೋಡಿಕೊಂಡು ರಕ್ಷಿಸಿದೆ. ಆದರೂ ಅವಳು ನನ್ನನ್ನು 'ಹಡೆನಾಗ' ಎಂದು ಕರೆದಳು... ಹೌದು ಸಾರ್ವಜನಿಕ ಸೇವೆ ಮಾಡಬಯಸುವವರು ಮದುವೆಯಾಗಬಾರದು. ಎರಡೂ ಪರಸ್ಪರ ವಿರುದ್ಧ. ಆತ ತನ್ನ ಬದುಕನ್ನು ಒಬ್ಬ ಹೆಂಗಸಿಗೇ ಮುಡಿಪಾಗಿ ಇಡಲಾರ....' ಎನ್ನುತ್ತಲೇ, 'ಅವಳನ್ನು ಬಹಳ ಕೆಟ್ಟ ಹೆಂಡತಿ ಎಂದೂ ಕರೆಯಲಾರೆ. ಏಕೆಂದರೆ ನನ್ನ ಬಾಳಿನಲ್ಲಾದ ಅಲ್ಲೋಲ ಕಲ್ಲೋಲಗಳಂತಹ ಬದಲಾವಣೆಗಳನ್ನು ಅವಳಂತೆ ಇನ್ನೊಬ್ಬ ಹೆಂಗಸು ತಡೆದುಕೊಳ್ಳಲಾಗುತ್ತಿರಲಿಲ್ಲವೇನೋ...' ಎಂದೂ ಅವಲತ್ತುಕೊಂಡಿದ್ದಾರೆ.

ಆದರೆ ನಂತರ ಗೊತ್ತಾದ ಸತ್ಯ ಸಂಗತಿಯಿಂದ ಗಾಂಧಿ ಬೆಚ್ಚಿಬಿದ್ದಿದ್ದಂತೂ ನಿಜ. ಜೇಕಿ ಆಶ್ರಮದ ಇನ್ನೊರ್ವ ಹುಡುಗನೊಂದಿಗೆ ಪ್ರೇಮ ಸಲ್ಲಾಪ ನಡೆಸುತ್ತಿದ್ದಾಗ ಸಿಕ್ಕಿ ಬಿದ್ದಿದ್ದಳು. ಗಾಂಧಿ ಆಘಾತಗೊಂಡು ಕುಸಿದರು. ಅವಳೊಬ್ಬಳು ಹುಟ್ಟು ಸುಳ್ಳಿ, ವಿಶ್ವಾಸದ್ರೋಹಿ ಎಂದು ಕುದಿದರು. ಅವಳನ್ನು ಫಿಜಿಯಲ್ಲಿದ್ದ ಅವಳ ಗಂಡನ ಬಳಿ ಕಳಿಸಲು ತೀರ್ಮಾನಿಸಿದರು. ನಂತರ, ನಂಬಿಕೆ ಇಟ್ಟು ಆಕೆಯ ತಂದೆ ಮತ್ತು ಗಂಡ ತಮ್ಮಲ್ಲಿಗೆ ಕಳಿಸಿದ್ದ ಅವಳನ್ನು ಕೆಟ್ಟತನದಿಂದ ಕಾಪಾಡಲಾಗದ ತಮ್ಮ ತಪ್ಪಿಗೆ ಶಿಕ್ಷೆಯಾಗಿ, ಆತ್ಮಶುದ್ಧಿಗೆಂದು ಎರಡು ವಾರಗಳ ಉಪವಾಸ ಕೈಗೊಂಡರು. ಈ ಉಪವಾಸ ಅವರ ಕೌಟುಂಬಿಕ ಬದುಕಿನಲ್ಲಿ, ನಿರ್ದಿಷ್ಟವಾಗಿ ಅವರ ದಾಂಪತ್ಯದಲ್ಲಿ ಒಂದು ನಿರ್ಣಾಯಕ ಪರಿವರ್ತನೆಯನ್ನೇ ತಂದಿತು ಎಂದೇ ಹೇಳಬೇಕು. ತುಂಬ ನೊಂದಿದ್ದ ಗಾಂಧಿ ಈ ಉಪವಾಸವನ್ನು ಎಷ್ಟು ಕಟ್ಟುನಿಟ್ಟಾಗಿ ಪಾಲಿಸತೊಡಗಿದರೆಂದರೆ ಅವರ ಹೆಂಡತಿ ಮತ್ತು ಮಕ್ಕಳಿಗೆ ಇದು ಪ್ರಾಣಾಹುತಿ ಎಂದೇ ಕಾಣತೊಡಗಿ ಅವರು ತಲ್ಲಣಿಸಿಹೋದರು. ಈ ಅಗ್ನಿ ಪರೀಕ್ಷೆಯಲ್ಲಿ ಗಾಂಧಿ ದೈಹಿಕವಾಗಿ ಹೇಗೋ ಅಧ್ಯಾತ್ಮಿಕವಾಗಿಯೂ ಯಶಸ್ವಿಯಾಗಿ ಹೊರಬಂದು ತಮ್ಮ ಹೆಂಡತಿ ಮಕ್ಕಳ ಆತ್ಮಶುದ್ಧೀಕರಣಕ್ಕೂ ಕಾರಣರಾಗಿದ್ದರು. ಕಸ್ತೂರ ಬಾ ಮತ್ತೆ ಅವರ ಪ್ರಾಣಸಖಿಯಾಗಿದ್ದರು.

## ಗಾಂಧಿಯ ಹಾಲು ವ್ರತ: ಕಸ್ತೂರಬಾ ಹುಡುಕಿದ ಉಪಾಯ!



ಅಕ್ಟೋಬರ್ ವೇಳೆಗೆ ಗಾಂಧಿಯವರನ್ನು ಮೂಲವ್ಯಾಧಿ ಬಾಧಿಸತೊಡಗಿ ತುರ್ತು ಶಸ್ತ್ರಚಿಕಿತ್ಸೆಗಾಗಿ ಬಾಂಬೆಗೆ ಕೊಂಡೊಯ್ಯಲಾಯಿತು. ಚಿಕಿತ್ಸೆಯ ನಂತರ ಚೇತರಿಸಿಕೊಳ್ಳಲು ವೈದ್ಯರು ಹಾಲು ಅವಶ್ಯಕ ಎಂದು ಕಟ್ಟುನಿಟ್ಟಾಗಿ ಹೇಳಿದರು. ಆದರೆ ದನದ ಹಾಲು ಕುಡಿಯುವುದಿಲ್ಲವೆಂದು ಬಹು ಹಿಂದೆಯೇ ಪ್ರತಿಜ್ಞೆ ಮಾಡಿದ್ದ ಗಾಂಧಿ ಹಾಲು ಸೇವಿಸಲು ನಿರಾಕರಿಸಿದರು. ಅವರ ಆರೋಗ್ಯ ಮತ್ತೆ ಹದಗೆಡತೊಡಗಿತು. ಅವರು ಪಿ.ಸಿ.ರೇ ಎಂಬ ತಮಗೆ ಸುಪರಿಚಿತರಾಗಿದ್ದ ಆಹಾರ ಪಂಡಿತರೊಬ್ಬರಿಗೆ ಪತ್ರ ಬರೆದು ಹಾಲು ಒದಗಿಸುವ ಪೋಷಕಾಂಶವನ್ನು ಒದಗಿಸುವ ಹಣ್ಣು–ತರಕಾರಿಗಳಿದ್ದರೆ ತಿಳಿಸಿ ಎಂದು ಪತ್ರ ಬರೆದರು. ಆದರೆ ಅವರ ಸ್ಥಿತಿ ಚಿಂತಾಜನಕವಾಗತೊಡಗಿತ್ತು. ಅವರು ಆಗಾಗ ಪ್ರಜ್ಞೆ ತಪ್ಪುತ್ತಿದ್ದರು. ಅದನ್ನು ಕಂಡು ಕಸ್ತೂರಬಾ ಆತಂಕಿತರಾದರು. ವೈದ್ಯರು, ಅವರು ಹಾಲು ಸೇವಿಸದೆ ಉಳಿಯಲಾರರು ಎಂದರು. ಆಗ ಬಾ ಆರ್ತರಾಗಿ 'ನೀವು ಪ್ರತಿಜ್ಞೆ ಮಾಡಿದ್ದು ದನದ ಹಾಲು ಕುಡಿಯುವುದಿಲ್ಲ ಎಂದಲ್ಲವೇ? ಹಾಗಾದರೆ ಮೇಕೆ ಹಾಲು ಕುಡಿಯಬಹುದಲ್ಲ? ಎಂದರು. ಅವರನ್ನು ಹಾಲು ಸೇವಿಸುವಂತೆ ಮಾಡುವ ದೈವಪ್ರೇರಣೆಯ ಕೊನೆಯ ಉಪಾಯದಂತೆ. ಗಾಂಧಿ ಒಂದು ಕ್ಷಣ ಯೋಚಿಸಿ 'ಆಗಬಹುದು' ಎಂದರು. ಮೇಕೆ ಹಾಲಿನ ವ್ಯವಸ್ಥೆ ಆಯಿತು. ಗಾಂಧಿ ಚೇತರಿಸಿಕೊಳ್ಳಲಾರಂಭಿಸಿದರು. ಕೆಲವು ದಿನಗಳ ನಂತರ ಅಹಮದಾಬಾದ್ ಆಶ್ರಮಕ್ಕೆ ವಾಪಸ್ ಬಂದರು.

ಆದರೆ ವಾಪಸ್ ಬಂದ ಮೇಲೂ ಗಾಂಧಿಗೆ ತಾನು ಭಾಗಶಃ ಪ್ರತಿಜ್ಞಾ ಭಂಗ ಮಾಡಿದ್ದೇನೆ ಎಂಬ ಅಪರಾಧ ಭಾವ ಕಾಡತೊಡಗಿತ್ತು. ತಾವು ತಮ್ಮ ಪ್ರತಿಜ್ಞೆಯನ್ನು ಅವಕಾಶವಾದಿ ವ್ಯಾಖ್ಯಾನಕ್ಕೆ ಒಳಪಡಿಸಿ ಪಾರಾಗುವ ಪ್ರಯತ್ನ ಮಾಡಿದ್ದೇನೆ ಎಂಬ ಅಳುಕೂ ಬಾಧಿಸಿತು. ಜೊತೆಗೆ ತಮ್ಮ ಆಶ್ರಮ ಮಿತ್ರ ನರಹರಿ ಪಾರೀಖ್ 'ಹೇಗೋ ಗಾಂಧಿ ಬದುಕಿಕೊಂಡದ್ದು ಸಂತೋಷ. ಆದರೆ ಅವರು ಹೀಗೆ ಅದರ ತಿರುಳನ್ನು ನಿರ್ಲಕ್ಷಿಸಿ ಪ್ರತಿಜ್ಞಾಪಾಲನೆ ಮಾಡುವ ಬದಲು ಪ್ರತಿಜ್ಞೆಯನ್ನು ಮುರಿಯುವ ಧೈರ್ಯ ಮಾಡಿದ್ದರೆ ಹೆಚ್ಚು ಘನತರವಾಗಿರುತ್ತಿತ್ತು' ಎಂದು ಅಭಿಪ್ರಾಯಪಟ್ಟಿದ್ದನ್ನು ತಿಳಿದ ಗಾಂಧಿ ಅವರ ಮಾತನ್ನು ಅನುಮೋದಿಸಿದರು. ಆದರೆ ಆ ಸಂದರ್ಭದಲ್ಲಿ ಅಸಹಾಯಕ ಹಸುವಿನ ಮುಖಭಾವದೊಂದಿಗೆ ನನ್ನ ಪಕ್ಕ ನಿಂತಿದ್ದ ಕಸ್ತೂರಬಾ ಅವರ ಮಾತಿನಲ್ಲಿನ ಆರ್ತತೆ ನನ್ನನ್ನು ದುರ್ಬಲಗೊಳಿಸಿತು ಎಂದು ಅವರು ಅಲವತ್ತುಕೊಂಡರು. ಗಾಂಧಿ ತಮ್ಮ ಪ್ರತಿಜ್ಞೆಯನ್ನು ಅಕ್ಷರಶಃ ಅರ್ಥದಲ್ಲಲ್ಲದಿದ್ದರೂ ತಿರುಳಿನ ಮಟ್ಟದಲ್ಲಿ ಮುರಿಯುವಷ್ಟು, ಬಾ ಅವರ ಬಗ್ಗೆ ಅವರಿಗೆ ಇದ್ದ 'ದೌರ್ಬಲ್ಯ'ವನ್ನು ಗಾಂಧಿಯವರ ಜೀವನ ಚರಿತ್ರಕಾರ ಲೂಯಿ ಫಿಶರ್ ಸಂಕ್ಷಿಪ್ತವಾಗಿ ತಮ್ಮ 'ಮಹಾತ್ಮ' ಪುಸ್ತಕದಲ್ಲಿ, ಗಾಂಧಿ ಅವರಿಗೆ ಆಪ್ತರಾಗಿ ಗಾಂಧಿ–ಕಸ್ತೂರಬಾ ಅವರ ಸಂಬಂಧವನ್ನು ಅತ್ಯಂತ ಹತ್ತಿರದಿಂದ ಗಮನಿಸಿದ್ದ ರಾಮಚಂದ್ರನ್ ಅವರ ಬರಹಗಳನ್ನು ಉಲ್ಲೇಖಿಸಿ ಚರ್ಚಿಸಿದ್ದಾರೆ. ಗಾಂಧಿ, ಕಸ್ತೂರಬಾ ಅವರ ಸಿಟ್ಟಿಗೆ ಗುರಿಯಾದ ಹಲವು ಪ್ರಸಂಗಗಳನ್ನು ರಾಮಚಂದ್ರನ್ ಈ ಬರಹಗಳಲ್ಲಿ ವಿವರಿಸಿದ್ದಾರೆ.

ತಾವು ತಮ್ಮ ವಿಶಿಷ್ಟ ಜೀವನಕ್ರಮದಿಂದಾಗಿ ಪತ್ನಿಗೆ ಸಾಕಷ್ಟು ನೋವು

ಉಂಟುಮಾಡಿರುವ ಅರಿವು ಗಾಂಧಿಗೆ ಇತ್ತೆಂದು ಹೇಳುವ ಫಿಶರ್, ಆ ಅರಿವಿನ ಒತ್ತಡವೇ ಅವರು ತಮ್ಮ ಪತ್ನಿಯ ಸಲಹೆಯನ್ನು ಒಪ್ಪುವಂತೆ ಪ್ರೇರೇಪಿಸಿರಬೇಕೆಂದು ಅಭಿಪ್ರಾಯ ಪಡುತ್ತಾರೆ.

**ಯರವಾಡ ಸೆರೆಮನೆಗೆ ಗಾಂಧಿ; ಸಬರ್ಮತಿ ಸೆರೆಮನೆಗೆ ಕಸ್ತೂರಬಾ**



**ಗಾಂ**ಧಿ ಲಂಡನ್‌ನಲ್ಲಿನ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದ ನಂತರ ಭಾರತಕ್ಕೆ ಹಿಂದಿರುಗಿದ ಕೆಲ ದಿನಗಳಲ್ಲೇ, ಅಸಹಕಾರ ಸತ್ಯಾಗ್ರಹದ ಪುನರಾರಂಭದ ಕಾರಣದ ಮೇಲೆ ೧೯೩೨ರ ಜನವರಿ ೪ರಂದು ಮುಂಜಾನೆ ಅವರು ವಾಸ್ತವ್ಯ ಹೂಡಿದ್ದ ಮಣಿಭವನದಿಂದ ಅವರನ್ನು ಬಂಧಿಸಿ ಕರೆದುಕೊಂಡು ಹೋಗಲಾಯಿತು. ಇದು ಈ ಹಿಂದಿನ ಬಂಧನದಂತೆಯೇ ವಿಚಾರಣೆ ಇಲ್ಲದೆ ಅನಿರ್ದಿಷ್ಟ ಕಾಲ ಸೆರೆಯಲ್ಲಿಡುವ ೧೮೨೭ರ ತುರ್ತು ಪರಿಸ್ಥಿತಿ ಕಾನೂನಿನನ್ವಯದ ಬಂಧನವಾಗಿತ್ತು. ದೀರ್ಘ ಅಗಲಿಕೆಯ ನಂತರ ಒಂದು ವಾರವಷ್ಟೇ ಪತಿಯೊಡನಿರಲು ಸಾಧ್ಯವಾಗಿದ್ದ ಕಸ್ತೂರಬಾ ಇದನ್ನು ತಿಳಿದು ಕಣ್ಣೀರಿಟ್ಟರು. ಪತಿಯನ್ನು ಕೊನೆಯ ಬಾರಿಗೆ ನೋಡುತ್ತಿರಬಹುದೆಂಬ ಆತಂಕದಿಂದ ಅವರ ಕೈ ಹಿಡಿದು 'ನಾನೇನಾದರೂ ನಿಮ್ಮನ್ನು ನೋಯಿಸಿದ್ದರೆ ಕ್ಷಮಿಸಿಬಿಡಿ' ಎಂದು ಕೇಳಿಕೊಂಡರು. ಅವರನ್ನು ಸಮಾಧಾನಪಡಿಸಿದ ಗಾಂಧಿ ತಮ್ಮ ಸಹಬಂಧಿ ಮಹದೇವ ದೇಸಾಯಿಯವರೊಂದಿಗೆ ಪೊಲೀಸರೊಂದಿಗೆ ಹೊರಟರು. ಪೊಲೀಸರು ವಲ್ಲಭಭಾಯಿ ಪಟೇಲರನ್ನು ನಗರದ ಮತ್ತೊಂದು ಕಡೆಯಿಂದ ಬಂಧಿಸಿದ್ದು ಮೂವರನ್ನೂ ಪೂನಾಗೆ ಕರೆದುಕೊಂಡು ಹೋಗಿ ಯೆರವಾಡಾ ಸೆರೆಮನೆಯಲ್ಲಿಟ್ಟರು. ಇದೇ ವೇಳೆಗೆ ಕಸ್ತೂರಬಾ ಮತ್ತು ಮೀರಾಬೆನ್‌ರನ್ನೂ ಹೆಂಡದಂಗಡಿಗಳ ಮುಂದೆ ಪ್ರದರ್ಶನ ಮಾಡಿದ್ದಕ್ಕಾಗಿ ಬಂಧಿಸಿ ಸಬರ್ಮತಿ ಸೆರೆಮನೆಯಲ್ಲಿ ಇಡಲಾಗಿದೆ ಎಂಬ ಸುದ್ದಿಯೂ ಬಂತು.

**ಅಮರಣಾಂತ ಉಪವಾಸ: ಬಾ ಅವರ ಆಗಮನ ತಂದ ಹರ್ಷ**

ಯರವಾಡಾ ಸೆರೆಮನೆಯಲ್ಲಿದ್ದಾಗಲೇ ಗಾಂಧಿ ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರ ಒದಗಿಸಿದ ಬ್ರಿಟಿಷ್ ಸರ್ಕಾರದ ಕ್ರಮದ ವಿರುದ್ಧ ಸೆಪ್ಟೆಂಬರ್ ೨೦ರಿಂದ ಅಮರಣಾಂತ ಉಪವಾಸ ಆರಂಭಿಸುವ ಮುನ್ನ ಕಸ್ತೂರ ಬಾ ಮತ್ತು ಮೀರಾಬೆನ್‌ರನ್ನು ಉದ್ದೇಶಿಸಿ ಹೀಗೆ ಪತ್ರ ಬರೆದರು: 'ಈ ಸಂದರ್ಭದಲ್ಲಿ ನಿಮ್ಮ ನೆನಪೇ ನನ್ನನ್ನು ತಲ್ಲಣಿಸುವಂತೆ ಮಾಡಿದೆ. ನೀವು ಈಗ ಎಂತಹ ಸಂಕಟವನ್ನೂ ಮೀರಿ ನಿಲ್ಲುವ ಸಂಕಲ್ಪ ಮಾಡಬೇಕು. ಅಸ್ಪೃಶ್ಯತೆಯ ಶಾಪವನ್ನು ತೊಡೆದುಹಾಕುವ ಪ್ರಯತ್ನದ ಮುಂದೆ ಯಾವ ನೋವೂ ಸಂಕಟಗಳೂ ದೊಡ್ಡವಲ್ಲ. ನನ್ನ ದೇಹ ಅಳಿದುಹೋದರೂ ನಾನು ನಿಮ್ಮೊಡನೆ ಚೈತನ್ಯವಾಗಿ ಇರುವೆ'

.....ಚರ್ಚೆಗಳು ಮುಂದುವರೆದು ಉಪವಾಸ ನಾಲ್ಕನೆಯ ದಿನಕ್ಕೆ ಮುಂದುವರೆದಂತೆ ಚರ್ಚೆಗಳಲ್ಲಿ ಭಗವಹಿಸುವುದರ ಜೊತೆಗೆ ಪ್ರಾರ್ಥನೆ, ಚರಕಾದಲ್ಲಿ ನೂಲು ತೆಗೆಯುವುದನ್ನೂ ಮಾಡುತ್ತಿದ್ದ ಗಾಂಧಿ ನಿತ್ರಾಣರಾಗತೊಡಗಿದ್ದರು... ಆದರೆ ಅಂದು ಸಂಜೆ ಗಾಂಧಿಯವರ ಅದೃಷ್ಟವೆಂಬಂತೆ ಅವರ ಪತ್ನಿ ಕಸ್ತೂರಬಾ ಬಂದರು. ಅವರನ್ನು ವಿಶೇಷ ಅನುಮತಿಯೊಂದಿಗೆ ಸಬರ್ಮತಿ ಆಶ್ರಮದ ಸೆರೆಮನೆಯಿಂದ ಈ ಸೆರೆಮನೆಗೆ ತಾತ್ಕಾಲಿಕವಾಗಿ ವರ್ಗಾಯಿಸಲಾಗಿತ್ತು. ಬಾ ಗಾಂಧಿಯವರ ಬಳಿ ಬಂದು 'ಮತ್ತೆ ಅದೇ ಕಥೆ!' ಎಂದು ಚೇಷ್ಟೆ ಮಾಡಿದಾಗ ಗಾಂಧಿ ಸುಮ್ಮನೆ ಮುಗುಳ್ನಕ್ಕರು. ಬಾ ತಮ್ಮ ಪತಿಯ ದೇಹದ ಅಂಗಮರ್ದನ ಆರಂಭಿಸಿದರು. ಗಾಂಧಿಯವರ ಮುಖದಲ್ಲಿ ಹರ್ಷ ಮೂಡಿತು.

**ಕಸ್ತೂರಬಾ ದೇವಾಲಯ ಪ್ರವೇಶ: ಅಸ್ವಸ್ಥರಾದ ಗಾಂಧಿ**

**ದೇ**ವಸ್ಥಾನ ಪ್ರವೇಶಕ್ಕೆ ಸಂಬಂಧಪಟ್ಟ ಗಾಂಧಿಯವರ ನೀತಿಯನ್ನು ಸ್ಪಷ್ಟಪಡಿಸುವ ಇನ್ನೊಂದು ಘಟನೆ ನಡೆದದ್ದು ೧೯೩೪ರ ಮಾರ್ಚ್ ಕೊನೆಯಲ್ಲಿ. ಒರಿಸ್ಸಾದಲ್ಲಿ. ದೆಲಾಂಗ್ ಎಂಬ ಸಣ್ಣ ಊರೊಂದರಲ್ಲಿ ಗ್ರಾಮೀಣ ಕೈಗಾರಿಕೆಗಳ ವಸ್ತು ಪ್ರದರ್ಶನವೊಂದನ್ನು ಉದ್ಘಾಟಿಸಿ ಮಾತನಾಡಿದ ಗಾಂಧಿ, ಸನಿಹದ ಪುರಿ ಜಗನ್ನಾಥ ದೇವಾಲಯಕ್ಕೆ ಹರಿಜನರ ಪ್ರವೇಶವನ್ನು ನಿಷೇಧಿಸಲಾಗಿದೆ ಎಂಬುದು ಖೇದದ ವಿಷಯ ಎಂದು ಹೇಳಿದರಲ್ಲದೆ, ಎಲ್ಲಿ ಹರಿಜನರಿಗೆ ಪ್ರವೇಶವಿಲ್ಲವೋ ಅಲ್ಲಿ ನಾನು ಪ್ರವೇಶಿಸಲಾರೆ ಎಂದು ಘೋಷಿಸಿದರು. ಆಗ ಅಲ್ಲಿ ಕಸ್ತೂರಬಾ, ಮಹದೇವ ದೇಸಾಯಿ, ಅವರ ಪತ್ನಿ ದುರ್ಗಾ ಮತ್ತು ಅವರ ಮಗ ನಾರಾಯಣ ಇದ್ದರು. ಮಾರನೆಯ ದಿನ ಗಾಂಧಿ ಮತ್ತು ಮಹದೇವ ದೇಸಾಯಿ ಹರಿಜನ ಕಾರ್ಯಕರ್ತರೊಂದಿಗೆ ಸಭೆ ನಡೆಸುತ್ತಿದ್ದಾಗ ಆ ಇಬ್ಬರು ಮಹಿಳೆಯರು ಮತ್ತು ಆ ಹುಡುಗ ಹತ್ತಿರದಲ್ಲೇ ಇದ್ದ ಪುರಿಯತ್ತ ನಡೆದರು. ಇಬ್ಬರು ಮಹಿಳೆಯರು ಜಗನ್ನಾಥ ದೇವಾಲಯವನ್ನು ಪ್ರವೇಶಿಸಲು ಹೆಜ್ಜೆ ಇಡುತ್ತಿದ್ದಂತೆ ಬಾಲಕ ನಾರಾಯಣ, ಗಾಂಧಿಯವರ ಮಾತನ್ನು ಅವರಿಗೆ ನೆನಪಿಸಿದ. ಆ ಇಬ್ಬರು ಮಹಿಳೆಯರು ಅದನ್ನು ಲೆಕ್ಕಿಸದೆ ದೇವಸ್ಥಾನದೊಳಕ್ಕೇ ಹೋಗಿ ದೇವರ ದರ್ಶನ ಮಾಡಿಕೊಂಡು ಬಂದರು.



ವಾಪಸ್ ಬಂದ ಮಹಿಳೆಯರನ್ನು ಗಾಂಧಿ ಎಲ್ಲಿಗೆ ಹೋಗಿದ್ದಿರಿ? ಎಂದು ಕೇಳಿದರು. ನಾರಾಯಣ ಎಲ್ಲವನ್ನೂ ಹೇಳಿಬಿಟ್ಟ. ಗಾಂಧಿಗೆ ಸಿಡಿಲೇ ಬಡಿದಂತಾಯಿತು. ಅವರ ಕಣ್ಣು ಕೆಂಪಾಯಿತು, ತುಟಿಗಳು ಅಲುಗಿದವು, ಮೈ ನಡುಗಿತು. ಅವರಿಗೆ ತನ್ನ ಮಾತುಗಳು ತಮ್ಮ ಹತ್ತಿರದವರಿಗೇ ಮುಟ್ಟುತ್ತಿಲ್ಲ ಎಂಬ ದುಃಖ ಉಮ್ಮಳಿಸಿ ಬಂತು. ಇಬ್ಬರು ಹೆಂಗಸರಿಗೂ ಛೀಮಾರಿ ಹಾಕತೊಡಗಿದರು. ಮಧ್ಯ ಪ್ರವೇಶಿಸಿದ ಮಹದೇವ ದೇಸಾಯಿಯವರು ತಾವೇ ಮಹಿಳೆಯರಿಗೆ ಅಭಯ ನೀಡಿ ಕಳಿಸಿದ್ದು ಎಂದು ತಿಳಿಸಿದಾಗ ಗಾಂಧಿ ಬೆಚ್ಚಿಬಿದ್ದರು. ಮಹದೇವ ಅವರ ಮೇಲೆ ಕೂಗಾಡಿದರು. ಮಹಿಳೆಯರು ಕಣ್ಣೀರಿಟ್ಟು ಗಾಂಧಿಯವರ ಕ್ಷಮೆ ಕೇಳಿದರೆ, ದೇಸಾಯಿ ತಾವು ಅವರ ಆಪ್ತ ಕಾರ್ಯದರ್ಶಿ ಆಗಲು ಅರ್ಹನಲ್ಲವೆಂದು ಹೇಳಿ ಅವರಿಂದ ದೂರಾಗುವ ಮಾತನಾಡಿದರು.

ಗಾಂಧಿಯವರ ರಕ್ತದೊತ್ತಡ ವಿಪರೀತ ಏರಿ ಅಸ್ವಸ್ಥರಾಗಿದ್ದರು. ಅವರಿಗೆ ವಿಶ್ರಾಂತಿ ಬೇಕಿತ್ತು. ವಿಶ್ರಾಂತಿಯ ನಂತರ ಅವರು ಮಹದೇವ ದೇಸಾಯಿಯವರಿಗೆ ದುಡುಕಬಾರದಾಗಿ ಹೇಳಿದರು. ಅವರಿಲ್ಲದೆ ತಮ್ಮ ಬಾಳು ಲಂಗರು ಕಳೆದುಕೊಳ್ಳುವುದೆಂದು ಹೇಳಿ ಅವರು ನಿರ್ಧಾರವನ್ನು ಬದಲಿಸುವಂತೆ ಒತ್ತಾಯಿಸಿದರು. ಮಣಿದ ದೇಸಾಯಿ ಈ ಇಡೀ ಘಟನೆಯನ್ನು 'ಹರಿಜನ್' ಪತ್ರಿಕೆಯ ೧೯೩೪ರ ಏಪ್ರಿಲ್ ೯ರ ಸಂಚಿಕೆಯಲ್ಲಿ ವಿವರಿಸಿ, ಕೊನೆಗೆ ಹೀಗೆ ಬರೆದರು.

*ದೇವಲೋಕದ ಸಂತರ ಸಹವಾಸ ಆನಂದಮಯವೇ ಹೌದು.*

*ಆದರೆ ಭೂಲೋಕದ ಸಂತರ ಸಹವಾಸ ಯಾರಿಗೂ ಬರಬಾರದು!*

**'ಮಾತಾ ಕಸ್ತೂರಬಾ ಕಿ ಜೈ'**



**ಅ**ದೊಂದು ರೈಲ್ವೇ ನಿಲ್ದಾಣದಲ್ಲಿ. ಗಾಂಧಿ ದಂಪತಿಗಳು ರೈಲಿನಲ್ಲಿ ವರ್ಧಾಗೆ ಬರುತ್ತಿದ್ದಾಗ, ರೈಲು ಒಂದು ನಿಲ್ದಾಣದಲ್ಲಿ ನಿಂತಿದ್ದಾಗ, 'ಮಾತಾ ಕಸ್ತೂರಬಾ ಕಿ ಜೈ!' ಎಂಬ ಘೋಷಣೆ ಕೂಗಿ ಕೇಳಿಬಂತು. ಎಲ್ಲಿಂದ ಎಂದು ತಿರುಗಿ ನೋಡಿದರೆ ಹರಿಲಾಲ ಪ್ಲಾಟ್‌ಫಾರಂ ಮೇಲೆ ನಿಂತಿದ್ದ. ಗಾಂಧಿ ದಂಪತಿಗಳು ಅವನ ಬಳಿಗೆ ಓಡಿದರು. ಅವನು ಬಳಲಿ ಕೃಶನಾಗಿದ್ದ. ಕಣ್ಣುಗಳು ಇಂಗಿಹೋದಂತಾಗಿದ್ದವು. ಕೂದಲು ಬೆಳ್ಳಗಾಗಿತ್ತು. ತಾಯಿಗೆ ಹೃದಯ ತುಂಬಿ ಬಂತು. ಅದಕ್ಕೆ ಸ್ಪಂದಿಸಿದಂತೆ ಅವನು ಕುರ್ತಾದೊಳಗಿಂದ ಒಂದು ಕಿತ್ತಳೆ ಹಣ್ಣು ತೆಗೆದು, 'ಅಮ್ಮಾ, ಇದು ನಿನಗಾಗಿ. ತಿನ್ನು' ಎಂದ. ಗಾಂಧಿ ತಮ್ಮ ಮೌನ ಮುರಿಯಲು 'ನನಗೇನೂ ತಂದಿಲ್ಲವೆ?' ಎಂದು ಕೇಳಿದರು. ಅವನು ಗುಡುಗಿದ: 'ಇಲ್ಲ. ನಿನಗೇನೂ ಇಲ್ಲ. ನೀವು ಈವರೆಗೆ ಸಾಧಿಸಿದ್ದೆಲ್ಲ ಅಮ್ಮನ ಸಹಕಾರದಿಂದ ಎಂಬುದು ನಿಮಗೆ ತಿಳಿದಿರಲಿ'. 'ಹೌದಪ್ಪ, ಅದರಲ್ಲಿ ಸಂದೇಹವಿಲ್ಲ. ಆದರೆ ಈಗ ನಮ್ಮೊಂದಿಗೆ ಬಂದುಬಿಡು' ಎಂದರು ಗಾಂಧಿ. ಅವನು 'ಆಗದು. ನಾನು ಹಿಂದಿರುಗಲಾರೆ. ನನ್ನ ದಾರಿ ಬೇರೆ.' ಎಂದು ದೃಢವಾಗಿ ಹೇಳುತ್ತಾ, ಕಸ್ತೂರಬಾರಿಗೆ 'ಹಣ್ಣು ತಿನ್ನು, ಇಲ್ಲ ನನಗೆ ವಾಪಸ್ ಕೊಟ್ಟು ಬಿಡು' ಎಂದ. ಅವನ ಮಾತು ಕಟುವಾಗಿತ್ತು. ಕಸ್ತೂರಬಾ 'ಇಲ್ಲಪ್ಪ, ತಿನ್ನುತ್ತೇನೆ' ಎಂದು ಹಣ್ಣನ್ನು ತಮ್ಮ ಸೀರೆಯ ಸೆರಗಿಗೆ ಹಾಕಿಕೊಳ್ಳುತ್ತಿರುವಂತೆ ರೈಲು ಹೊರಡುವ ಸೂಚನೆ ಬಂತು. ಗಾಂಧಿ ದಂಪತಿಗಳು ರೈಲು ಹತ್ತಿದರು. ರೈಲು ಹೊರಟಿತು. ದೂರದಿಂದ ಮತ್ತೆ 'ಮಾತಾ ಕಸ್ತೂರಬಾ ಕಿ ಜೈ' ಘೋಷ ಕೇಳಿಬರುತ್ತಿತ್ತು.

**(ಮುಂದಿನ ಸಂಚಿಕೆಗೆ)**

(ರೇಖಾ ಚಿತ್ರಗಳು: **ಬಿ.ಜಿ. ಗುಜ್ಜಾರಪ್ಪ**)

ಕಥೆ

# ಬಷೀರಣ್ಣನ ಪಂಚರಂಗಡಿ



ಚಿತ್ರ : ಗುಜ್ಜಾರ್

-ಎಂ.ಎಸ್. ಶ್ರೀರಾಮ್

**ಒ**ಂದು ವಾರದ ಹಿಂದಷ್ಟೇ ನನ್ನ ಕಾರಿನ ಎಡಭಾಗದ ಟೈರಿನಲ್ಲಿ ಗಾಳಿ ಕಮ್ಮಿಯಾಗಿರುವುದನ್ನು ಕಂಡೆ. ಡೀಸಲ್ ತುಂಬಿಸುತ್ತಿದ್ದಾಗ ಗಾಳಿ ಕಮ್ಮಿಯಿರುವಂತೆ ಕಂಡರೂ, ಪೆಟ್ರೋಲು ಬಂಕಿನಲ್ಲಿ ಕಾರುಗಳ ಉದ್ದನೆ ಸಾಲಿತ್ತು, ಆಫೀಸಿಗೆ ತಡವಾಗುತ್ತಿತ್ತು. ಹಾಗೇ ಹೊರಟೆ. ಸಂಜೆಯಾಗುವಷ್ಟರಲ್ಲಿ ಟೈರು ಸಪಾಟಾಗದಿದ್ದರೂ ಸಾಕಷ್ಟು ಗಾಳಿ ಕಡಿಮೆಯಾಗಿದ್ದಂತೆ ಅನ್ನಿಸಿತ್ತು. ಕಾರು ಚಲಾಯಿಸುತ್ತಾ ನೇರ ಚಾಮರಾಜಪೇಟೆಯ ಕಡೆಗೆ ಬಂದೆ. ನಮ್ಮ ಮನೆಯಿಂದ ಮೂರು ಬೀದಿಗಳಾಚೆ ಬಷೀರಣ್ಣನ ಅಂಗಡಿಯಿತ್ತು. ಅಲ್ಲಿ ಟೈರನ್ನು ಒಮ್ಮೆ ಚೆಕ್ ಮಾಡಿಸಿ, ಗಾಳಿ ತುಂಬಿಸಿ ಬರೋಣ ಎಂದು ಹೊರಟೆ. ಅಲ್ಲಿ ಹೋಗಿ ನೋಡಿದರೆ ಪಂಚರಂಗಡಿಯೇ ಇಲ್ಲ. ಬಷೀರಣ್ಣನ ಅಂಗಡಿಯಿದ್ದಲ್ಲಿ ಒಂದು ಫೋಟೋಕಾಪಿ ಅಂಗಡಿ ಬಂದಿತ್ತು. ಗಾಡಿ ಇಳಿದು ವಿಚಾರಿಸಬೇಕು ಅನ್ನುವಷ್ಟರಲ್ಲಿ ಹಿಂದಿನಿಂದ ವಿಸಲ್ ಕೇಳಿಸಿತು. ಟ್ರಾಫಿಕ್ ನಿಭಾಯಿಸುತ್ತಿದ್ದ ಪೋಲೀಸ್ ಕಾನ್ಸ್‌ಟೇಬಲ್ ಕೈ ಆಡಿಸಿ ಅಲ್ಲಿಂದ ಜಾಗ ಖಾಲಿ ಮಾಡುವಂತೆ ಹೇಳಿದ. ರಸ್ತೆಯಲ್ಲಿ ವಾಹನಗಳೂ ಹೆಚ್ಚಾಗಿದ್ದುವು. ಹೀಗಾಗಿ ನಾನು ಗಾಡಿಯನ್ನು ಚಲಾಯಿಸುತ್ತಾ ಮುಂದೆ ಸಾಗಿದೆ. ವೀಲ್ ಬ್ಯಾಲೆನ್ಸಿಂಗ್ ಮಾಡಿಸಿ ಸಾಕಷ್ಟು ದಿನಗಳಾಗಿದ್ದುವು. ಅದನ್ನೂ ಮಾಡಿಸಿ ಅಲ್ಲಿಯೇ ಟೈರನ್ನೂ ಚೆಕ್ ಮಾಡಿಸಬಹುದು ಎಂದುಕೊಳ್ಳುತ್ತಾ ಕನಕಪುರ ರಸ್ತೆಯ ಕಡೆಗೆ ಹೋದೆ.

ತಕ್ಷಣಕ್ಕೆ ನನಗೆ ಬಷೀರಣ್ಣನ ಬಗ್ಗೆ ಏನೂ ತೋಚಲಿಲ್ಲ. ಸದ್ಯಕ್ಕೆ ನನ್ನ ಕಾರಿನ ಟೈರನ್ನು ಮರಮ್ಮತ್ತು ಮಾಡಿಸುವುದೇ ಮುಖ್ಯ ವಿಷಯವಾಗಿತ್ತು. ಹೀಗಾಗಿ ಕಾರನ್ನು ನೇರ ವೀಲ್ ಬ್ಯಾಲೆನ್ಸಿಂಗ್ ಮತ್ತು ಅಲೈನ್ಮೆಂಟ್ ಮಾಡುವ ದೊಡ್ಡ ಮಳಿಗೆಯತ್ತ ಚಲಾಯಿಸಿ ಅಲ್ಲಿ ಕಾರನ್ನು ನಿಲ್ಲಿಸಿದೆ. ಅಲ್ಲಿ ಕಾರು ನಿಲ್ಲಿಸುತ್ತಿದ್ದ ಹಾಗೇ ಸಮವಸ್ತ್ರ ಧರಿಸಿದ್ದ ನಾಲ್ಕು ಯುವಕರು ಕಾರನ್ನು ಸುತ್ತುವರಿದರು. ಅವರಲ್ಲಿ ಒಬ್ಬ ನನ್ನ ಕಾರಿನ ಇಗ್ನಿಷನ್ ಪಡೆದ. ಮತ್ತೊಬ್ಬ, "ಬನ್ನಿ ಸರ್, ಏನೆಲ್ಲಾ ಆಗಬೇಕು ಹೇಳಿ, ನಾನು ಮಾಡಿಸಿಕೊಡುತ್ತೀನಿ" ಎನ್ನುತ್ತಾ ಒಂದು ಮಜಲು ಮೇಲಿದ್ದ ಆಫೀಸಿಗೆ ಕರೆದೊಯ್ದ. ಅಲ್ಲಿ ತಣ್ಣನೆ ನೀರಿನ ಸಣ್ಣ ಪ್ಲಾಸ್ಟಿಕ್ ಬಾಟಲಿ ಕೊಟ್ಟು, "ಟೀ ಹೇಳಲಾ, ಬೇಕಿದ್ದರೆ ಗ್ರೀನ್ ಟೀ ಕೂಡಾ ತರಿಸಬಹುದು" ಅಂದ. ಆದರೆ ನನಗೆ ಮೊದಲಿಗೆ ನನ್ನ ಟೈರನ್ನು ರಿಪೇರಿ ಮಾಡಿಸುವುದಿತ್ತು. ನಾನು ಏನೂ ಹೇಳುವಷ್ಟರಲ್ಲಿ ಕೆಳಗಿನ ಮಜಲಿನಿಂದ ಒಬ್ಬ ಹುಡುಗ ಒಂದು ದೊಡ್ಡ ಗಾತ್ರದ ಮೊಳೆ ತಂದು ಹೇಳಿದ:

"ಸರ್, ನಿಮ್ಮ ಟೈರಿನಲ್ಲಿತ್ತು. ಇದು ಹೇಗೆ ಅದರೊಳಗೆ ತೂರಿತೋ ಗೊತ್ತಿಲ್ಲ. ಟ್ಯೂಬ್‌ಲೆಸ್ ಟೈರಾದ್ದರಿಂದ ನೇರವಾಗಿ ತೆಗೆಯಲು ಸಾಧ್ಯವಾಯಿತು. ಈಗ ಹೇಳಿ. ಪಂಚರ್ ಹಾಕಿ ಅಲೈನ್ಮೆಂಟ್ ಮಾಡಬೇಕಾದರೆ ತಕ್ಷಣ ಮಾಡುತ್ತೇವೆ, ಆದರೆ ನಿಮ್ಮ ಟೈರುಗಳೆಲ್ಲಾ ಗಟ್ಟಿಯಾಗಿವೆ. ಅಷ್ಟೂ ಟೈರುಗಳನ್ನು ಬದಲಾಯಿಸುವುದೇ ವಾಸಿ. ಇದು ಎಸ್.ಯು.ವಿ. ಹೈವೇದಲ್ಲಿ ಡ್ರೈವ್ಮಾಡೋವಾಗ ಸೇಫ್ಟೀ ನೋಡಬೇಕಾಗುತ್ತೆ. ಯೋಚಿಸಿ. ಟೈರನ್ನು ಫಿಕ್ಸ್ ಮಾಡಿ, ಅಲೈನ್ಮೆಂಟು, ಬ್ಯಾಲೆನ್ಸಿಂಗೂ ಮಾಡಿ ನೈಟ್ರೋಜನ್ ತುಂಬಿಸಿ ಕೊಡುತ್ತೇನೆ. ಟೈರು ಬದಲಾಯಿಸುವುದೇ ವಾಸಿ." ಎಂದ.

ಅಷ್ಟು ಹೊತ್ತಿಗೆ ನನ್ನನ್ನು ಮೇಲೆ ಕರೆತಂದವನು "ಬನ್ನಿ ಸರ್. ನೋಡೋಣ" ಎನ್ನುತ್ತಾ ಕೆಳಕ್ಕೆ ಕರೆದೊಯ್ದ. ಅಷ್ಟು ಹೊತ್ತಿಗಾಗಲೇ ಕಾರಿನ ಅಷ್ಟೂ ಗಾಲಿಗಳನ್ನು ಆಚೆ ತೆಗೆದಿದ್ದು ಅವನ್ನು ಪರೀಕ್ಷೆಗೆ ಒಳಪಡಿಸುತ್ತಿದ್ದರು. "ಸರ್ ನೋಡಿ ಈ ಮೊಳೆ ಸೇರಿ ಸಾಕಷ್ಟು ಸಮಯವಾಗಿರಬೇಕು. ಕಾರು ಎಡಕ್ಕೆ ಎಳೆಯುತ್ತಿತ್ತು. ಬ್ಯಾಲೆನ್ಸಿಂಗ್‌ನ ಡಯಾಗ್ನಾಸ್ಟಿಕ್ಸ್‌ನಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ ನೋಡಿ. ನಿಮಗೆ ಅದು ಫೀಲ್ ಆಗಲಿಲ್ಲ ಅನ್ನೋದೇ ಆಶ್ಚರ್ಯ. ನೆವರ್ದಲೆಸ್. ಇದನ್ನು ಫಿಕ್ಸ್ ಮಾಡಬಹುದು. ಆದರೂ ಐ ವುಡ್ ನಾಟ್ ರೆಕಮಂಡ್ ಇಟ್. ಈ ಟೈರನ್ನಂತೂ ಬದಲಾಯಿಸಲೇ ಬೇಕು, ಇಟ್ಸ್ ನಾಟ್ ಸೇಫ್" ಎನ್ನುತ್ತಾ ಪಂಚರಾಗಿದ್ದ ಗಾಲಿಯನ್ನು ತಟ್ಟಿದ.

> **ಅಂದರೇನು? ಬಷೀರಣ್ಣ ದೇವರೇ? ಇಷ್ಟ ಬಂದಾಗ ಪ್ರತ್ಯಕ್ಷವಾಗಿ, ಬೇಕಾದವರ ಪಂಚರುಗಳಿಗೆ ತೇಪೆ ಹಾಕುವ ಅವಧೂತನೇ... ಯಾರೂ ಕೇಳುತ್ತಿಲ್ಲ ಎನ್ನುವ ಕಾರಣಕ್ಕೆ ಕಾಣೆಯಾಗಿದ್ದಾನೆ, ಬೇಕಾದಾಗ ಪ್ರತ್ಯಕ್ಷವಾಗುತ್ತಾನೆ ಎನ್ನುವುದರ ಅರ್ಥವೇನು?**

"ನೋಡಿ ಸರ್. ನೀವೇ ಫೀಲ್ ಮಾಡಿ, ಹಾರ್ಡಾಗಿದೆ. ನಿಮ್ಮ ಟೈರುಗಳು ಸುಮಾರು ಮುವ್ವತ್ತು ಸಾವಿರ ಓಡಿದೆ. ನನ್ನನ್ನ ಕೇಳಿದರೆ ಎಲ್ಲ ಟೈರುಗಳನ್ನೂ ಬದಲಾಯಿಸಿ. ಹೊಸ ರೇಡಿಯಲ್ ಬಂದಿದೆ. ಇಪ್ಪತ್ತೈದು ಸಾವಿರ ಕಿಲೋಮೀಟರುಗಳ ವಾರೆಂಟಿ ಇದೆ. ದಿಸ್ ವಿಲ್ ಲಾಸ್ಟ್ ಲಾಂಗರ್." ಅಂದ.

ಈ ವಿಷಯದ ತಾಂತ್ರಿಕತೆ ನನಗೇನೂ ತಿಳಿಯದು. ಅಲ್ಲಿದ್ದ ನಾಲ್ಕೂ ಜನ ದಿನನಿತ್ಯ ಟೈರು-ಟ್ಯೂಬುಗಳನ್ನು ನೋಡುವ ತಜ್ಞರು. ನಾನು ಅಸಹಾಯಕತೆಯಿಂದ, ಸುತ್ತ ನೋಡಿದೆ.

"ಲೆಟ್ ಮೀ ಡ್ರೈವ್ ಫರ್ ಅನದರ್ ೫೦೦೦ ಕಿಲೋಮೀಟರ್ಸ್. ಮುಂದಿನ ಬಾರಿ ಅಲೈನ್ಮೆಂಟಿಗೆ ಬಂದಾಗ ಬದಲಾಯಿಸುತ್ತೇನೆ. ಸದ್ಯಕ್ಕೆ ಐ ಯಾಮ್ ಇನ್ ಎ ಹರಿ. ರಾತ್ರೆ ಡಿನರಿಗೆ ಹೋಗಬೇಕು" ಅಂದೆ. ಕಾರು ಕೊಂಡು ಎರಡು ವರ್ಷಗಳಾಗಿದ್ದುವು. ಮೂವತ್ತು ಸಾವಿರಕ್ಕೂ ಹೆಚ್ಚು ಕಿಲೋಮೀಟರ್ ಓಡಿತ್ತು. ಇಷ್ಟು ಬೇಗ ಟೈರು ಬದಲಾಯಿಸಬೇಕೇ? ಒಂದು ಟೈರಿನ ಜೀವನ ಎಷ್ಟು ಕಿಲೋಮೀಟರುಗಳಿರಬಹುದು. ಈ ಎಲ್ಲವನ್ನೂ ತಿಳಿದುಕೊಂಡು ತೀರ್ಮಾನ ಕೈಗೊಳ್ಳುವುದು ಒಳ್ಳೆಯದು ಅನ್ನಿಸಿತು. ಹೀಗಾಗಿ 'ನೆಕ್ಸ್ಟ್ ಟೈಂ' ಎಂದು ದೃಢವಾಗಿ ಹೇಳಿದೆ.

"ನಿಮ್ಮಿಷ್ಟ ಸರ್, ಯುವರ್ ಕಾಲ್. ನೀವು ಲಾಂಗ್ ಹೋಗುತ್ತೀರಾ ಅನ್ಸುತ್ತೆ. ಹಾಗಾದರೆ ಬದಲಾಯಿಸೋದು ವಾಸಿ. ಸೇಫ್ಟೀ ದೃಷ್ಟಿಯಿಂದ. ಸುಮ್ಮನೆ ಈಗ ಟೈರಿಗೆ ತೇಪೆ ಹಾಕಿಸೋದು ಅಥವಾ ನಾಲ್ಕರಲ್ಲಿ ಒಂದನ್ನು ಮಾತ್ರ ಬದಲಾಯಿಸೋದರಿಂದ ಅಲೈನ್ಮೆಂಟ್ ಹಾಳಾಗುತ್ತೆ. ನೀವು ಟೈರಲ್ಲಿ ಖರ್ಚುಮಾಡೋದನ್ನು ಫ್ಯೂಯೆಲ್ನಲ್ಲಿ ಸೇವ್ ಮಾಡ್ತೀರಿ.. ನೋಡಿ" ಅಂದ.

ನನ್ನ ಮನಸ್ಸು ದ್ವಂದ್ವಕ್ಕೊಳಗಾಯಿತು. ಹೌದು ಮುಂದಿನ ವಾರದಲ್ಲಿ ಸಂಸ್ಕೃತಿ ಶಿಬಿರಕ್ಕೆ ಹೆಗ್ಗೋಡಿಗೆ ಡ್ರೈವ್ ಮಾಡುವುದಿತ್ತು. ಯೋಚನೆಗೆ ಬಿದ್ದೆ. ತಪ್ಪಿಸಲು "ಈಗ ಸಮಯವಿಲ್ಲ. ಬರ್ತೇನೆ ಯೋಚಿಸಿ ನೋಡುತ್ತೇನೆ" ಅಂದೆ.

"ಶೂರ್. ಪರವಾಗಿಲ್ಲ. ಬದಲಾಯಿಸೋಕ್ಕೆ ಹೆಚ್ಚು ಸಮಯ ಹಿಡಿಯುವುದಿಲ್ಲ, ಟೆನ್ ಮಿನಿಟ್ಸ್" ಅಂದ. "ಕಾರ್ಡಿದ್ದರೆ ಅದರಲ್ಲಿ ಪೇ ಮಾಡಬಹುದು. ಇಪ್ಪತ್ತೆಂಟು ಸಾವಿರ. ಮಾಕ್ಸಿಮಮ್ ಡಿಸ್ಕೌಂಟ್ ಕೊಡುವ ಹಾಗೆ ಮೇನೇಜರಿಗೆ ಹೇಳುತ್ತೇನೆ. ನೀವು ನಮ್ಮ ರೆಗ್ಯುಲರ್ ಗಿರಾಕಿ ಅಲ್ಲವಾ?"

ನಾನು ರೆಗ್ಯುಲರ್ ಗಿರಾಕಿ ಅಲ್ಲದಿದ್ದರೂ, ಅವನ ಮಾತಿನಿಂದ ನನ್ನ ಮನಸ್ಸಿನಲ್ಲಿ ಅಳುಕಾಯಿತು. ಹೇಗೂ ಮುಂದಿನ ಆರು ತಿಂಗಳಲ್ಲಿ ಬದಲಾಯಿಸಲೇ ಬೇಕು ಎನ್ನುವುದಾದರೆ, ಸೇಫ್ಟಿಯ ವಿಚಾರವಾದರೆ ಮುಂದೂಡಿ ಪ್ರಯೋಜನವಿಲ್ಲ ಅನ್ನಿಸಿತು. ತಕ್ಷಣವೇ ಮಾಡಿಕೊಡುತ್ತೇನೆ ಎಂದು ಹೇಳಿದ್ದರಿಂದ ಒಪ್ಪಿದೆ. ತಿರುಪತಿಗೆ ತಲೆಯನ್ನು ಒಡ್ಡಿದೆ.

*****

ಸಂಜೆಗೆ ಮನೆಗೆ ಬಂದಾಗ ನನಗೆ ಬಷೀರಣ್ಣನ ಪಂಚರಂಗಡಿಯ ಬಗ್ಗೆ ಕುತೂಹಲ ಹುಟ್ಟಿತು. ಆ ಜಾಗಕ್ಕೆ ಫೋಟೋಕಾಪಿ ಅಂಗಡಿ ಯಾವಾಗ ಬಂತು ಎಂದು ನೆನಪು ಮಾಡಿಕೊಳ್ಳಲು ಪ್ರಯತ್ನಿಸಿದೆ. ಯಾಕೆಂದರೆ ಆ ಫೋಟೋಕಾಪಿ ಅಂಗಡಿಯಲ್ಲಿಯೂ ನಾನು ಕಳೆದ ತಿಂಗಳು ಒಂದು ವರದಿಯನ್ನು ಸ್ಪೈರಲ್‌ಬೈಂಡ್ ಮಾಡಿಸಿ ತಂದಿದ್ದೆ. ಆದರೆ ಆಗ ನನಗೆ ಬಷೀರಣ್ಣನ ಅಂಗಡಿಯ ಜಾಗದಲ್ಲಿ ಫೋಟೋಕಾಪಿ ಅಂಗಡಿ ಬಂದಿದೆ ಅಂತ ಅನ್ನಿಸಿರಲೇ ಇಲ್ಲ. ನನ್ನ ಮನೆಯ ಪ್ರಾಂತ್ಯದಲ್ಲಿಯೇ, ಅನೇಕ ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದ, ನಿಧಾನವಾಗಿ ಬೆಳೆದಿದ್ದ ಈ ಅಂಗಡಿ, ಮತ್ತು ಅದನ್ನು ನಡೆಸುತ್ತಿದ್ದ ಬಷೀರಣ್ಣ ಗಾಯಬ್ ಆಗಿರುವುದು ನನ್ನನ್ನು ವಿಪರೀತವಾಗಿ ಕಾಡಿತು. ನನ್ನ ಕೆಲಸದಲ್ಲಿ ತೊಡಗಿಕೊಂಡು ದಿನನಿತ್ಯದ ಜಂಜಾಟದಲ್ಲಿ ಯಾವುದನ್ನೂ ಗಮನಿಸುತ್ತಿಲ್ಲವೇ ಎಂದುಕೊಳ್ಳುತ್ತಾ ತುಸು ಹೊತ್ತು ಕೂತೆ.

ಬಷೀರಣ್ಣನ ಅಂಗಡಿ ನಮ್ಮ ಮನೆಯಿಂದ ಮೂರು ಸಮಾನಾಂತರ ರಸ್ತೆಗಳ ದೂರದಲ್ಲಿತ್ತು. ನಲವತ್ತೈದು ವರ್ಷಗಳ ಹಿಂದೆ ನಾನು ಐದನೆ ತರಗತಿಯಲ್ಲಿದ್ದಾಗ ನನ್ನ ಕೈಗೆ ಅಪ್ಪನ ರಾಲೀ ಸೈಕಲ್ ಸಿಕ್ಕಿತ್ತು. ಸೀಟು ಎಟುಕಿಸುತ್ತಿರಲಿಲ್ಲವಾದರೂ, ಬಾರಿನ ಸಂದಿಯಿಂದ ಕಾಲನ್ನು ತೂರಿಸಿ ಕತ್ತರಿ ಸೈಕಲ್ ಹೊಡೆಯುವುದನ್ನು ಕಲಿತಿದ್ದೆ. ಸಾಧ್ಯವಾದರೆ, ಮುಖ್ಯವಾಗಿ ರಸ್ತೆ ಇಳಿಜಾರಿನಲ್ಲಿದ್ದರೆ ಪೆಡಲ್ಲಿನ ಮೇಲೆ ಕಾಲಿರಿಸಿ ಸೀಟಿಗೆ ಹಾರಿ ಕುಳಿತು ತಣ್ಣನೆಯ ಗಾಳಿಯ ಸುಖವನ್ನು ಪಡೆಯಬಹುದಿತ್ತು. ಬ್ರೇಕನ್ನು ಒತ್ತುವುದು ತಿಳಿದಿದ್ದರಿಂದ ಏನೆಲ್ಲಾ ಸರ್ಕಸ್ಸುಗಳನ್ನು ಸೈಕಲ್ ಮೇಲೆ ಮಾಡುತ್ತಿದ್ದೆ. ಇದನ್ನು ನೆನಪಿಸಿಕೊಂಡಾಗ ಈಗಲೂ ಮೈ ಪುಳಕಗೊಳ್ಳುತ್ತದೆ. ಎಂಟನೆಯ ತರಗತಿಗೆ ಬರುವ ವೇಳೆಗೆ ಅಪ್ಪ ಹೊಸ ಸೈಕಲ್ಲನ್ನು ಕೊಂಡು ಹಳೇ ಸೈಕಲ್ಲನ್ನು ನನಗೆ ಕೊಟ್ಟಿದ್ದರು. ಸೈಕಲ್

ಅಪ್ಪನದ್ದಾದರೂ, ನಾನು ಸೈಕಲ್ ಕಲಿತಾಗಿನಿಂದಲೂ ಅದಕ್ಕೆ ಗಾಳಿ ತುಂಬುವ, ವಾಲ್ ಟ್ಯೂಬು, ಪಂಚರ್ ಹಾಕಿಸುವ ಕೆಲಸ ನನ್ನದೇ.

ಬಷೀರಣ್ಣ, ಅಲ್ಲೇ ಮೂಲೆಯಲ್ಲಿ ಕುಳಿತಿರುತ್ತಿದ್ದ. ಬಾಲ್ಯದಲ್ಲಿ ಅವನ ಜೊತೆ ಹೆಚ್ಚು ಮಾತುಕತೆಯಾಗುತ್ತಿತ್ತು. ಸೈಕಲ್ ಕಲಿಯುವಾಗ ಆದ ಪರಿಚಯವನ್ನು ಗೆಳೆತನವೆಂದೇ ಕರೆಯಬಹುದು. ಗಾಳಿ ತುಂಬಲು ಮೊದಲಿಗೆ ಅಪ್ಪನ, ನಂತರ ಇಬ್ಬರ ಸೈಕಲ್ಲುಗಳೂ ಇದ್ದುವು. ಸಾಲದ್ದಕ್ಕೆ ಮೂರ್ನಾಲ್ಕು ತಿಂಗಳುಗಳಿಗೊಮ್ಮೆ ಸೈಕಲ್ ಪಂಚರ್ ಕೂಡಾ ಆಗುತ್ತಿತ್ತು. ಸೈಕಲ್ ಪಂಚರಾದಾಗ ಕೊಂಡೊಯ್ದರೆ ರಿಮ್‌ನಿಂದ ಟೈರು ಬಿಡಿಸಿ, ಟ್ಯೂಬಿಗೆ ಗಾಳಿ ತುಂಬಿಸಿ, ನೀರಿನಲ್ಲಿ ಅದ್ದಿದಾಗ ಗುಳ್ಳೆ ಬರುವುದನ್ನು ನೋಡಲು ಬಷೀರಣ್ಣನ ಪಕ್ಕದಲ್ಲೇ ಕುಕ್ಕರಗಾಲಿನಲ್ಲಿ ಸಮಾನವಾಗಿ ಕುಳಿತಿರುತ್ತಿದ್ದೆ. ಲೋಕಾಭಿರಾಮ ಮಾತನಾಡುತ್ತಾ ಅವನು ಕೆಲಸ ಮಾಡುತ್ತಿದ್ದ. ಏನು ಮಾತಾಡುತ್ತಿದ್ದೆವು ಎನ್ನುವುದು ನೆನಪಿಗೆ ಬರುತ್ತಿಲ್ಲ. ಆದರೆ ಆಗಿನ ಕಾಲಕ್ಕೆ ಟೈರು ಟ್ಯೂಬಿನ ವಿಷಯಕ್ಕೆ ಬಷೀರಣ್ಣನೇ ತಾಂತ್ರಿಕ ತಜ್ಞ. ಬಹುತೇಕ ಇರುವ ಸಂಪನ್ಮೂಲಗಳಲ್ಲೇ ಅವುಗಳ ಜೀವಾವಧಿಯನ್ನು ವಿಸ್ತರಿಸುವ ತೇಪೆಗಳನ್ನು ಬಷೀರಣ್ಣ ಸೂಚಿಸುತ್ತಿದ್ದ. ಹೊಸ ಟೈರು ಟ್ಯೂಬುಗಳನ್ನು ಕೊಳ್ಳಬೇಕಾದರೆ ನಮಗೆ ಸಲಹೆಗಾರನೂ ಅವನೇ.

ಕಾಲೇಜಿಗೆ ಬರುವ ವೇಳೆಗೆ ಸೈಕಲ್ಲಿನಿಂದ ಮೊಪೆಡ್ಡು, ಕೆಲಸಕ್ಕೆ ಸೇರುವ ವೇಳೆಗೆ ಬೈಕು, ದೊಡ್ಡ ಬೈಕು, ಕಾರು, ದೊಡ್ಡ ಕಾರು, ಎಸ್.ಯು.ವಿ ಹೀಗೆ ನನ್ನ ಜೀವನ ಬೆಳೆಯುತ್ತಾ ಹೋಗಿತ್ತು. ಪಂಚರಂಗಡಿ ಬಷೀರಣ್ಣ ಅಲ್ಲೇ ಇದ್ದ. ಅವನ ವ್ಯಾಪಾರವೂ ತುಸು ಬೆಳೆದಿತ್ತು. ಸೈಕಲ್ಲಿನಿಂದ ಮಿಕ್ಕ ವಾಹನಗಳ ತೂತುಗಳಿಗೆ ತೇಪೆ ಹಾಕುವ ಕೆಲಸ ಮಾಡುತ್ತಿದ್ದ. ಒಂದು ದೊಡ್ಡ ಕಾರಿನ ಟೈರನ್ನು ಹೊರಗಡೆ ನೇತುಬಿಟ್ಟು... ಅದರ ಮೇಲೆ ಬಷೀರ್ ವಾಲ್ಕನೈಜ್ ಸರ್ವಿಸ್ ಎನ್ನುವ ಅಕ್ಷರಗಳನ್ನು ಸೀಮೆಸುಣ್ಣದಲ್ಲಿ ಬರೆಯಲಾಗಿತ್ತು.. ಒಂದು ಕಂಪ್ರೆಸರ್ ಬಂತು. ಅದರಿಂದ ಗಾಳಿ ತುಂಬುತ್ತಿದ್ದ. ಬೈಕಿನ ಟ್ಯೂಬಿಗೆ ತೇಪೆ ಹಾಕಲು ಒಂದು ಬುಡ್ಡಿಯನ್ನೂ ಅದಕ್ಕೆ ಹೊಂದುವ ಪರಿಕರಗಳನ್ನೂ ತಂದುಕೊಂಡ. ಕಾಲಾನುಕ್ರಮದಲ್ಲಿ ಕಾರಿನ ಟೈರನ್ನು ರಿಮ್ಮಿನಿಂದ ತೆಗೆಯಲು ಅನುವಾಗುವ ಯಂತ್ರವನ್ನೂ ತಂದುಕೊಂಡಿದ್ದ. ಟ್ಯೂಬ್‌ಲೆಸ್ ಟೈರುಗಳನ್ನೂ ಮರಮ್ಮತ್ತು ಮಾಡುತ್ತಿದ್ದ. ಆದರೆ ಸಮಯ ಕಳೆದಂತೆ ಬಷೀರಣ್ಣನ ಜೊತೆ ಹೆಚ್ಚು ಮಾತುಕತೆಯಾಗುತ್ತಿರಲಿಲ್ಲ. ಕೇವಲ ವ್ಯಾವಹಾರಿಕವಾಗಿ ಅವನಲ್ಲಿ, ಅದೂ ಬಹಳ ಅಪರೂಪಕ್ಕೆ ಹೋಗುವುದಿತ್ತು. ಗಾಳಿ ತುಂಬಿಸಲು ಪೆಟ್ರೋಲು ಬಂಕಿತ್ತು. ಬಷೀರಣ್ಣನ ಜೊತೆಗಿನ ಗೆಳೆತನ ಪರಿಚಯಕ್ಕೆ ಡೌನ್‌ಗ್ರೇಡ್ ಆಗಿತ್ತು. ಬಷೀರಣ್ಣ ಬೆಳೆದಿದ್ದನಾದರೂ ಅಲ್ಲಿಯೇ ಇದ್ದ. ಇದ್ದಲ್ಲಿಯೇ ಬೆಳೆದಿದ್ದ. ಬೆಳೆದಲ್ಲಿಯೇ ಇದ್ದ. ಫುಟ್ಪಾತಿನಲ್ಲೇ ವ್ಯಾಪಾರ. ಪರಿಕರಗಳನ್ನಿಡಲು ಒಂದ ಸಣ್ಣ ಗೂಡು. ಅಷ್ಟೇ.

ಈಚೆಗೆ ಬಷೀರಣ್ಣ ಹೇಗೆ ಕಾಣುತ್ತಿದ್ದ ಎನ್ನುವ ಚಿತ್ರ ಸ್ಪಷ್ಟವಾಗಿರಲಿಲ್ಲ. ಕಳೆದ ಬಾರಿ ಯಾವಾಗ ಬಷೀರಣ್ಣನಿಂದ ತೇಪೆ ಹಾಕಿಸಿಕೊಂಡಿದ್ದೆ ಎನ್ನುವ ನೆನಪೂ ನನಗೆ ಸ್ಪಷ್ಟವಾಗಿ ಆಗುತ್ತಿಲ್ಲ. ಈಗೀಗ ಟೈರಿಗೆ (ಅಥವಾ ಟ್ಯೂಬಿಗೆ) ತೇಪೆ ಹಾಕಿಸಬೇಕಿದ್ದರೆ ಗಾಡಿಯನ್ನು ನಿಲ್ಲಿಸಿ ಪಕ್ಕದಲ್ಲಿ ನಿಲ್ಲುತ್ತಿದ್ದೆ. ಜೀನ್ಸ್ ಏರಿಸಿ ಠಾಕುಠೀಕಾದ ಟೀಷರ್ಟಿನಲ್ಲಿದ್ದುದರಿಂದ ಕುಕ್ಕರಗಾಲಿನಲ್ಲಿ ಕೂರುತ್ತಿರಲಿಲ್ಲ. ಹಾಗೆ ನೋಡಿದರೆ ತೇಪೆ ಯಾವ ರೀತಿಯಲ್ಲಿ ಹಾಕುತ್ತಾನೆ ಎನ್ನುವ ಕುತೂಹಲವೂ ಇರಲಿಲ್ಲ. ಟ್ಯೂಬ್‌ಲೆಸ್ ಟೈರಿಗೆ ನೀರಿನಲ್ಲಿ ಅದ್ದಿ ಬುಗ್ಗೆಯಿಂದ ಟ್ಯೂಬಿನ ತೂತು ಹುಡುಕುವ ಪ್ರಕ್ರಿಯೆಯೂ ಇರಲಿಲ್ಲ. ಹೀಗಾಗಿ ಬಷೀರಣ್ಣ ಕೆಲಸಮಾಡುತ್ತಿದ್ದಾಗ ಅವನ ಮುಖಕ್ಕಿಂತ ಹೆಚ್ಚಾಗಿ ಅವನ ಕೈಗಳು, ತಲೆ, ಅಲ್ಲಿ ಉದುರಿದ್ದ ಕೂದಲ ಗುಂಡು ಭಾಗ ಮತ್ತು ಪಕ್ಕಕ್ಕೆ ಎತ್ತಿಟ್ಟಿದ್ದ ಕುಸುರಿ ಟೋಪಿ ಮಾತ್ರ ಕಾಣುತ್ತಿತ್ತು.

ಸಾಕಷ್ಟು ಬಾರಿ ಬಷೀರಣ್ಣನ ಬಳಿ ಹೋದಾಗ ನನಗೆ ಸಮಯವೂ ಇರುತ್ತಿರಲಿಲ್ಲ. ಹೀಗಾಗಿ ಗಾಡಿಯನ್ನು ಅಲ್ಲೇ ಬಿಟ್ಟು ತುಸು ಹೊತ್ತಿನ ನಂತರ ವಾಪಸ್ಸು ಬಂದು ಮರಮ್ಮತ್ತಾದ ವಾಹನವನ್ನು ಒಯ್ಯುವುದಿತ್ತು ಅಗಲೂ ಬಷೀರಣ್ಣನ ಕಣ್ಣಲ್ಲಿ ಕಣ್ಣಿಟ್ಟು ಯಾವುದೇ ವ್ಯವಹಾರ ನಡೆಸುವ ಪ್ರಮೇಯವಿರಲಿಲ್ಲ. ಹೀಗಾಗಿ ಬಷೀರಣ್ಣನ ಜೊತೆ ವ್ಯವಹಾರವಿದ್ದರೂ ಸ್ಮೃತಿಯಲ್ಲಿ ಅವನ ಮುಖಕ್ಕಿಂತ ಹೆಚ್ಚು ಬೇರೆ ಪ್ರತೀಕಗಳೇ ನೆನಪಾಗಿ ಉಳಿದಿತ್ತು.

*****

ಹೀಗೆ ಇದ್ದಕ್ಕಿದ್ದ ಹಾಗೆ ಬಷೀರಣ್ಣ ನಾಪತ್ತೆಯಾದದ್ದು ನನ್ನನ್ನು ಕಾಡಿತು. ಅಲ್ಲ, ಬಷೀರಣ್ಣ ಇದ್ದಕ್ಕಿದ್ದ ಹಾಗೆ ನಾಪತ್ತೆಯಾಗಲಿಲ್ಲ. ಬದಲಿಗೆ ಇದ್ದಕ್ಕಿದ್ದ ಹಾಗೆ ಆತ ನಾನಂದುಕೊಂಡ ಜಾಗದಲ್ಲಿ ಇರಲಿಲ್ಲ ಎನ್ನುವುದು ನನಗೆ ಇದ್ದಕ್ಕಿದ್ದ ಹಾಗೆ ತಿಳಿದು ಬಂತು. ಬಷೀರಣ್ಣನ ಅಂಗಡಿ ಕಾಣದಾಗಿತ್ತು. ಅದನ್ನು ನಾನು ಕಂಡಿದ್ದೆ. ಅದರ ಜಾಗದಲ್ಲಿ ಬಂದಿದ್ದ ಹೊಸ ಅಂಗಡಿಯಲ್ಲಿ ನಾನು ವ್ಯವಹರಿಸಿದ್ದರೂ ಅವನ ಗೈರುಹಾಜರಿ ನನ್ನನ್ನು ತಾಗಿರಲೇ ಇಲ್ಲ. ಮಾರನೆಯ ದಿನ ನಾನು ಏನೆಲ್ಲಾ ಕಳೆದುಕೊಂಡಿರಬಹುದು ಎನ್ನುವುದನ್ನು ಹುಡುಕಲು ಪ್ರಾರಂಭಿಸಿದೆ. ನನ್ನ ಮನೆಯಿಂದ ನಿಧಾನವಾಗಿ ಹೆಜ್ಜೆಯಿಡುತ್ತಾ ಮೂರು ರಸ್ತೆಗಳನ್ನು ದಾಟಿದೆ. ನನಗೆ ತಿಳಿಯದೆಯೇ ಎಷ್ಟೊಂದು ಬದಲಾಗಿತ್ತು. ರಸ್ತೆಯ ಮೇಲೆ ಪಡ್ಡೆ ಹುಡುಗರು ಸೈಕಲ್ಲುಗಳನ್ನು ಸವಾರಿ ಮಾಡುವುದು ಕಡಿಮೆಯಾಗಿತ್ತು. ಎಲ್ಲೂ ಸೈಕಲ್ ಬಾಡಿಗೆಗೆ ಕೊಡುತ್ತಿದ್ದ ಅಂಗಡಿ ಕಾಣಲಿಲ್ಲ. ಒಂದು ಪಂಚರಂಗಡಿ ಕಂಡಿತು. ಪ್ರಿಂಟಿಂಗ್ ಪ್ರೆಸ್ ನಾಪತ್ತೆಯಾಗಿ ಡಿಟಿಪಿ ಸೆಂಟರ್ ಬಂದಿತ್ತು. ರೇಷನ್ ಅಂಗಡಿಯಿದ್ದ ಜಾಗದಲ್ಲಿ ತ್ವರಿತವಾಗಿ ಏನು ಬೇಕಾದರೂ ಮುದ್ರಿಸುವ ಆಧುನಿಕ ಮುದ್ರಣ ಕೇಂದ್ರ ಬಂದಿತ್ತು. ಪೋಸ್ಟರು, ಪುಸ್ತಕದ ಮುಖಪುಟ, ವಿಜಿಟಿಂಗ್ ಕಾರ್ಡು, ಫ್ಲೆಕ್ಸ್, ಟೀ ಮಗ್ಗು... ಯಾವುದರ ಮೇಲೆ ಏನು ಬೇಕಾದರೂ ಮುದ್ರಿಸಿ ಕೊಡುವ ಆಧುನಿಕ ಅಂಗಡಿ. ಟ್ರಕ್ಕುಗಳನ್ನು ಬಾಡಿಗೆಗೆ ಕೊಡುತ್ತಿದ್ದ ಜಾಗದಲ್ಲಿ ದಂತವೈದ್ಯರೊಬ್ಬರು ತಮ್ಮ ಕ್ಲಿನಿಕ್ ತೆಗೆದಿದ್ದರು. ಸ್ಥಾಯಿಯಾಗಿ ತಳ್ಳುಗಾಡಿಯ ತರಕಾರಿ ಮತ್ತು ಕಿರಾಣಿಯಂಗಡಿಗಳು ಮಾತ್ರ ಇದ್ದುವು. ಬಷೀರಣ್ಣ ನಾಪತ್ತೆಯಾದದ್ದರಲ್ಲಿ ಆಶ್ಚರ್ಯವೇನು...

ಆದರೂ ಬಷೀರಣ್ಣನ ಬಗೆಗಿನ ನನ್ನ ಕುತೂಹಲ ಇದ್ದೇ ಇತ್ತು. ಬಾಲ್ಯದಿಂದ ನೋಡಿದ್ದೆ. ನಾನು ಬೆಳೆದಿದ್ದರೂ ಅವನು ಮಾತ್ರ ಸ್ಥಾಯಿಯಾಗಿ ಸ್ಥಿರವಾಗಿ ಇದ್ದ. ಈಗ ಇಲ್ಲವಾಗಿದ್ದಾನೆಂದರೆ ಏನಾಗಿರಬಹುದು? ಎಲ್ಲಿಗೆ ಹೋಗಿರಬಹುದು? ಪಿಂಚಣಿಯಿಲ್ಲದ ಅವನ ನಿವೃತ್ತಿ ಹೇಗಿರಬಹುದು. ಈ ಬಗ್ಗೆ ವಿಚಾರಿಸಬೇಕೆಂಬ ಹುಕ್ಕಿ ನನಗೆ ಬಂತು. ಇದು ನನ್ನ ವೈಯಕ್ತಿಕ ಕುತೂಹಲವಾಗಿತ್ತು. ಹೀಗೆ ಸ್ಮೃತಿಪಟಲದಿಂದ ಅಳಿಸಿಹೋಗಿದ್ದು ನನ್ನನ್ನು ಅಲ್ಲಾಡಿಸಿಬಿಟ್ಟಿತ್ತು. ನಮ್ಮ ಬೆಳವಣಿಗೆಯ ಭಾಗವೇ ಆಗಿದ್ದ ಯಾವುದೂ ಅಷ್ಟು ಸರಳವಾಗಿ ನಾಪತ್ತೆಯಾಗಿರಲಿಲ್ಲ ಎಂದು ನಾನು ನಂಬಿದ್ದೆ. ನಾನಿದ್ದ ಬೆಂಗಳೂರಿನ ಮುಖ್ಯ ಘಟನೆಗಳಾದಾಗ ಆ ಬಗ್ಗೆ ಚರ್ಚೆಯಾಗಿ ಅದಕ್ಕೊಂದು ಸಮಾಪ್ತಿ ಸಿಕ್ಕಿತ್ತು. ಹಡ್ಸನ್ ಸರ್ಕಲ್ ಕೆಡವಿ ಟ್ರಾಫಿಕ್ ಸಿಗ್ನಲ್ ಹಾಕಿದಾಗ, ಪ್ರೀಮಿಯರ್ ಬುಕ್‌ಶಾಪ್ ಮುಚ್ಚಿದಾಗ, ವಿಕ್ಟೋರಿಯಾ ಹೋಟೇಲನ್ನು ಒಂದು ಮಾಲ್ ಆಗಿ ಪರಿವರ್ತನೆ ಮಾಡಿದಾಗ, ಪುಟ್ಟಣ್ಣಕಣಗಾಲ್ ಚಿತ್ರಮಂದಿರವನ್ನು ನೆಲಸಮ ಮಾಡಿದಾಗ..... ಹೀಗೆಲ್ಲಾ ಆದಾಗ... ಏನಾದರೊಂದು ಚರ್ಚೆ, ಲೇಖನ ಮತ್ತು ಆ ಘಟನೆಯ ಅನಿವಾರ್ಯತೆಯ ಬಗ್ಗೆ ಚರ್ಚೆಯಾಗುತ್ತಿತ್ತು. ಹಾಗೇ ಗಾಂಧಿ ಬಜಾರಿನ ತರಕಾರಿ ವ್ಯಾಪಾರವೂ ಮುಚ್ಚಿಹೋಗುವುದರಲ್ಲಿದ್ದದ್ದು ಮತ್ತು ಪುನರ್ಜನ್ಮ ಪಡೆದದ್ದೂ ನೆನಪಾಯಿತು. ಆದರೆ ಬಷೀರಣ್ಣ ಸುದ್ದಿ ಮಾಡುವಷ್ಟು ಮುಖ್ಯ ವ್ಯಕ್ತಿಯಾಗಿರಲಿಲ್ಲವಾದರೂ, ನಾನು ಗಮನಿಸಿಯಾದರೂ ಇರಬೇಕಿತ್ತು.

ಅವನು ಬೇರೆಲ್ಲಾದರೂ ಹೋಗಿ ವ್ಯಾಪಾರ ಮಾಡುತ್ತಿದ್ದಾನೆಯೇ? ನಲವತ್ತೈದು ವರ್ಷಗಳ ವ್ಯಾಪಾರವನ್ನು ಹೀಗೆ ಏಕಾಏಕಿ ಬಿಟ್ಟು ಹೋಗಲು ಕಾರಣವೇನಿರಬಹುದು? ಪಂಚರಂಗಡಿಗಳು ಗಿಟ್ಟುತ್ತಿಲ್ಲವೇ? ಬೇರೇನಾದರೂ ವ್ಯಾಪಾರ ಕೈಹಿಡಿದನೇ? ಅದೇನಿರಬಹುದು? ಅವನು ಎಲ್ಲಿರಬಹುದು? ಏನು ಮಾಡುತ್ತಿರಬಹುದು? ಈ ಇಂಥ ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯುವುದು ಸರಳವಾಗಿರಲಿಲ್ಲ.

ಹಿಂದೆ ಬಷೀರಣ್ಣನ ಪಂಚರಂಗಡಿಯಾಗಿದ್ದು ಇಂದು ಫೋಟೋಕಾಪಿ ಅಂಗಡಿಯಾಗಿದ್ದಲ್ಲಿಗೆ ಹೋಗಿ ವಿಚಾರಿಸಿದೆ. "ನಾವು ಬರುವ ವೇಳೆಗಾಗಲೇ ಈ ಜಾಗ ತಿಂಗಳಿಗಿಂತ ಹೆಚ್ಚು ಕಾಲ ಖಾಲಿಯಾಗಿತ್ತು. ಹೀಗಾಗಿ ಹಿಂದೆ ಯಾರಿದ್ದರು ಎನ್ನುವುದು ಗೊತ್ತಿಲ್ಲ" ಅಂದರು. ಬಷೀರಣ್ಣನ ಪಕ್ಕದಲ್ಲಿ ಎಲ್.ಜಿ. ಬೇಕರಿಯ ಸಂಪತ್ತೈಂಗಾರರ ಅಂಗಡಿಯಿತ್ತು. ಆದರೆ ಸಂಪತ್ತೈಂಗಾರ್‌ಗೂ ಅವನ ಸುಳಿವಿದ್ದಂತಿರಲಿಲ್ಲ. "ಅಂಗಡಿಯ ವ್ಯಾಪಾರ ಕುಂಠಿತವಾಗುತ್ತಿದ್ದಂತೆ ಅಂಗಡಿಯ ಒಂದೊಂದೇ ವಸ್ತುಗಳು ಮಾಯವಾದುವು. ಮತ್ತು ಒಂದು ದಿನ ಅವನಿಲ್ಲವಾದ, ಆದರೆ ಈ ಬಗ್ಗೆ ನಮ್ಮ ಹತ್ತಿರ ಅವನು ಮಾತಾಡಲಿಲ್ಲ. ನಾವೂ ಕೇಳುವ ಪ್ರಯಾಸ ಮಾಡಲಿಲ್ಲ. ದೊಡ್ಡ ನೋಟು ಬಂದರೆ ಚಿಲ್ಲರೆಗೆ ನಮ್ಮಂಗಡಿಗೆ ಬರುತ್ತಿದ್ದ, ಯಾವಾಗಲಾದರೂ ಬನ್ ಕೊಂಡು ತಿನ್ನುತ್ತಿದ್ದ. ಆದರೆ ಅವನು ಅಂಗಡಿ ಮುಚ್ಚಿದ್ದನ್ನು ನಾವು ಗಮನಿಸಲೇ ಇಲ್ಲ. ಹೊಸ ಫೋಟೋಕಾಪಿ ಬಂದಾಗಲೇ ಬಷೀರ್ ಬರುತ್ತಿಲ್ಲ ಎಂದು ತಿಳೀತು. ಅಂಗಡಿಯ ಮಾಲೀಕರಿಗೆ ಫೋನ್ ಮಾಡಿ ಹೇಳಿದನಂತೆ. ಮೂರು ತಿಂಗಳ ಬಾಡಿಗೆಯನ್ನೂ ಕೊಟ್ಟಿಲ್ಲ ಎಂದು ಹೇಳಿದರು. ಇಷ್ಟು ವರ್ಷಗಳಿಂದ ಇದ್ದ, ಹೀಗಾಗಿ ಅದನ್ನು ಕಟ್ಟಲೇಬೇಕೂಂತ ಅವನ ಹಿಂದೆ ಬೀಳಲಿಲ್ಲ. ಆದರೆ ಅವನು ಏನು ಮಾಡುತ್ತಿದ್ದಾನೆ ಅಂತ ಯಾರಿಗೂ ಗೊತ್ತಿಲ್ಲ. ವ್ಯಾಪಾರ ಮುಚ್ಚಿದಾಗಿಂದ ಈ ಕಡೆಗೆ ಬಂದೇ ಇಲ್ಲ." ಎಂದು ಹೇಳುತ್ತಾ.. "ಎಲ್ಲಾ ಆ ದೇವರ ಲೀಲೆ....." ಎಂದು ಸಂಪತ್ತೈಂಗಾರ್ ಕೈ ಮೇಲಕ್ಕೆತ್ತಿದರು. ಅಂಗೈ ಕಣ್ಣೆದುರಿಗೆ ತಂದು ಬೆರಳುಗಳು ಆಕಾಶದ ದಿಕ್ಕಿನಲ್ಲಿ ನೇರವಾಗಿ ಸೆಟೆದಿಟ್ಟದ್ದು ದೇವರ ದಿಕ್ಕಿಗೆ ಭಕ್ತಿ ಮತ್ತು ಅಸಹಾಯಕತೆಯಂತೆ ತೋರಿದರೂ, ಬಷೀರಣ್ಣ 'ಎಲ್ಲಾ ಅಲ್ಲಾಹುವಿನ ಕೃಪೆ' ಎಂದು ದೇವರ ಆಶೀರ್ವಾದವನ್ನು ಆವಾಹಿಸುವಾಗ ಕೈಯೆತ್ತುತ್ತಿದ್ದದ್ದೂ ಹಾಗೇ ಎಂದು ನೆನಪಾಯಿತು.

ನಲವತ್ತೈದು ವರ್ಷ ಕಾಲ. ಸ್ಥಿರವಾಗಿ, ಆ ಜಾಗದಿಂದ ಅಲುಗಾಡದೇ ತೂತುಗಳಿಗೆ ತೇಪೆ ಹಾಕುತ್ತಿದ್ದವನ ಅಸ್ತಿತ್ವವನ್ನೂ-ಗೈರುಹಾಜರಿಯನ್ನೂ ಯಾರೂ ಗಮನಿಸಿರಲಿಲ್ಲ. ನೆಲದಿಂದ ಧಗೆ, ಚಿಮಣಿಯಿಂದ ಹೊಗೆ, ಎದ್ದು ಹೋಗುವ ಹಾಗೆ? ಎಂದು ಕೆ.ವಿ. ತಿರುಮಲೇಶ ಬರೆದಂತೆ ಬಷೀರಣ್ಣ ಕಾಣೆಯಾಗಿದ್ದ. ಸಿನೇಮಾ ಕಥೆಗಳ ಮಾದರಿ, ಆದರಿದು ಮಾತ್ರ ಖಾತರಿ ಎಂದೂ ಕವಿ ಬರೆದಿದ್ದರು. ಅಂದರೀಗ ಪಂಚರುಗಳಿಗೆ ತೇಪೆ ಹಾಕುವ ಕೆಲಸವೇ ಇಲ್ಲವಾಗಿದೆಯೇ? ಗಾಡಿಗಳಿಗೆ ಪಂಚರೇ ಆಗುತ್ತಿಲ್ಲವೇ? ತೂತಾದಾಗ ಮಾತ್ರ ತೇಪೆ ಹಾಕಲು ಪ್ರಕಟಗೊಳ್ಳುತ್ತಿದ್ದ ಅವಧೂತನಾಗಿ

ಬಷೀರಣ್ಣನಿದ್ದನೇ. ನನ್ನ ಮನಸ್ಸಿನಲ್ಲಿ ಹಲವು ಯೋಚನೆಗಳು.

ಬಷೀರಣ್ಣನ ಬಗ್ಗೆ ಎರಡು ಸುಳಿವುಗಳು ಸಿಕ್ಕುವು.

ಒಂದು – ಪ್ರತಿ ಶುಕ್ರವಾರ ಅಂಗಡಿ ತೆರೆದಿಟ್ಟೇ, ಬದಿಯಲ್ಲಿದ್ದ ಮಸೀದಿಗೆ ಹೋಗಿ ನಮಾಜು ಸಲ್ಲಿಸಿ ಬರುತ್ತಿದ್ದ.

ಎರಡು – ಅವನಿದ್ದದ್ದು ಆಜಾದ್ ಮೈದಾನದ ಆಚೆಬದಿಯ ಕೊಳೇಗೇರಿಯಲ್ಲಿ.

ಯಾಕೋ ನನಗೆ ಇದನ್ನು ಪರಿಶೀಲಿಸಬೇಕು ಅನ್ನಿಸಿತ್ತು. ಇದರಿಂದ ಸಾಧಿಸುವುದೇನೂ ಇರಲಿಲ್ಲ. ನಾನು ಅವನಿಗೆ ಸಹಾಯ ಮಾಡುವುದೂ ಇರಲಿಲ್ಲ. ಖಾಸಾ ದೋಸ್ತನೂ ಅಲ್ಲ. ಆದರೂ ಯಾಕೆ ಇದನ್ನು ಹಿಡಿದು ನನ್ನ ಮನಸ್ಸು ಕದಡಿದೆ ಎನ್ನುವುದು ನನಗೆ ತಿಳಿಯಲಿಲ್ಲ. ಎಷ್ಟು ಕೆದಕಿ ನೋಡಿದರೂ ಗೊತ್ತಾದದ್ದು ಇಷ್ಟು: ಹೆಚ್ಚಿನಂಶ ಅವನು ಅಲ್ಲಿಯೇ ಇರುತ್ತಿದ್ದ. ತೇಪೆಯೇ ಕಾಯಕ. ಕಾಯಕವೇ ಕೈಲಾಸ.

ಮಸೀದಿಯಲ್ಲಿ ವಿಚಾರಿಸಿದಾಗ ತಿಳಿದುಬಂದದ್ದಿಷ್ಟು:

"ಹೌದು. ಹೆಸರು ಸರಿಯಾಗಿ ಗೊತ್ತಿಲ್ಲವಾದರೂ ಪಂಚರಂಗಡಿ ನಡೆಸುತ್ತಿದ್ದ ಆಸಾಮಿ ತಪ್ಪದೇ ಪ್ರತಿ ಶುಕ್ರವಾರ ನಮಾಜು ಸಲ್ಲಿಸಲು ಬರುತ್ತಿದ್ದ. ಅಂಗಡಿಯಲ್ಲಿ ಕೈಕಾಲು ತೊಳೆದು ಬರುತ್ತಿದ್ದವನು ಇಲ್ಲಿಯೂ ಮತ್ತೊಮ್ಮೆ ದೇಹ ಶುದ್ಧಿ ಮಾಡಿಕೊಳ್ಳುತ್ತಿದ್ದ. ಈಚೆಗೆ ಕಂಡಿಲ್ಲ. ಅಥವಾ ನಾವು ಗಮನವಿಟ್ಟು ನೋಡಿಲ್ಲ. ಮುಂದಿನ ಹಲವು ಶುಕ್ರವಾರಗಳು ಗಮನಿಸಿ ನೋಡುತ್ತೇವೆ. ನಿಮ್ಮ ನಂಬರು ಕೊಡಿ. ಸುಳಿವು ಸಿಕ್ಕರೆ ವಾಟ್ಸಾಪ್ ಮಾಡುತ್ತೇವೆ. ನಮ್ಮಲ್ಲಿ ಅನೇಕ ಜನ ಬಂದು–ಹೋಗಿ ಮಾಡುತ್ತಿರುತ್ತಾರೆ. ಆದರೆ ಅದರ ನಿರ್ದಿಷ್ಟ ದಾಖಲೆ ನಮ್ಮ ಬಳಿ ಇರೋದಿಲ್ಲ... ಆದರೆ ಈಗೀಗ ನಾವೂ ದಾಖಲಾತಿಯನ್ನು ಮಾಡಬೇಕೆಂದು ಯೋಚಿಸುತ್ತಿದ್ದೇವೆ. ದೊಡ್ಡ ಪಾರ್ಕುಗಳಲ್ಲಿವಾಯುವಿಹಾರಕ್ಕೆ ಪಾಸ್ ಮಾಡಿಸುವಂತೆ ನಮ್ಮ ಮಸೀದಿಗೂ ಒಂದು ಗುರುತಿನ ಚೀಟಿ ಕೊಡುವುದೂ ಒಳಿತೇ. ಇದರಿಂದ ನಮ್ಮ ದಾಖಲೆಯ ಪ್ರಕ್ರಿಯೆಯೂ ಉತ್ತಮಗೊಳ್ಳುತ್ತದೆ. ಮೇಲಾಗಿ, ಯಾರಾದರೂ ಪತ್ತೆ–ನಾಪತ್ತೆಯಾದರೆ ನಮಗೂ ಗೊತ್ತಾಗುತ್ತದೆ. ಈಗಿನ ದಿನಗಳಲ್ಲಿ ಎಲ್ಲ ರೀತಿಯ ದಾಖಲಾತಿಯನ್ನಿಡುವುದೂ ಒಳ್ಳೆಯದೇ, ಯಾವಾಗ ಯಾವುದು ಯಾತಕ್ಕೆ ಕೆಲಸಕ್ಕೆ ಬರುತ್ತೋ ಗೊತ್ತಿಲ್ಲವಲ್ಲಾ.."

ಆಜಾದ್ ನಗರದ ಕೊಳೇಗೇರಿಯಲ್ಲಿ ವಿಚಾರಿಸಿದಾಗ ತಿಳಿದುಬಂದದ್ದು:

"ಹೌದು. ಇಲ್ಲಿಯೇ ಇದ್ದ. ಒಂಟಿ. ಸಂಸಾರ ಇರಲಿಲ್ಲ." ಇದೊಂದು ವಿವರ ಗೊತ್ತಿರಲಿಲ್ಲ. ಬಹುಶಃ ಸಂಸಾರ ಮಕ್ಕಳು ಇದ್ದಿದ್ದರೆ ಅವನು ಈ ಕಾಯಕವನ್ನು ಭಿನ್ನವಾಗಿ ನೋಡುತ್ತಿದ್ದನೇನೋ. ಒಂಟಿಯಾದ್ದರಿಂದ ಇದ್ದದ್ದೂ ಇಲ್ಲದ್ದೂ ಗೊತ್ತಾಗುತ್ತಿರಲಿಲ್ಲ. ರಾತ್ರಿಯ ವೇಳೆಗೆ ಬರುತ್ತಿದ್ದ. ಮುಂಜಾನೆಗೆ ಹೊರಟುಹೋಗುತ್ತಿದ್ದ. ಭಾನುವಾರ ಅಪರಾಹ್ನ ಕಾಣಿಸಿಕೊಳ್ಳುತ್ತಿದ್ದ. ಬಹುಶಃ ಬಟ್ಟೆ ಒಗೆಯುವುದಕ್ಕೆ ಮತ್ತು ಅದನ್ನು ಒಣಗಿಸುವುದಕ್ಕೆ ಆ ದಿನವನ್ನು ಕಾಯ್ದಿರಿಸಿದ್ದ ಅನ್ನಿಸುತ್ತದೆ. ಕೆಲವು ದಿನಗಳಿಂದ ಭಾನುವಾರಗಳಂದೂ ಕಂಡಂತಿಲ್ಲ. ಅವನಿದ್ದ ಖೋಲಿ ಹಾಗೆಯೇ ಇದೆ. ಅದಕ್ಕೊಂದು ಬೀಗ ಜಡಿದಿದ್ದಾರೆ. ಬೀಗವಿದ್ದರೂ ಇಲ್ಲದಿದ್ದರೂ ಯಾವುದೇ ಫರಕ್ ಇಲ್ಲದಿರುವಂತಹ ಚಿಲಕ ಮತ್ತು ಬೀಗ. ಬಷೀರಣ್ಣನ ಗೈರುಹಾಜರಿಯನ್ನು ಯಾರೂ ಗಮನಿಸಿಲ್ಲ. ಮನೆ ಮಾಲೀಕನೂ ಬಾಡಿಗೆಯ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಬಷೀರನಿಂದ ಬರುತ್ತಿದ್ದ ಬಾಡಿಗೆ ಅಷ್ಟರಲ್ಲೇ ಇದೆ. ಆ ಖೋಲಿಯನ್ನು ಬೇರೆ ಯಾರೂ ಬಾಡಿಗೆಗೆ ಹಿಡಿಯಲು ತಯಾರಿದ್ದಂತೆ ಕಂಡಿರಲಿಲ್ಲ. ಅದರ ಪರಿಸ್ಥಿತಿ ಹಾಗಿತ್ತು. ಯಾರಿಗೂ ಅವನ ಗೈರುಹಾಜರಿ ತಟ್ಟಲಿಲ್ಲವೆಂದರೆ ಅದಕ್ಕೆ ಅವನ ಅವಶ್ಯಕತೆ ಯಾರಿಗೂ ಇಲ್ಲದ್ದೇ ಕಾರಣವಿರಬಹುದು. "ಅವಶ್ಯಕತೆಯಿಲ್ಲದ್ದರೆ ದೇವರನ್ನೇ ಮರೆಯುವ ನಾವು, ವಿನಾಕಾರಣ ನಾವು ಯಾರನ್ನಾದರೂ ಯಾಕೆ ನೆನಪು ಮಾಡುಕೊಳ್ಳುತ್ತೇವೆ ಹೇಳಿ? ನೀವೂ ಮರೆತುಬಿಡಿ ಇದರಿಂದ ಸಾಧಿಸುವುದೇನು" ಎಂದು ಅಲ್ಲಿನ ಹಿರಿಯರೊಬ್ಬರು ಹೇಳಿ ಈ ಸಮಸ್ಯೆಗೆ ಸರಳ ಪರಿಹಾರ ಸೂಚಿಸಿದರು.

ಅಂದರೇನು? ಬಷೀರಣ್ಣ ದೇವರೇ? ಇಷ್ಟ ಬಂದಾಗ ಪ್ರತ್ಯಕ್ಷವಾಗಿ, ಬೇಕಾದವರ ಪಂಚರುಗಳಿಗೆ ತೇಪೆ ಹಾಕುವ ಅವಧೂತನೇ... ಯಾರೂ ಕೇಳುತ್ತಿಲ್ಲ ಎನ್ನುವ ಕಾರಣಕ್ಕೆ ಕಾಣೆಯಾಗಿದ್ದಾನೆ ಬೇಕಾದಾಗ ಪ್ರತ್ಯಕ್ಷವಾಗುತ್ತಾನೆ ಎನ್ನುವುದರ ಅರ್ಥವೇನು... ಇದೆಂತಹ ವ್ಯಾಪಾರ? ಅಥವಾ ಭಕ್ತಿಯೂ–ವ್ಯಾಪಾರವೂ ಒಂದನ್ನೊಂದು ಹೋಲುತ್ತದೆಯೇ? ಬೇಡಿಕೆಯಿದ್ದಾಗ ಪ್ರತ್ಯಕ್ಷವಾಗುವ ಪರಿ ಎರಡರಲ್ಲೂ ಇದ್ದಂತಿತ್ತು. ನಲವತ್ತೈದು ವರ್ಷಗಳ ಕಾಲ ಸ್ಥಾಯಿಯಾಗಿ ಅಲ್ಲಿಯೇ ಇದ್ದು ತೇಪೆ ಹಾಕುತ್ತಿದ್ದವ ಈಗ ತಂತ್ರಜ್ಞಾನ ಬದಲಾದ ಹಾಗೆ, ಉಳಿಯಲು ಯಾವ ಪ್ರಯತ್ನವನ್ನೂ ಮಾಡದೇ ಹೊರಟುಹೋಗುವುದೆಂದರೇನು?

ಬಷೀರಣ್ಣ ನೋಡಲು ಹೇಗಿದ್ದ? ನೆನಪು ಮಾಡಿಕೊಳ್ಳಲು ಪ್ರಯತ್ನಿಸಿದೆ. ಉದ್ದ ಗಡ್ಡ. ಸಡಿಲವಾಗಿ, ಸಾಕಷ್ಟು ಗಾಳಿಯಾಡುವಂತಿದ್ದ ಸಲ್ವಾರ್. ಉದ್ದನೆ ಪಠಾಣಿ ಕುರ್ತಾ. ಟೈರುಗಳ ಜೊತೆ ಕೆಲಸ ಮಾಡುತ್ತಿದ್ದುದ್ದರಿಂದ ಕೈ, ಮೈ ಬಟ್ಟೆಯೆಲ್ಲಾ ಕಪ್ಪು ಕರೆಗಳಾಗಿರುತ್ತಿತ್ತು. ಕಲಾಸಿಪಾಳ್ಯದ ಉರ್ದು, ಚಾಮರಾಜಪೇಟೆಯ ಕನ್ನಡ ಬಲ್ಲವನಾಗಿದ್ದ. ಆ ಮಾತುಗಳೂ ಮಿತವಾಗಿ. ಅವಶ್ಯಕತೆಯಿದ್ದಷ್ಟು ಮಾತ್ರ ಆಡುತ್ತಿದ್ದ. ತಲೆಯ ಮೇಲೆ ಕುಸುರಿ ಟೋಪಿ ಇದ್ದರೆ ಇತ್ತು. ಇಲ್ಲವಾದರೆ ಕುರ್ಚಿಯ ಮೇಲೆ ಮಡಚಿರುತ್ತಿತ್ತು. ತಲೆಯ ಹಿಂಭಾಗದ ಕೂದಲು ಉದುರಿ ಗುಂಡಗೆ ಬೋಳಾಗಿತ್ತು. ಆ ಕುಸುರಿ ಟೋಪಿ, ಅದನ್ನು ಮುಚ್ಚುವಷ್ಟು ಮಾತ್ರ ಇದ್ದಂತಿತ್ತು. ಆದರೂ ಬಷೀರಣ್ಣನ ಮುಖ ನೆನಪು ಮಾಡಿಕೊಳ್ಳಲು ಪ್ರಯತ್ನಿಸಿದರೆ ಮುಖಕ್ಕಿಂತ ಹೆಚ್ಚು ಟೋಪಿ ಮತ್ತು ಕಪ್ಪು ಬಿಳುಪಿನ (ಹೆಚ್ಚು ಬಿಳುಪು ಕಮ್ಮಿ ಕಪ್ಪಿನ) ಗಡ್ಡ ಕಾಣುತ್ತಿತ್ತು. ತಲೆಗೂ, ಗಡ್ಡಕ್ಕೂ ಗೋರಂಟಿ ಹಚ್ಚಿರಲಿಲ್ಲ. ಹೀಗಾಗಿ ಕೂದಲು ಕಾವಿಬಣ್ಣಕ್ಕೆ ಬದಲಾಗಿರಲಿಲ್ಲ. ಹಣೆಯ ಮೇಲೆ ನಮಾಜಿನ ಗುರುತು. ಗಡ್ಡಕ್ಕಿಂತ ತೆಳುವಾದ ಮೀಸೆ. ಅವನ ಧರ್ಮ ಯಾವುದೆಂದು ಅವನ ಬಟ್ಟೆಗಳಿಂದಲೇ ತಿಳಿದುಹೋಗುತ್ತಿತ್ತು.

ಪ್ರತಿದಿನ ಮುಂಜಾನೆ ಎಸ್.ಎಲ್.ವಿ.ಗೆ ಬಂದು ಇಡ್ಲಿ ವಡೆ ತಿಂದು ಕಾಫಿ ಕುಡಿಯುತ್ತಿದ್ದನಂತೆ. ಮಧ್ಯಾಹ್ನದ ಊಟ ಚಾಮರಾಜಪೇಟೆಯ ಕನ್ನಡ ತಿಂಡಿ ಕೇಂದ್ರದಲ್ಲಿ ವಾಸ್ತಿ ಪುಳಿಯೋಗರೆ, ಬೇಂದ್ರೆ ಚಿತ್ರಾನ್ನ ಅಥವಾ ವೆಂಕಟಸುಬ್ಬಯ್ಯ ಟೊಮಾಟೋಬಾತ್ ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಎಂದು ಯಾರೋ ಹೇಳಿದರು. ರಾತ್ರಿಯ ಊಟದ ಬಗ್ಗೆ ಯಾರಿಗೂ ಮಾಹಿತಿಯಿದ್ದಂತಿರಲಿಲ್ಲ. ಆದರೆ ಎಸ್.ಎಲ್.ವಿ.ಯಲ್ಲೂ, ಕನ್ನಡ ತಿಂಡಿ ಕೇಂದ್ರದಲ್ಲೂ ಬಷೀರಣ್ಣನ ವಿವರಗಳನ್ನು ಹೋಲುವ ವ್ಯಕ್ತಿಯನ್ನು ಕಂಡ ನೆನಪಿತ್ತೇ ಹೊರತು ಆತನ ಗೈರುಹಾಜರಿಯ ಬಗ್ಗೆ ಯಾರೂ ತಲೆಕೆಡಿಸಿಕೊಂಡಂತಿರಲಿಲ್ಲ.

ಆಧುನಿಕತೆ, ಜೀವನೋಪಾಯ ಹಾಗೂ ಕಾಯಕ ನಾಪತ್ತೆಯಾಗುತ್ತಿದೆ ಎಂದೆನಿಸುತ್ತಿದ್ದಂತೆ ಮಾಯವಾದದ್ದು ಬರೇ ಪಂಚರಂಗಡಿ ಅಲ್ಲವೆನ್ನಿಸಿತು. ಯೋಚಿಸುತ್ತಿದ್ದಂತೆ ಹಳೇ ಪೇಪರ್–ಖಾಲೀ ಸೀಸಾ, ಸ್ಕೂಟರ್ ರಿಪೇರಿ, ಕಲಾಯಿ, ಹಾಸಿಗೆ–ದಿಂಬಿನ ಮರಮ್ಮತ್ತು, ಹೀಗೆ ಪಟ್ಟಿ ಮಾಡುತ್ತಾ ಹೋದಾಗ ಹಳೇ ಕಾಯಕಗಳನೇಕ ಮಾಯವಾಗಿದ್ದುವು ಎನ್ನುವುದು ಮನದಟ್ಟಾಯಿತು. ಹೊಸದಾಗಿ ಹುಟ್ಟಿದ ಅವಕಾಶಗಳಲ್ಲಿ ಬಷೀರಣ್ಣನ ಮುಖವನ್ನು ಹೊಂದಿಸುವುದು ಸುಲಭದ ಕೆಲಸವಾಗಿರಲಿಲ್ಲ. ಫುಟ್ಪಾತಿನ ಮೇಲೆ ಮೊಬೈಲಿನ ಪರಿಕರಗಳನ್ನು ಗೊರಿಲ್ಲಾಗಾಜನ್ನೂ, ಕವರುಗಳನ್ನೂ ಮಾರಾಟ ಮಾಡುವ, ಮರಮ್ಮತ್ತು ಮಾಡುವ ಕಾಯಕ ಕಂಡಿತು. ತರಕಾರಿ ಮತ್ತು ಹಣ್ಣಿನ ವ್ಯಾಪಾರ ಮುಂದುವರೆದಿತ್ತು. ಇಸ್ತ್ರಿ ಸೇವೆಗಳು ಮುಂದುವರೆದಿದ್ದುವು. ಆಹಾರದ ಮಾರಾಟವಿತ್ತು.... ಆದರೆ ರೇಡಿಯೋ ರಿಪೇರಿ, ಗಡಿಯಾರದಂಗಡಿ, ಟಿವಿ ರಿಪೇರಿ, ಮಿಕ್ಕ ಯಂತ್ರಗಳ ರಿಪೇರಿಯಂಗಡಿಗಳು ವಿರಳವಾಗುತ್ತಾ ಹೋಗಿದ್ದುವು. ಯಾವುದು ಏನೇ ಆದರೂ, ಬಷೀರಣ್ಣ ನಾಪತ್ತೆ ಆದದ್ದು ಯಾಕೆ, ಮತ್ತು ಎಲ್ಲಿ ಎನ್ನುವುದು ತಿಳಿಯಲಿಲ್ಲ. ಬಷೀರಣ್ಣನನ್ನು ಹುಡುಕುವುದರಲ್ಲಿ ಅರ್ಥವಿರಲಿಲ್ಲ. ಮಾಹಾನಗರದಲ್ಲಿ ಎಲ್ಲೋ ಅವನು ಕಳುವಾಗಿದ್ದ. ಹಾಗೆ ನೋಡಿದರೆ ಮಿಕ್ಕ ಹಳೆಯ ಪ್ರತೀಕಗಳು ನಾಪತ್ತೆಯಾದ ಪ್ರಕ್ರಿಯೆ ನನಗೆ ತಿಳಿದಿತ್ತಾದರೂ ಅವುಗಳನ್ನು ಈಗ ಹುಡುಕುವ ಪ್ರಯತ್ನವನ್ನೂ ಮಾಡಿರಲಿಲ್ಲ. ಹುಡುಕಿದರೆ ಅವು ಸಿಗುವುದಕ್ಕೆ ಶಕ್ಯವೂ ಇರಲಿಲ್ಲ......

ಇಷ್ಟೆಲ್ಲ ಹುಡುಕಿ ನಾನು ಮನೆಗೆ ಬಂದು ಟಿವಿ ನೋಡುತ್ತಿದ್ದಾಗ ಬಾಗಿಲ ಬೆಲ್ ಆಯಿತು. ತೆಗೆದರೆ ಎದುರಿಗೆ ಬಷೀರಣ್ಣ! ಕುಸುರಿ ಟೋಪಿಯಿರಲಿಲ್ಲ. ಶುಭ್ರವಾದ ಬಟ್ಟೆಗಳನ್ನು ತೊಟ್ಟಿದ್ದ.

"ಒಂದು ವಾರದ ಕೆಳಗೆ ಅಂಗಡಿಯಿದ್ದ ಜಾಗಕ್ಕೆ ಬಂದಿದ್ದಿರಂತೆ. ಮಸೀದಿಯಲ್ಲಿ ನನ್ನ ಬಗ್ಗೆ ಕೇಳಿದಿರಂತೆ. ಎಲ್ಲ ಕಳಕೊಂಡು ಬೀದಿಯ ಮೇಲಿರೋವನನ್ನು ಹುಡುಕಿ ಬಂದಿದ್ದಿರಿ. ನೀವು ನನ್ನನ್ನು ನೆನಪು ಮಾಡಿಕೊಂಡಿದ್ದೀರೆಂದರೆ ನನಗಾಗಿ ಏನೋ ಕೆಲಸವಿರಬೇಕು. ಮಸೀದಿಯಲ್ಲಿ ನಿಮ್ಮ ವಿಷಯ ಹೇಳಿದರು. ನೋಡಿ ಹೋಗೋಣವೆಂದು ಬಂದೆ." ಎಂದ. ಅವನು ಎದುರಿಗೆ ಪ್ರತ್ಯಕ್ಷವಾದಾಗ ಏನು ಮಾಡಬೇಕೋ ತಿಳಿಯಲಿಲ್ಲ.

ಏನೂ ತೋಚದೇ. 'ಕಾಫಿ ಕುಡೀತಿಯಾ ಬಷೀರಣ್ಣಾ?' ಎಂದೆ, ಬೇಡವೆಂದ. ಅಲ್ಲಿಂದ ಮುಂದಕ್ಕೆ ಮಾತು ಹೊರಡಲಿಲ್ಲ. ಜೇಬಿನಿಂದ ಪರ್ಸ್ ತೆಗೆದು ಐನೂರರ ಎರಡು ನೋಟು ಕೊಟ್ಟೆ. ಬಷೀರ ನಕ್ಕುಬಿಟ್ಟ.

"ಕೆಲಸ ಏನಾದರೂ ಇದ್ದರೆ ಮಾಡ್ತೀನಿ. ಆದರೂ ಈಗ ಪಂಚರ್ ಹಾಕಲು ಸರಿಯಾಗಿ ಕಣ್ಣು ಕಾಣಿಸುವುದಿಲ್ಲ, ಶಕ್ತಿಯೂ ಇಲ್ಲ. ಆದರೂ ನನಗೆ ತಕ್ಕ ಕೆಲಸವಿದ್ದರೆ ಹೇಳಿ. ಇದು ನನ್ನ ನಂಬರು" ಎಂದು ಹೇಳಿ ಆ ಎರಡೂ ನೋಟುಗಳನ್ನು ನೆಲದ ಮೇಲಿಟ್ಟು ಮತ್ತೆ ಅದೃಶ್ಯನಾದ.

ಬಷೀರಣ್ಣನ ಬಗ್ಗೆ ಹೆಚ್ಚು ತಿಳಿಯುವುದು ಒಳಿತೋ, ಅವನನ್ನು ಒಂದು ಕಥೆಯಾಗಿಯೇ ಉಳಿಸಿಕೊಳ್ಳುವುದು ಒಳಿತೋ ತಿಳಿಯದೇ ಇದ್ದುಬಿಟ್ಟೆ.



**(ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿರುವ ಎಂ ಎಸ್ ಶ್ರೀರಾಮ್ ಕನ್ನಡದ ಖ್ಯಾತ ಕಥೆಗಾರ ಹಾಗೂ ಆರ್ಥಿಕ ಚಿಂತಕರೂ ಹೌದು)**

# ನವಿಲುಗರಿ

**ಪ್ರಾರ್ಥನೆ**



ಎಲ್ಲಿದೆ ಅಸ್ಪೃಶ್ಯತೆ ಅಂತ
ಗಂಟಲ ನರಗಳನ್ನು
ಉಬ್ಬಿಸಿಕೊಂಡು
ಕಣ್ಣುಗಳ ಮೆಡ್ಡರಿಸಿಕೊಂಡು
ಹಣೆಯ ಮೇಲೆ
ಬೆವರ ಹರಿಸಿಕೊಂಡು
ತೊಟ್ಟ ಚಪ್ಪಲಿಗಳನ್ನು
ನರನರವೆನ್ನಿಸಿಕೊಂಡು
ಕೇಳುತ್ತಾರೆ
ಕೆಲವರು ಹಲವರು
ನಾಲಿಗೆಯಲ್ಲಿ ನೀರಿಲ್ಲದವರು..

ಗೊತ್ತಿರುವ ಪ್ರಶ್ನೆಗೆ
ಉತ್ತರವಿಲ್ಲ
ಗೆಳೆಯ
ಅಷ್ಟೆಲ್ಲಾ ನೋಯಿಸಿಕೊಳ್ಳಬೇಡಿ
ದೇಹವನ್ನ ಮನಸ್ಸನ್ನ
ಮೃದು ಹೃದಯವನ್ನಾ



ಚಿತ್ರ : ವಿಜಯಶ್ರೀ ಹಾಲಾಡಿ



ಕಣ್ಣು ಹಲ್ಲು ಪಾದಗಳನ್ನ
ಕೇಳಿ..
ಹಳ್ಳಿ ಹೋಟೆಲುಗಳಲ್ಲಿ
ಹೊರಗೆ ನಿಲ್ಲಿಸಿದ
ಗ್ಲಾಸುಗಳು
ಮಲಗಿಸಿದ ಪ್ಲೇಟುಗಳು
ಪ್ರಾರ್ಥಿಸುತ್ತಿವೆ
ಗೆಳೆಯ
ನಮ್ಮನ್ನೇಕೆ ಹೀಗೆ
ಹೊರಗೆ ನಿಲ್ಲಿಸಿದ್ದೀರಿ ?
ಮಲಗಿಸಿದ್ದೀರಿ ?
ನಾವು ಅಸ್ಪೃಶ್ಯ ಫ್ಯಾಕ್ಟರಿಗಳಿಂದ
ಬಂದವರಲ್ಲವೇ ಅಲ್ಲ
ನಮ್ಮೊಟ್ಟಿಗೆ ಬಂದವರು
ಒಳಗಿದ್ದಾರೆ.

ಸದ್ಯ ಈ ಕವಿತೆ
ಇಲ್ಲಿಗೇ ನಿಲ್ಲಿಸಿದ್ದೇನೆ
ಅಥವಾ
ಮಲಗಿಸಿದ್ದೇನೆ

**–ಸುಬ್ಬು ಹೊಲೆಯಾರ್**

---

**೩ನೇಪುಟದಿಂದ)**

ಬೋಧಿಸಿದನು. ವಿದ್ಯೆಯನ್ನು ಎಲ್ಲರಿಗೂ ತೆರೆದಿಟ್ಟಾಗ ಧರ್ಮ ಸದ್ಧರ್ಮವಾಗುತ್ತದೆ ಎಂದು ಬುದ್ಧ ಬಿಡಿಸಿ ಹೇಳಿದನು.

**ಪ್ರಜ್ಞೆ ಅಗತ್ಯವೆಂದು ಬೋಧಿಸುವುದು**

'ಬರಿಯ ವಿದ್ಯೆ ಸಾಕಾಗುವುದಿಲ್ಲ, ಏಕೆಂದರೆ, ಅದು ಶುಷ್ಕ ಪಾಂಡಿತ್ಯಕ್ಕೆ ಎಡೆಮಾಡಬಹುದು' ಎಂದು ಹೇಳಿದ ಬುದ್ಧನು ವಿದ್ಯೆಯೊಂದಿಗೆ ಪ್ರಜ್ಞೆಯನ್ನು ಗಳಿಸಿಕೊಳ್ಳುವುದು ಅಗತ್ಯ ಎಂದು ಬೋಧಿಸಿದನು. ವಿದ್ಯೆಗೂ–ಪ್ರಜ್ಞೆಗೂ ಅಂದರೆ ಜ್ಞಾನಕ್ಕೂ– ಸೂಕ್ಷ್ಮ ಪರಿಜ್ಞಾನಕ್ಕೂ ಇರುವ ವ್ಯತ್ಯಾಸವನ್ನು ಬುದ್ಧನು ತೋರಿಸಿಕೊಟ್ಟಿದ್ದಾನೆ.

**ಮೈತ್ರಿಯನ್ನು ಬೆಳೆಸುವುದು**

ಕೇವಲ ಪ್ರಜ್ಞೆಯೊಂದೇ ಸಾಲದು. ಅದನ್ನು ಶೀಲ ಅನುಸರಿಸಬೇಕು. ಪ್ರಜ್ಞೆ ಅಗತ್ಯ. ಆದರೆ ಶೀಲ ಇನ್ನೂ ಅಗತ್ಯ. ಶೀಲವಿಲ್ಲದ ಪ್ರಜ್ಞೆ ಅಪಾಯಕಾರಿಯಾದುದು.

ಪ್ರಜ್ಞೆ ಎನ್ನುವುದು ಮನುಷ್ಯರ ಕೈಯಲ್ಲಿನ ಖಡ್ಗ. ಶೀಲವುಳ್ಳ ವ್ಯಕ್ತಿಯ ಕೈಯಲ್ಲಿ ಅದು ರಕ್ಷಣೆಗೆ ಬಳಕೆಯಾಗಬಹುದು. ಆದರೆ ಶೀಲವಿಲ್ಲದ ಮನುಷ್ಯರ ಕೈಯಲ್ಲಿ ಅದು ಕೊಲೆಗೆ ಬಳಕೆಯಾಗಬಹುದು. ಆದ್ದರಿಂದಲೇ, ಪ್ರಜ್ಞೆಗಿಂತ ಶೀಲ ಮುಖ್ಯವಾದುದು. ಪ್ರಜ್ಞೆ ಎಂದರೆ ವಿಚಾರ ಧರ್ಮ ಅಂದರೆ ಸರಿಯಾಗಿ ಆಲೋಚಿಸುವುದು. ಶೀಲ ಎನ್ನುವುದು ಆಚಾರ ಧರ್ಮ ಅಂದರೆ ಸರಿಯಾಗಿ ನಡೆದುಕೊಳ್ಳುವುದು.

**ಶೀಲವನ್ನು ಬೆಳೆಸುವುದು**

ಶೀಲ ಎಂದರೆ ಕೊಲ್ಲದೆ ಇರುವುದು, ಕಳ್ಳತನ ಮಾಡದಿರುವುದು, ವ್ಯಭಿಚಾರ ಮಾಡದಿರುವುದು, ಸುಳ್ಳು ಹೇಳದಿರುವುದು, ಮದ್ಯಪಾನ ಮಾಡದಿರುವುದು ಎಂಬ ಐದು ಮೂಲಭೂತ ತತ್ವಗಳು ಎಂದು ಬುದ್ಧನು ತಿಳಿಸಿದ್ದಾನೆ. ಕೊಲ್ಲಬೇಡಿ, ಕದಿಯಬೇಡಿ, ಸುಳ್ಳು ಹೇಳಬೇಡಿ, ವ್ಯಭಿಚಾರ ಮಾಡಬೇಡಿ, ಮದ್ಯಪಾನ ಮಾಡಬೇಡಿ ಎಂದು ಬುದ್ಧ ಬೋಧಿಸಿದ್ದಾನೆ.

ಜ್ಞಾನಕ್ಕಿಂತ ಶೀಲಕ್ಕೆ ಬುದ್ಧ ಭಾರೀ ಮಹತ್ವವನ್ನು ಕೊಟ್ಟ. ಏಕೆಂದರೆ, ಜ್ಞಾನದ ಬಳಕೆಯು ಮನುಷ್ಯನ ಶೀಲವನ್ನು ಅವಲಂಬಿಸಿದೆ. ಶೀಲವನ್ನು ಹೊರತುಪಡಿಸಿದರೆ ಜ್ಞಾನಕ್ಕೆ ಬೆಲೆಯಿಲ್ಲ. 'ಈ ಪ್ರಪಂಚದಲ್ಲಿ ಶೀಲಕ್ಕೆ ಸಮಾನವಾದುದು ಯಾವುದೂ ಇಲ್ಲ, ಶೀಲವೇ ಆದಿ ಮತ್ತು ಆಶ್ರಯ. ಶೀಲವೇ ಎಲ್ಲ ಒಳಿತಿನ ಜನನಿ. ಎಲ್ಲಾ ಸ್ಥಿತಿಗಳಲ್ಲಿ ಶೀಲವೇ ಅಗ್ರಮಾನ್ಯವಾದುದು. ಅದ್ದರಿಂದ ಶೀಲವನ್ನು ಪರಿಶುದ್ಧಗೊಳಿಸಿಕೊಳ್ಳಿ' ಎಂಬುದು ಬುದ್ಧನ ಬೋಧನೆಯಾಗಿದೆ.

**ಕರುಣೆಯನ್ನು ಬೆಳೆಸುವುದು**

ಪ್ರಜ್ಞೆ ಮತ್ತು ಶೀಲದ ಜೊತೆಗೆ ಕರುಣೆಯನ್ನು ಬೋಧಿಸಬೇಕು. ಕರುಣೆಯನ್ನು ಪ್ರಜ್ಞೆ–ಶೀಲಗಳು ಅನುಸರಿಸಲೇಬೇಕು ಎಂದು ಬುದ್ಧನು ತಿಳಿಸಿದ್ದಾನೆ.

ಪ್ರಜ್ಞೆಯೊಂದೇ ಬುದ್ಧ ಧರ್ಮದ ತಳಪಾಯವೇ? ಕರುಣೆಯೊಂದೇ ಆತನ ಧರ್ಮದ ತಳಪಾಯವೇ? ಎಂಬ ವಿವಾದವಿದೆ. ಪ್ರಜ್ಞೆಯೇ ಬುದ್ಧ ಧರ್ಮದ ತಳಪಾಯ ಎಂದೂ, ಕರುಣೆಯೇ ಬುದ್ಧ ಧರ್ಮದ ತಳಪಾಯ ಎಂದೂ ಅಭಿಪ್ರಾಯ ಪಡೆಲಾಯಿತು.

ಆದರೆ, ಬುದ್ಧವಚನದ ಬೆಳಕಿನಲ್ಲಿ ನಿರ್ಣಯಿಸಿದರೆ, ಈ ತಿಳುವಳಿಕೆಗಳು ತಪ್ಪಾಗಿ ಕಾಣುತ್ತವೆ. ಬುದ್ಧ ಧರ್ಮದ ಆಧಾರ ಸ್ತಂಭಗಳಲ್ಲಿ ಪ್ರಜ್ಞೆಯೂ ಒಂದು, ಕರುಣೆಯೂ ಒಂದು ಎಂಬುದು ವಿವಾದಾತೀತವಾಗಿದೆ.

ಬಡವರನ್ನು, ಅಸಹಾಯಕರನ್ನು, ನಿರ್ಗತಿಕರನ್ನು, ಗೆಳೆಯರನ್ನಾಗಿ ಮಾಡಿಕೊಳ್ಳುವುದು; ಶರೀರ ಸ್ವಾಸ್ಥ್ಯ ಇಲ್ಲದವರಿಗೆ ಆರೈಕೆ ಮಾಡುವುದು; ಶ್ರಮಣರಾಗಿರಲಿ ಅಥವಾ ಬೇರಾವುದೇ ಧರ್ಮದವರಾಗಿಲಿ ಎಲ್ಲರಿಗೆ ಸಹಾಯ ಮಾಡುವುದು; ತಬ್ಬಲಿಗಳಿಗೆ, ವಯಸ್ಸಾದವರಿಗೆ ನೆರವಾಗುವುದು ಮತ್ತು ಇತರರೂ ಇಂಥವರಿಗೆ ನೆರವಾಗುವಂತೆ ಪ್ರೇರೇಪಿಸುವುದೇ ಧರ್ಮ ಎಂದು ಬುದ್ಧ ತಿಳಿಸಿದ್ದಾನೆ.

**ಮೈತ್ರಿ ಭಾವವನ್ನು ಬೆಳೆಸುವುದು**

ಮೈತ್ರಿ ಭಾವವನ್ನು ಬೋಧಿಸಿದಾಗ ಮಾತ್ರ ಧಮ್ಮ ಸದ್ಧರ್ಮವಾಗುತ್ತದೆ. ಕರುಣೆ ಎಂದರೆ ಮಾನವ ಜೀವಿಗಳಿಗೆ ತೋರುವ ಪ್ರೀತಿಯೇ ಆಗಿದೆ. ಮೈತ್ರಿ ಎಂದರೆ ಮನುಷ್ಯರ ಬಗ್ಗೆ ಮಾತ್ರವಲ್ಲ, ಎಲ್ಲ ಜೀವಿಗಳ ಬಗ್ಗೆಯೂ ಪ್ರೀತಿಯನ್ನು ತೋರುವುದು. ಇಂಥ ಮೈತ್ರಿ ಭಾವವನ್ನು ಬೆಳೆಸಿಕೊಳ್ಳಬೇಕೆಂದು ಬುದ್ಧನು ಬೋಧಿಸಿದನು.

'ತನಗೆ ನೋವಾಯಿತು ಎಂದು ಭೂಮಿ ಕೋಪಿಸಿಕೊಳ್ಳದಿರುವಂತೆ, ಏನೇ ಅಡ್ಡಿಯಾದರೂ ಬೀಸುವುದನ್ನು ಗಾಳಿ ನಿಲ್ಲಿಸದಿರುವಂತೆ, ಅಡೆತಡೆಗಳಿಗೆ ವಿಚಲಿತವಾಗದೆ ಹರಿಯುವ ನದಿಯಂತೆ, ನೀವು ಭಿಕ್ಕುಗಳು ನಿಮಗಾದ ಎಲ್ಲಾ ಅವಮಾನವನ್ನೂ, ಅನ್ಯಾಯವನ್ನೂ ಸಹಿಸಿಕೊಂಡು, ಮೈತ್ರಿ ಭಾವವನ್ನು ತಾಳುತ್ತಾ ಹೋಗಬೇಕು.' ಎಂದು ಬುದ್ಧನು ಹೇಳಿದ. ನಿಮ್ಮ ಮನಸ್ಸನ್ನು ಭೂಮಿಯಂತೆ ಅಚಲವಾಗಿ, ಗಾಳಿಯಂತೆ ಸ್ವಚ್ಛವಾಗಿ ಮತ್ತು ನದಿಯಂತೆ ಆಳವಾಗಿ ಇಟ್ಟುಕೊಳ್ಳಿ. ಎಷ್ಟೇ ಅಹಿತಕರ ಸಂದರ್ಭದಲ್ಲೂ, ನಿಮ್ಮ ಮೈತ್ರಿ ಭಾವವೂ ಕ್ಷೋಭೆಗೊಳ್ಳದಿರಲಿ. ನಿಮ್ಮ ಮೈತ್ರಿ ಭಾವದ ಪರಿಧಿ ಪ್ರಪಂಚದಷ್ಟೇ ಅನಂತವಾಗಿರಲಿ. ನಿಮ್ಮ ಆಲೋಚನೆಯು ವಿಶಾಲವೂ, ಆಳತೆಯನ್ನು ಮೀರಿದ್ದೂ ಆಗಿರಲಿ; ಅದರಲ್ಲಿ ಯಾವ ದ್ವೇಷ ಭಾವನೆಯೂ ಇಲ್ಲದಿರಲಿ. ನನ್ನ ಧರ್ಮದಲ್ಲಿ ಕರುಣೆ ತೋರಿದರಷ್ಟೇ ಸಾಲದು; ಮೈತ್ರಿ ಭಾವವನ್ನು ತೋರುವುದೂ ಅವಶ್ಯಕ. ನಮ್ಮಲ್ಲಿ ಎಲ್ಲರ ಬಗ್ಗೆ ಮೈತ್ರಿ ಭಾವ ಚಿಮ್ಮಬೇಕು. ಮೈತ್ರಿ ಎಂದರೆ ಸಹೃದಯ ಸ್ವಾತಂತ್ರ್ಯ, ಅದು ಎಲ್ಲವನ್ನೂ ಒಳಗೊಳ್ಳುತ್ತದೆ; ಅದು ಮಿಂಚುತ್ತದೆ, ಹೊಳೆಯುತ್ತದೆ, ಪ್ರಜ್ವಲಿಸುತ್ತದೆ' ಎಂದೂ ಆತ ಬೋಧಿಸಿದ.

(ಸಂಗ್ರಹಾನುವಾದ : **ಮಂಗ್ಳೂರ ವಿಜಯ**)

# ಸಾಹಿತ್ಯ–ಸಂಶೋಧನೆ–ವಾಗ್ವಾದ ಇತ್ಯಾದಿ; ಷ.ಶೆಟ್ಟರ್ ಎಂಬ ಅಪರೂಪದ ವಿದ್ವಾಂಸ ಮತ್ತು...



ಕನ್ನಡ ನಾಡು ಮತ್ತು ಭಾಷೆಗಳ ಇತಿಹಾಸ ಮತ್ತು ಸಂಸ್ಕೃತಿಗಳ ಬಹು ನೆಲೆಯ ಅಧ್ಯಯನಗಳನ್ನು ಮಾಡಿ ಕನ್ನಡ ಸಂಶೋಧನಾ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆಗಳನ್ನು ನೀಡಿದ ಅಪರೂಪದ ವಿದ್ವಾಂಸ ಷ. ಶೆಟ್ಟರ್ ಸಾಕಷ್ಟು ಹಿರಿಯರಾಗಿದ್ದರೂ, ಇದ್ದಕ್ಕಿದ್ದಂತೆ ಕೊನೆಯುಸಿರೆಳೆದಿದ್ದಾರೆ. ಈ ಕ್ಷೇತ್ರದಲ್ಲಿ ಅವರ ಸ್ಥಾನ ತುಂಬಬಲ್ಲ ಇನ್ನೋರ್ವ ವಿದ್ವಾಂಸರು ಈಗ ಕಣ್ಣಿಗೆ ಕಾಣುತ್ತಿಲ್ಲ ಎಂಬುದು ಅವರ ಸಾವಿನ ನೋವನ್ನು ಇನ್ನಷ್ಟು ಹೆಚ್ಚಿಸುವಂಥದು.

ಇತಿಹಾಸ ವಿದ್ಯಾರ್ಥಿಯಾದ ಶೆಟ್ಟರ್, ಪ್ರಾಕ್ತನಶಾಸ್ತ್ರ ಮತ್ತು ಕಲಾಶಾಸ್ತ್ರದಲ್ಲೂ ಪರಿಣತರಾಗಿದ್ದವರು. ಇತಿಹಾಸವನ್ನು ಒಂದು ಕಾಲದ ಘಟನಾವಳಿಗಳ ಸರಳರೇಖಾತ್ಮಕ ಕಥನವಾಗಿ ನೋಡುವ ಕ್ರಮಕ್ಕೆ ವಿರುದ್ಧವಾಗಿ ಆ ಕಾಲದ ಚಿತ್ರ ಮತ್ತು ಶಿಲ್ಪ ಕಲೆ, ಸಾಹಿತ್ಯ ಕೃತಿ, ಜಾನಪದ ಕಥನ–ಐತಿಹ್ಯಗಳನ್ನೊಳಗೊಂಡ ವಿವಿಧ ಅಭಿವ್ಯಕ್ತಿ ರೂಪಗಳಲ್ಲಿ ಕಾಣುವ ಕಲಾ ಪರಂಪರೆಯ ವಿವರಗಳನ್ನೂ ಪರಿಗಣಿಸಿ ಒಂದು ಸಂಕಥನವಾಗಿ ಕಟ್ಟುವ ಹೊಸ ಬಗೆಯನ್ನು ರೂಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಹಂಪಿಯ ಕಲಾವೈಭವ ಮತ್ತು ಹೊಯ್ಸಳ ಶಿಲ್ಪ ಕುರಿತ ಅವರ ಕೃತಿಗಳು ಪ್ರಸಿದ್ಧವಾದವುಗಳಾದರೂ, ಶ್ರವಣಬೆಳಗೊಳದ ಇತಿಹಾಸದಲ್ಲಿನ ಸಲ್ಲೇಖನ ವ್ರತಧಾರಿಗಳ ಬಗ್ಗೆ ಅಧ್ಯಯನ ಮಾಡಿ ಬರೆದ 'Inviting death' ಅಂತಾರಾಷ್ಟ್ರೀಯ ಮನ್ನಣೆಯನ್ನು ಪಡೆದ ಕೃತಿಯಾಗಿದೆ. ಇದು 'ಸಾವಿಗೆ ಆಹ್ವಾನ'ಎಂಬ ಹೆಸರಲ್ಲಿ ಕನ್ನಡಕ್ಕೂ ಬಂದಿದೆ. ಇದು ಇತಿಹಾಸವನ್ನು ಒಂದು ದಾರ್ಶನಿಕ ಪ್ರಯಾಣವೆಂಬಂತೆ ನೋಡಿದ ಮೊದಲ ಐತಿಹಾಸಿಕ ಕೃತಿಯೆಂದು ಸಂಶೋಧಕ ಬಸವರಾಜ ಕಲ್ಗುಡಿ ಹೇಳುತ್ತಾರೆ. ಅವರು ಗುರುತಿಸಿರುವ ಶೆಟ್ಟರ್ ಅವರ ಅಧ್ಯಯನದ ಇನ್ನೊಂದು ಮೈಲಿಗಲ್ಲೆಂದರೆ, ಅವರು ಕನ್ನಡದಲ್ಲಿ ಬರೆಯಲಾರಂಭಿಸಿದ ಮೇಲೆ ಇತಿಹಾಸವನ್ನು ಪ್ರಭುತ್ವಗಳ, ಯುದ್ಧಗಳ ಕಥೆಯಾಗಿ ನೋಡದೆ ಜನ ಸಮುದಾಯಗಳ ಕಥೆಯಾಗಿಯೂ ನೋಡುವ ಕ್ರಮ ಅವರಿಗೆ ದಕ್ಕಿತು ಎಂಬುದು.

ಈ ಎಲ್ಲ ವಿಶಿಷ್ಟ ಲಕ್ಷಣಗಳೊಂದಿಗೆ ಅಥವಾ ಆ ಲಕ್ಷಣಗಳಿಂದಾಗಿಯೇ ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ಜನಮನ್ನಣೆ ಗಳಿಸಿದ ಶೆಟ್ಟರ್ ಅವರ ಮೂರು ಕೃತಿಗಳೆಂದರೆ 'ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ', 'ಪ್ರಾಕೃತ ಜಗದ್ವಲಯ' ಮತ್ತು 'ಹಳಗನ್ನಡ: ಲಿಪಿ, ಲಿಪಿಕಾರ, ವ್ಯವಸಾಯ'. ಈ ಮೂರೂ ಕೃತಿಗಳೂ ಮುಖ್ಯವಾಗಿ ಕನ್ನಡವನ್ನು ಸಂಸ್ಕೃತದ ಪೋಷಣೆಯಲ್ಲಿ ಕಾಣುವ ಮಾರ್ಗ ಕ್ರಮವನ್ನು ನಿರಾಕರಿಸುತ್ತಾ ಕನ್ನಡದ ಬೆಳವಣಿಗೆಯ ಒಂದು ದೇಸಿ ಸ್ವಾಯತ್ತತೆಯ ನೋಟವನ್ನು ಕಟ್ಟಿಕೊಡುವ ಪ್ರಯತ್ನಗಳನ್ನು ಮಾಡುತ್ತವೆ. ವಿಶೇಷವಾಗಿ *ಶಂಗಂ ತಮಿಳಗಂ* ಕನ್ನಡ ತಮಿಳಿನ ಸಂಬಂಧದಲ್ಲಿ ಕನ್ನಡದ ಹಿರಿತನವನ್ನು ಸಾಬೀತುಪಡಿಸುವ ಪ್ರಯತ್ನಗಳನ್ನು ಮಾಡಿ ಸಂಸ್ಕೃತಿ ಸಂಶೋಧನೆಯ ಇತ್ತೀಚಿನ ಇತಿಹಾಸದಲ್ಲಿ ದೊಡ್ಡ ಮೈಲಿಗಲ್ಲೆಂದೇ ಹೆಸರು ಮಾಡಿತು. ಈ ಕೃತಿಯಲ್ಲಿ ಭಾಷೆಯನ್ನು ಕಲ್ಪಿಸಿಕೊಂಡಿರುವ ರೀತಿ ಕುರಿತಂತೆ ಕೆ.ವಿ. ನಾರಾಯಣರ ಒಂದು ಆಕ್ಷೇಪಣೆಯ ಹೊರತಾಗಿ ಮಿಕ್ಕೆಲ್ಲ ಕನ್ನಡದ ವಿದ್ವಾಂಸರೂ ಇದನ್ನು ಮೈಲಿಗಲ್ಲೆಂದೇ ಮಾನ್ಯ ಮಾಡಿದ್ದಾರೆ. ಆದರೆ ನಮ್ಮ ನಡುವಿನ ವಿಭಿನ್ನ ವರಸೆಯ ಚಿಂತಕ ಮನು ವಿ. ದೇವದೇವನ್ ಅವರು ತಮ್ಮ ಲೇಖನವೊಂದರಲ್ಲಿ (ತುಮಕೂರು ವಿಶ್ವವಿದ್ಯಾಲಯದ ವಿದ್ವತ್ಪತ್ರಿಕೆಯಾದ ಲೋಕಜ್ಞಾನ ಮೇ–ಆಗಸ್ಟ್: ೨೦೧೩) ಈ ಕೃತಿ ಹುಸಿ ಆಕರಗಳ, ತಪ್ಪು ವ್ಯಾಖ್ಯಾಗಳ ಒಂದು ಪೊಳ್ಳು ಕೃತಿ ಎಂದು ಅದನ್ನು ತಮ್ಮದೇ ಆಕರ–ಆಧಾರಗಳೊಂದಿಗೆ ಚಿಂದಿ ಚಿಂದಿ ಮಾಡಿದ್ದಾರೆ! ಅವರ ಮಾತುಗಳಲ್ಲೇ ಹೇಳುವುದಾದರೆ, 'ಶಂಗಂ ತಮಿಳಗಂ ಅತ್ಯಂತ ತೆಳುವಾದ ಅಧ್ಯಯನ/ ಅದು ಅಸಮರ್ಪಕವಾಗುವುದು ನಾಲ್ಕು ಸ್ತರಗಳಲ್ಲಿ. ಮಾಹಿತಿ ಸಂಗ್ರಹಣೆ, ತರ್ಕಸರಣಿ, ವಿಧಾನ, ಪ್ರಮಾಣ ನಾಲ್ಕನ್ನೂ ಕೂಲಂಕುಶವಾಗಿ ವಿವರಿಸುತ್ತಾ ಹೋದರೆ ಅದು ನೂರೈವತ್ತು ಪುಟಗಳ ಒಂದು ಪುಸ್ತಕ ಆದೀತು.' ಮುಂದೆ ಅವರು ಸಂಕ್ಷಿಪ್ತವಾಗಿ ಎಂದರೂ ಸಾಕಷ್ಟು ವಿವರವಾಗಿಯೇ ಶೆಟ್ಟರ್ ಅವರ ಅಧ್ಯಯನದ ಸೊಂಟ ಮುರಿಯುವಂತ ಆಧಾರ ಮತ್ತು ವಿವರಣೆಗಳನ್ನು ನೀಡುತ್ತಾ ಹೋಗುತ್ತಾರೆ.



ಇದನ್ನೋದಿ ನನಗೆ ಗಾಬರಿಯಾಯಿತು. ಶೆಟ್ಟರ್ ಅವರನ್ನು ಕುರಿತ ಆವರೆಗಿನ ಮೆಚ್ಚುಗೆ–ವಿಶ್ವಾಸಗಳೆಲ್ಲ ಅಲ್ಲಾಡತೊಡಗಿದವು. ನಮ್ಮ 'ಅಭಿರುಚಿ' ವೇದಿಕೆಯ ಆಹ್ವಾನದ ಮೇರೆಗೆ ಚಿತ್ರದುರ್ಗಕ್ಕೊಮ್ಮೆ ಬಂದು ನಮ್ಮೊಡನೆ ಆತ್ಮೀಯವಾಗಿ ಬೆರೆತಿದ್ದ, ಮತ್ತೆರಡು ಸಂದರ್ಭಗಳಲ್ಲಿ ಭೇಟಿಯಾದಾಗ ಬಲುಸ್ನೇಹದಿಂದ ಮಾತಾಡಿದ್ದ ನೆನಪಲ್ಲಿ ಈ ಬಗ್ಗೆ ಅವರಿಗೊಂದು ಪತ್ರ ಬರೆದೆ.



ಬರೆದದ್ದಷ್ಟೇ ಆಯಿತು. ಉತ್ತರ ಬರಲಿಲ್ಲ. ನಂತರ ಅದನ್ನು ಮರೆತೆ. ಅದಾದ ಎರಡು ವರ್ಷಗಳ ನಂತರ ದೊಡ್ಡಬಳ್ಳಾಪುರದ ಸಾಹಿತ್ಯ ಕಾರ್ಯಾಗಾರದಲ್ಲಿ ಅವರ ಭೇಟಿಯಾಯಿತು. ಆ ಸಂದರ್ಭದಲ್ಲಿ ಮಾತಿನ ಮಧ್ಯೆ ಈ ವಿಷಯ ಎತ್ತಿದೆ. ಶೆಟ್ಟರ್ ಒಂದು ಕ್ಷಣ ಅಪ್ರತಿಭರಂತಾದರು. ಆಮೇಲೆ ಮುಗುಳ್ನಗುತ್ತಾ, ಅವಕ್ಕೆಲ್ಲ ಉತ್ತರ ಕೊಡಲಾಗದು. ಅವನು ನನ್ನ ಶಿಷ್ಯನಾಗಿದ್ದವನೇ. ಜಗಳಾಡಿಕೊಂಡು ಹೋದವನು. ಸೇಡಿನ ಮೇಲೆ ಹಾಗೆಲ್ಲ ಬರೆದಿದ್ದಾನೆ. ಅದಕ್ಕೆ ನಾನು ಉತ್ತರ ಕೊಡುತ್ತಾ ಹೋಗಲಾದೀತೆ? ಎಂದು ಮಾತು ಮುಗಿಸಿ ಅಲ್ಲಿಂದ ಹೋಗಲನುವಾದರು. ಆದರೆ ನಾನು ಬಿಡಲಿಲ್ಲ. ಕಾರಣ ಶಂಗಂ ತಮಿಳಗಂ ಬಗ್ಗೆ ನಾನೂ ಒಂದು ಲೇಖನ ಬರೆದು ಅದರ ಹೊಸ ಹೊಳಹು ಮತ್ತು ಹೊಸ ನೋಟಗಳಿಗಾಗಿ ಹಾಡಿಹೊಗಳಿದ್ದೆ. ಹಾಗಾಗಿ ನನ್ನ ಮನಸ್ಸೂ ಈ ವಿಷಯದಲ್ಲಿ ಸ್ವಚ್ಛವಾಗಬೇಕಿತ್ತು. 'ನಿಮ್ಮ ದೊಡ್ಡ ಕೃತಿಯದು. ಅದರ ಬಗ್ಗೆ ಇನ್ನೊಬ್ಬ ವಿದ್ವಾಂಸ ಅಷ್ಟು ಆಧಾರ ನೀಡಿ ನಿಮ್ಮ ಕೃತಿಯ ಬಗ್ಗೆ ಅಪನಂಬಿಕೆ ಹುಟ್ಟಿಸಿರುವಾಗ ಉತ್ತರ ಕೊಡುವುದು ಸಂಶೋಧನೆಯ ಧರ್ಮವಲ್ಲವೆ?' ಎಂದು ಅವರ ಜೊತೆ ಮಹಡಿಯಿಂದ ಇಳಿಯುತ್ತಲೇ ನಾನು ಅವರಿಗೆ ದುಂಬಾಲು ಬಿದ್ದೆ. ಸ್ವಭಾವತಃ ಸಜ್ಜನರಾದ, ಸೌಮ್ಯ ಪ್ರಕೃತಿಯವರಾದ ಶೆಟ್ಟರ್ ಒಂದು ಕ್ಷಣ ನಿಂತು ತಮ್ಮ ಮುಖ ಬಿಗಿ ಮಾಡಿಕೊಂಡು 'ಇಲ್ಲ, ನಾನು ಅದಕ್ಕೆ ಪ್ರತಿಕ್ರಿಯಿಸುವುದಿಲ್ಲ. ಅದಕ್ಕೆ ನನ್ನದೇ ಕಾರಣಗಳಿವೆ' ಎನ್ನುತ್ತಾ ನನ್ನ ಜೊತೆ ಬಿಟ್ಟು ಮುಂದೆ ಹೋಗಿಬಿಟ್ಟರು.

ನಾನು ಗೊಂದಲಗೊಂಡೆ. ಶೆಟ್ಟರ್ ಅವರನ್ನು ನೋಯಿಸಿದೆನೇನೋ ಎಂಬ ಬೇಸರವೂ ನನ್ನನ್ನು ಮುತ್ತಿತ್ತು. ಅದು ಅವರ ಸಾವಿನ ಸುದ್ದಿಯವರೆಗೂ ನನ್ನ ಕಾಡಿತ್ತು. ಈಗ ಈ ಟಿಪ್ಪಣಿ ಬರೆಯುವಾಗ ಈ ಬಗ್ಗೆ ಒಂದು ನಿಲುವಿಗೆ ಬರಲು ಈಗ ಹಿಮಾಚಲ ಪ್ರದೇಶದ ಮಂಡಿಯಲ್ಲಿನ ಐಐಟಿಯಲ್ಲಿ ಪ್ರಾಧ್ಯಾಪಕರಾಗಿರುವ ಮನು ದೇವದೇವನ್ ಅವರಿಗೆ ಕರೆ ಮಾಡಿದೆ. ಶೆಟ್ಟರ್ ಅವರೊಂದಿಗೆ ಮಾತನಾಡಿದ್ದನ್ನೆಲ್ಲ ಹೇಳಿದೆ. ಅವರ ನಿಲುವಿನಲ್ಲಿ ಏನಾದರೂ ಬದಲಾವಣೆಯಾಗಿದೆಯಾ ಕೇಳಿದೆ. ಹಾಗೇ ಆ ಲೇಖನವನ್ನು ನೀವು ಬರೆಯುವಷ್ಟು ವಿಷಯ ಮತ್ತು ಕ್ಷೇತ್ರ ಪರಿಣತಿ ಹಾಗೂ ಪೂರ್ವ ಸಿದ್ಧತೆ ನಿಮಗಿತ್ತೆ ಎಂದೂ ಪ್ರಶ್ನಿಸಿದೆ. ಅವರು ಹೇಳಿದರು: ನನಗೆ ತಮಿಳು ಮತ್ತು ತಮಿಳ್ನಾಡಿನ ಚರಿತ್ರೆ ಅವರಗಿಂತ ಚೆನ್ನಾಗಿ ಗೊತ್ತಿರುವ ಭರವಸೆ ಇದೆ. ಲೇಖನವನ್ನು ಆಗ ಸ್ವಲ್ಪ ಒರಟು ಶೈಲಿಯಲ್ಲಿ ಬರೆದೆನೆಂಬ ಅಂಶದ ಹೊರತಾಗಿ ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ.'

ಮನು ದೇವದೇವನ್ ಅವರ ಲೇಖನದ ಪ್ರಕಾರ 'ಶಂಗಂ ತಮಿಳಗಂ' ಪ್ರಕಾಶಕರ ಶಾಮೀಲಿನೊಂದಿಗೆ ಊರೂರಲ್ಲಿ ಪೂರ್ವ ನಿಯೋಜಿತವಾಗಿದ್ದ ಪ್ರಚಾರ ಕಾರ್ಯಕ್ರಮದ ಫಲಾನುಭವಿ ಕೃತಿ. ಇದು ನಿಜವಿರಬಹುದು. ನಿಜವಲ್ಲದೆಯೂ ಇರಬಹುದು. ಆದರೆ ಈ ಕ್ಷೇತ್ರದ ಉಳಿದ ವಿದ್ವಾಂಸರೇಕೆ ಏನೂ ಹೇಳುತ್ತಿಲ್ಲ? ಅದು ಅವರ ಕ್ಷೇತ್ರದ ಧರ್ಮ ಅಥವಾ ಅವರ ಜವಾಬ್ದಾರಿಯಲ್ಲವೆ? ಅಥವಾ ಶೆಟ್ಟರ್ ಕೈಹಾಕಿದ ಕ್ಷೇತ್ರ ಈ ಎಲ್ಲರಿಗೂ ಅಪರಿಚಿತವೇ? ಹಾಗಾಗಿಯೇ ಅದರ ಬಗ್ಗೆ ಏಕಪಕ್ಷೀಯ ಅಭಿಪ್ರಾಯಗಳ ಮೆರವಣಿಗೆ ನಡೆಯಿತೆ? ಕನಿಷ್ಠ ಮನು ದೇವದೇವನ್ ಗಂಭೀರವಾಗಿ ಪರಿಗಣಿಸಲಗತ್ಯವಿಲ್ಲದ ವಿದ್ವಾಂಸ ಎಂದಾದರೂ ಯಾರಾದರೂ ಹೇಳಬಲ್ಲರೆ? ಅಲ್ಲಿಯವರೆಗೆ ಮನು ದೇವದೇವನ್ ತಮ್ಮ ಲೇಖನದ ಕೊನೆಯಲ್ಲಿ ಬರೆದಿರುವ 'ತಪ್ಪಾದ ಮಾಹಿತಿಗಳನ್ನು ಆಧರಿಸಿ ಪ್ರಮಾಣಪರ ವಿವೇಚನೆ ಇಲ್ಲದೆ ಅವೈಧಾನಿಕವಾಗಿ ಮಂಡಿಸಿದ ಕೆಲವು ಹಾಸ್ಯಾಸ್ಪದ ತರ್ಕಗಳ ಪುಂಜವೇ ಶಂಗಂ ತಮಿಳಗಂ' ಎಂಬ ಮಾತುಗಳನ್ನೇ ನಮ್ಮಂಥ ಸಾಮಾನ್ಯರು ಈ ಕೃತಿಯ ಬಗೆಗಿನ ಕೊನೆಯ ಮಾತಾಗಿ ಪರಿಗಣಿಸಬೇಕೆ?

ಈ ಸಂಬಂಧವಾಗಿ ನನ್ನ ವಿದ್ವಾಂಸ ಗೆಳೆಯರಾರೂ ನನ್ನನ್ನು ಮೃತರ ಬಗ್ಗೆ ಪ್ರತಿಕೂಲವಾದದ್ದನ್ನು ಬರೆದಿರುವೆನೆಂಬ ಟೀಕೆ ಮಾಡಲಾರರೆಂದು ಭಾವಿಸಿದ್ದೇನೆ.

**–ಡಿ.ಎಸ್. ನಾಗಭೂಷಣ**

## ಪುಸ್ತಕಾವಲೋಕನ

ಪು: **ಕನ್ನಡ ಕಥನಗಳು** (ವಿಮರ್ಶೆ) ಲೇ: **ಪುರುಷೋತ್ತಮ ಬಿಳಿಮಲೆ ಪ್ರ: ಅಹರ್ನಿಶಿ,** ಶಿವಮೊಗ್ಗ (೯೪೪೯೧೭೪೬೬೨) ಪು: ೨೨೪ ಬೆಲೆ: **ರೂ. ೨೧೦/-**

### ಸಂಶೋಧಕರಿಗೆ ಮಾರ್ಗದರ್ಶಕ ಕೃತಿ




**ಈ** ಕೃತಿ ಒಟ್ಟು ಒಂಬತ್ತು ಪ್ರಬಂಧಗಳನ್ನು ಒಳಗೊಂಡಿದೆ. ಇವು ಭಾರತದ ಇಂದಿನ ಬದಲಾದ ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸನ್ನಿವೇಶಕ್ಕೆ ಲೇಖಕ ಪುರುಷೋತ್ತಮ ಬಿಳಿಮಲೆಯವರು ನೀಡುತ್ತಿರುವ ಪ್ರತಿಕ್ರಿಯೆಗಳಂತಿವೆ. ಇದರಲ್ಲಿನ ಚಿಂತನೆಗಳು ಲೇಖಕರ ಇತ್ತೀಚಿನ ನಿಲುವೇನಲ್ಲ. ಹಲವು ದಶಕಗಳಿಂದಲೂ ಅವರು ಪ್ರತಿಪಾದಿಸುತ್ತಲೇ ಬಂದಿರುವ ವಿಚಾರಗಳು ಇಲ್ಲಿ ಹೊಸರೂಪದಲ್ಲಿ ಪುನರವತರಿಸಿದೆ.

ಇಂದು ದೇಶಭಕ್ತಿಯ ಹೆಸರಿನಲ್ಲಿ ಅಂಧಭಕ್ತಿ, ಅಮಾನವೀಯತೆ, ಆಕ್ರಮಣಶೀಲತೆಯೇ ರಾರಾಜಿಸುತ್ತಿದೆ. ಪ್ರಶ್ನಿಸುವವರಿಗೆ ದೇಶದ್ರೋಹಿಯ ಹಣೆಪಟ್ಟಿ ಲಗತ್ತಿಸಲಾಗುತ್ತಿದೆ. ಯಾವುದು ದೇಶದ್ರೋಹವೆಂದರೆ? ಪ್ರಭುತ್ವ ಪ್ರಣೀತವಾದ ಅಯೋಧ್ಯಾ ರಾಮನನ್ನು ಬಿಟ್ಟು ದೇಶದ ದಶದಿಕ್ಕುಗಳಲ್ಲೂ ಹರಡಿರುವ ರಾಮನ ವೈವಿಧ್ಯಮಯ ಕಥಾನಕಗಳನ್ನು ಕಂಡು ವಿಸ್ಮಯ ಪಡುವುದು ದೇಶದ್ರೋಹವೇ? ದೇಶದುದ್ದಗಲಕ್ಕೂ ಸಾವಿರಕ್ಕೂ ಹೆಚ್ಚು ಆವೃತ್ತಿಗಳುಳ್ಳ ಮಹಾಭಾರತವನ್ನು ಪರಿಭಾವಿಸುವುದು ಅಪಚಾರವೇ?

ಈ ಲೇಖನಗಳು ಭಾರತೀಯ ಸಂಸ್ಕೃತಿಯ ಈ ಸಮೃದ್ಧಿ, ವೈಶಾಲ್ಯಗಳನ್ನು ಪರಿಚಯಿಸುವುದಾದರೂ ಭಾರತೀಯತೆಯೊಂದಿಗೆ ಕಳೆದು ಹೋಗದೇ ಕರ್ನಾಟಕದ, ಕನ್ನಡಿಗರ ವಿಷಯದಲ್ಲೂ ಕಾಳಜಿ ಹೊಂದಿದೆ. ಇನ್ನು ಕರ್ನಾಟಕದ ನೆಲೆಯಲ್ಲಿ ನಿಂತು ವಿಚಾರ ಮಾಡುವಾಗಲೂ ಅವರು ತಮ್ಮ ಹುಟ್ಟಿನ ನೆಲೆಯ ಭಾಷೆ, ಜನಾಂಗ, ಸಂಸ್ಕೃತಿಯ ಏಳಿಗೆಯನ್ನು ಕನಸುತ್ತಾರೆ. ಅವರು ರಾಷ್ಟ್ರದ ರಾಜಧಾನಿಯಲ್ಲಿ ನೆಲೆಸಿದ್ದರೂ ತಮ್ಮ ಹೆಸರಿನಿಂದ ತಮ್ಮ ಹುಟ್ಟೂರಾದ ಬಿಳಿಮಲೆಯನ್ನು ಬಿಟ್ಟಿಲ್ಲವೆಂದು ಕೆ. ಅಕ್ಷತಾ ಮುನ್ನುಡಿಯಲ್ಲಿ ಸರಿಯಾಗಿಯೇ ಗುರುತಿಸಿದ್ದಾರೆ.

ಸ್ಥಳೀಯತೆಯನ್ನು ಬಿಟ್ಟುಕೊಡದೆ, ಅದರಲ್ಲಿ ಸ್ಥಿರವಾಗಿ ಬೇರೂರಿಕೊಂಡೇ ರಾಷ್ಟ್ರೀಯತೆಯನ್ನು, ವಿಶ್ವಮಾನವತ್ವವನ್ನು ಸಾಧಿಸಿಕೊಳ್ಳುವ ಕೌಶಲ್ಯವನ್ನು ಕನ್ನಡ ಸಾಹಿತ್ಯ ಪರಂಪರೆ ಪಂಪನ ಕಾಲದಿಂದಲೂ ಮೈಗೂಡಿಸಿಕೊಂಡಿದೆ. ರಾಷ್ಟ್ರೀಯತೆಯ ಹುಚ್ಚು ಹಿಡಿಸಿಕೊಂಡವರು ಅದನ್ನು ಸಾಧಿಸಿಕೊಳ್ಳಲು ನಮ್ಮ ಪರಂಪರೆಯ ಈ ವಿಶಿಷ್ಟತೆಯನ್ನು ಅನುಸರಿಸಬೇಕಲ್ಲದೆ ಈ ವಿಶಿಷ್ಟತೆಯನ್ನು ದೇಶದ್ರೋಹವೆಂದು ವ್ಯಾಖ್ಯಾನಿಸಬಾರದು. ನಮ್ಮ ಪರಂಪರೆ ಸಿದ್ಧಿಸಿಕೊಂಡಿರುವ ಈ ವಿಶಿಷ್ಟ ಲಕ್ಷಣ ಈ ಕೃತಿಯ ಒಂದೊಂದು ಲೇಖನದಲ್ಲೂ ಕಾಣಸಿಗುತ್ತದೆ. ಈ ಒಂಬತ್ತೂ ಲೇಖನಗಳಲ್ಲಿ ಒಂದಲ್ಲ ಒಂದು ಸಾಮಾಜಿಕ ಆಯಾಮವಿರುವುದನ್ನು ಓದುಗರು ಗುರುತಿಸಬಹುದು. ಯಾವುದೇ ಚಳವಳಿಗೆ ವಿದ್ವತ್ತು, ಸಂಶೋಧನೆಗಳು ಎಷ್ಟು ಅಗತ್ಯವೆಂಬುದಕ್ಕೆ ಇದರಲ್ಲಿನ ಪ್ರತಿಯೊಂದು ಲೇಖನವೂ ರುಜುವಾತಾಗಿದೆ. ಅವರ ಸಂಶೋಧನೆಗಳು ಅವರ ಚಳವಳಿಗೊಂದು ಗಹನತೆಯನ್ನು ಹಾಗೂ ಅವರ ಚಳವಳಿಗಳು ಅವರ ವಿದ್ವತ್ತಿಗೊಂದು ಮಾನವೀಯ ಸ್ಪರ್ಶ ನೀಡಿದೆ.

'ಹಳಗನ್ನಡದ ಬಹುರೂಪೀ ನಿರೂಪಣೆಗಳು' ಲೇಖನವು ಹಳಗನ್ನಡ ಕಾವ್ಯಗಳು ಈ ೨೧ನೇ ಶತಮಾನದವರೆಗೂ ಸಾಗಿಬಂದಿರುವ ರೀತಿಯನ್ನು ವಿವೇಚಿಸುತ್ತದೆ. ಇಂದಿನ ನಮಗೆ ಕಿಟೆಲ್, ರೈಸ್, ಡಿ.ಎಲ್‌ಎನ್, ಎಲ್. ಬಸವರಾಜು ಮುಂತಾದ ವಿದ್ವಾಂಸರು ಹಳಗನ್ನಡ ಕಾವ್ಯಗಳನ್ನು ಪರಿಚಯಿಸಿದ್ದಾರೆ ಸರಿ. ಆದರೆ ನೂರಾರು ವರ್ಷಗಳ ಹಿಂದಿನ ಈ ಸಾಹಿತ್ಯ ಕೃತಿಗಳನ್ನು ನಾವು ತಲೆಮಾರಿನಿಂದ ತಲೆಮಾರಿಗೆ ಹೇಗೆ ಹಸ್ತಾಂತರಿಸಿಕೊಂಡು ಬಂದಿದ್ದೇವೆ? ಇಂತಹ ವಿದ್ವಾಂಸರನ್ನೇ ನೆಚ್ಚಿಕೊಂಡಿದ್ದೇವೆ ಎಂಬ ಪ್ರಶ್ನೆಯನ್ನು ಈ ಲೇಖನ ಪರಿಶೀಲಿಸುತ್ತದೆ. ವಿದ್ವತ್ತು ಒಂದು ಸೀಮಿತ ವಲಯವನ್ನಷ್ಟೆ ಪ್ರಭಾವಿಸಬಲ್ಲದು. ಒಂದು ಇಡೀ ಜನಸಮುದಾಯದ ಮೇಲೆ ಅದರ ಹಿಡಿತವಿರಲಾರದು. ಹಾಗಾಗಿ ನಮ್ಮ ಜಾನಪದ ಸಂಸ್ಕೃತಿಯೇ ನಮ್ಮ ಪ್ರಾಚೀನ ಪಠ್ಯಗಳನ್ನು ಮರುರೂಪಿಸುತ್ತ, ಬಹುರೂಪಿಯಾಗಿ ಬೆಳೆಸುತ್ತಾ ಉಳಿಸಿಕೊಂಡು ಬಂದಿದೆ ಎಂದು ಇದರಲ್ಲಿ ಅವರು ಪ್ರತಿಪಾದಿಸುತ್ತಾರೆ. ಇದರಿಂದ ಜಾನಪದವೂ ಬದುಕುಳಿಯಿತು ಮತ್ತು ಪ್ರಾಚೀನ ಪಠ್ಯಗಳೂ ಉಳಿದುಕೊಂಡು ಬಂದವು ಎನ್ನುತ್ತಾರೆ. ಹಳೆಯ ಕಾವ್ಯ ಒನಕೆವಾಡದ ಪರಿಯಲ್ಲಿ, ಗದುಗಿನ ಭಾರತ 'ಕೇಳುವ ಕಾವ್ಯ'ವಾಗಿ ಬೆಳೆದ ರೀತಿಯಲ್ಲಿ, ಗಮಕ ಯಕ್ಷಗಾನ ಹರಿಕತೆಗಳಲ್ಲಿ, ದೇವಾಲಯದ ಶಿಲ್ಪಕಲೆ, ಚಿತ್ರಕಲೆಗಳಲ್ಲಿ ಪ್ರಾಚೀನ ಪಠ್ಯಗಳು ನಾನಾ ಅವತಾರಗಳಿಂದ ಬೆಳೆದು ಬಂದ ವೈಖರಿಯನ್ನು ವಿದ್ವತ್ಪೂರ್ಣವಾಗಿ ಗುರುತಿಸುತ್ತಾರೆ. ಅಲ್ಲದೆ ಕೆಲವು ನಿರ್ದಿಷ್ಟ ಪಠ್ಯಗಳನ್ನೇ ಏಕೆ ನಮ್ಮ ಹಿಂದಿನವರು ಮತ್ತೆ ಮತ್ತೆ ಮರುನಿರ್ವಚಿಸಿಕೊಂಡು ಬಂದರು ಎಂಬ ಪ್ರಶ್ನೆಯನ್ನೆತ್ತುತ್ತಾರೆ. ಉದಾಹರಣೆಗೆ, ನಳಚರಿತ್ರೆ, ಕುಮಾರರಾಮನ ಕತೆ ಮುಂತಾದವು ಅದೇಕೆ ನಮ್ಮ ಜಾನಪದರಿಗೆ ಮುಖ್ಯವಾಗುತ್ತದೆ? ಕರ್ನಾಟಕದಲ್ಲೇ ನೂರಕ್ಕೂ ಹೆಚ್ಚು ನಳನ ಕತೆಗಳಿವೆ. ತೀರಾ ಸ್ಥಳೀಯ ನಾಯಕನಾದ ಕುಮಾರರಾಮನ ಕತೆ ದಕ್ಷಿಣ ಭಾರತದಾದ್ಯಂತ ಅದೇಕೆ ಅಷ್ಟೊಂದು ವ್ಯಾಪಕವಾಗಿ ಹರಡಿಕೊಂಡಿತು? ಇವೇ ಮುಂತಾದ ಪ್ರಶ್ನೆಗಳನ್ನು ಹಿಡಿದು ಪ್ರಾಚೀನ ಜಾನಪದದ ನಂಬಿಕೆಗಳನ್ನು, ಅವರು ನಂಬಿದ್ದ ಮೌಲ್ಯಗಳನ್ನು ಶೋಧಿಸುವ ಅವರ ಪ್ರಯತ್ನ ನಿಜಕ್ಕೂ ಶ್ಲಾಘನೀಯ ಮತ್ತು ಸಂಶೋಧಕರಿಗೆ ಎಂದಿಗೂ ಅನುಕರಣೀಯ.

ನಮ್ಮ ಜಾನಪದ ಸಂಸ್ಕೃತಿಯನ್ನು ಸ್ತುತಿಸುವ ಭರದಲ್ಲಿ ಲೇಖಕರು ವಚನ ಚಳವಳಿಯನ್ನು ಎಲ್ಲೋ ಅವಜ್ಞೆ ಮಾಡುತ್ತಿದ್ದಾರೆಯೇ ಎನಿಸುತ್ತದೆ. ಇದಕ್ಕೆ 'ಭಕ್ತಿಪರಂಪರೆ ಮತ್ತು ಜಾನಪದ' ಎಂಬ ಲೇಖನವನ್ನು ಉದಾಹರಿಸಬಹುದು. "ಜಾನಪದ ಪರಂಪರೆಯ ನಿರ್ಮಾತೃಗಳೇ ವಚನ ಚಳವಳಿಯಲ್ಲಿ ಸೇರಿಕೊಂಡಿದ್ದರು. ಇಷ್ಟಲಿಂಗ ಪ್ರತಿಪಾದನೆಯ ಶಿವಶರಣರು.. ಎಲ್ಲಾ ಜಾನಪದ ಪರಂಪರೆಗಳನ್ನು ನಿರಾಕರಿಸಿದರು" ಎಂದು ಲೇಖಕರು ತೀರ್ಮಾನಿಸುತ್ತಾರೆ. ಶೈವರು ಅನ್ಯಧಾರೆಗಳ ಮೇಲೆ ಆಕ್ರಮಣ ಮಾಡಿದ್ದನ್ನು ಉದಾಹರಿಸಿ ತಮ್ಮ ತೀರ್ಮಾನವನ್ನು ಸಮರ್ಥಿಸಿಕೊಳ್ಳುತ್ತಾರೆ. ಆದರೆ ಶೈವ ಪ್ರಭುತ್ವಕ್ಕೂ ವಚನ ಚಳವಳಿಗೂ ಎತ್ತಣಿಂದೆತ್ತ ಸಂಬಂಧ? ಇನ್ನು ವಚನಕಾರರು ಇಷ್ಟಲಿಂಗ ಪ್ರತಿಪಾದನೆಯವರು ಎಂಬ ಅವರ ಆರೋಪವೂ ಅಸಮರ್ಥನೀಯ. ಅಲ್ಲಮಪ್ರಭು, ನುಲಿಯ ಚಂದಯ್ಯ ಮುಂತಾದವರು ಇಷ್ಟಲಿಂಗವನ್ನು ಕಟುವಾಗಿಯೇ ಟೀಕಿಸುತ್ತಾರೆ. ವಚನಕಾರರು ಪ್ರಧಾನ ಧಾರೆಯನ್ನೂ ಹಾಗೆಯೇ ಜಾನಪದ ಧಾರೆಯನ್ನೂ ಸಮಾನವಾಗಿ ನಿರಾಕರಿಸುತ್ತಾರೆ. ಲೇಖಕರ ಈ ಬಗೆಯ ತೀರ್ಮಾನಕ್ಕೆ 'ವಚನ ಸಾಹಿತ್ಯ ಅಂತಾರಾಷ್ಟ್ರೀಯ ಮನ್ನಣೆ, ಪ್ರಚಾರ ಗಳಿಸಿದ್ದೂ ಕಾರಣವಿರಬಹುದು' (ಪುಟ ೬೯). ಆದರೆ ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳು, ರಾಶಿಗಟ್ಟಲೆ ಗ್ರಂಥಗಳ ಪ್ರಕಟಣೆಗಳು ಒಂದು ವಿಚಾರಕ್ಕೆ ಮನ್ನಣೆ ದೊರೆತಿದೆ ಎಂಬುದಕ್ಕೆ ರುಜುವಾತಾಗುವುದಿಲ್ಲ. ವಚನಕಾರರ ವಿವೇಕ ಸಾಮಾಜಿಕ ಬದುಕಿನಲ್ಲಿ ವಾಸ್ತವಗೊಳ್ಳುವವರೆಗೂ ಅದಕ್ಕೆ ಮನ್ನಣೆ ದೊರೆತಿಲ್ಲವೆಂದೇ ನಾವು ಭಾವಿಸಬೇಕಾಗುತ್ತದೆ. ಇಂದು ಸಾಮಾಜಿಕ ಬದುಕಿನಲ್ಲಿ ಲೇಖಕರು ಯಾವ ವಿವೇಕವನ್ನು ವಾಸ್ತವಗೊಳಿಸಲು ಹೋರಾಡುತ್ತಿರುವರೋ ಅಂಥದೇ ಹೋರಾಟದಲ್ಲಿ ವಚನಕಾರರೂ ತೊಡಗಿದ್ದರು.

ಕೊನೆಯದಾಗಿ, 'ಕನ್ನಡ ಸಂಶೋಧನೆ'ಯ ಇಂದಿನ ಸ್ಥಿತಿಗತಿ ಮುಂದಿನ ಸವಾಲುಗಳ ಕುರಿತಾದ ಅವರ ಸುದೀರ್ಘ ಪ್ರಬಂಧ ಪ್ರತಿಯೊಬ್ಬ ಸಂಶೋಧನಾ ವಿದ್ಯಾರ್ಥಿಗೂ ಒಂದು ಕೈಪಿಡಿಯಂತಿದೆ. ಒಟ್ಟಿನಲ್ಲಿ ಈ ಕೃತಿ ಇಂದಿನ ಗೊಂದಲಮಯ ಸಾಮಾಜಿಕ ಸಂದರ್ಭದಲ್ಲಿ ನಮ್ಮ ವೈಚಾರಿಕ ದೃಷ್ಟಿಯನ್ನು ಇನ್ನಷ್ಟು ಹರಿತಗೊಳಿಸಬಲ್ಲ, ಸಂಶೋಧಕರಿಗೆ ಮಾರ್ಗದರ್ಶಕವಾಗಬಲ್ಲ ಒಳ್ಳೆಯ ಕೃತಿಯಾಗಿದೆ.

**–ಟಿ.ಎನ್. ವಾಸುದೇವಮೂರ್ತಿ**

ಪು: **ಏಕತಾರಿ (ಸಣ್ಣ ಕಥೆಗಳು)** ಲೇ: **ಚನ್ನಪ್ಪ ಕಟ್ಟಿ ಪ್ರ: ಪಲ್ಲವ ಪ್ರಕಾಶನ** ಚನ್ನಪಟ್ಟಣ (೯೪೮೦೩೫೩೫೦೭) ಪು: ೧೩೦ ಬೆ: **ರೂ. ೧೨೦/-**

### ಸಮುದಾಯದ ಕತೆಗಳು




**ವೈ**ಚಾರಿಕ ನಿಲುವಿಗೆ ಬದ್ಧವಾದ ಆಧುನಿಕ ವಿದ್ಯೆ ಸಮುದಾಯದ ಬದುಕನ್ನು ಮುಕ್ತವಾಗಿ ನೋಡಲು ಹಿಂಜರಿಯುತ್ತದೆ. ಸಮುದಾಯದ ನಂಬಿಕೆ ಮತ್ತು ಶ್ರದ್ಧೆಗಳನ್ನು ಸಂದೇಹದಿಂದಲೇ ನೋಡುತ್ತದೆ. ಸಾಂಸ್ಕೃತಿಕ ವೈವಿಧ್ಯವನ್ನು ಗೌರವಿಸುತ್ತಲೇ ಸಾಂಸ್ಕೃತಿಕ ಆಚರಣೆಗಳನ್ನು ಒಲ್ಲದ ಮನಸ್ಸಿನಿಂದಲೇ ಗಮನಿಸಲು ಹವಣಿಸುತ್ತದೆ. ಹಾಗೆಂದು ಅನುಮಾನಗಳನ್ನು ದೂರವಿರಿಸಿದರೆ ನಂಬಿಕೆಯ ಜೊತೆಯಲ್ಲಿಯೇ ಇರುವ ಮೂಢನಂಬಿಕೆಗಳನ್ನು ಮರೆಸಬೇಕಾಗುತ್ತದೆ. ಈ ತಾಕಲಾಟದಲ್ಲಿರುವ ಮನಸ್ಸು ಸಮುದಾಯವನ್ನು ಮುಕ್ತವಾಗಿ ನೋಡಲು ಸಾಧ್ಯವಾಗದೆ, ಪಾರಂಪರಿಕ ನಂಬಿಕೆಗಳಲ್ಲಿರುವ ಒಳ್ಳೆಯತನ,

ಜೀವ-ಜೀವಗಳನ್ನು ಬೆಸೆಯಬಲ್ಲ ಹೃದಯವಂತಿಕೆಯನ್ನು ಗಮನಿಸದೆ ಹೋಗುವ ಅಪಾಯವೂ ಇರುತ್ತದೆ. ಕವಿ, ಕತೆಗಾರ ಚನ್ನಪ್ಪ ಕಟ್ಟಿ ಅವರು ಇಂಥ ಅಪಾಯದಿಂದ ಪಾರಾಗಿರುವುದನ್ನು ಅವರ ಹೊಸ ಕಥಾಸಂಕಲನ **'ಏಕತಾರಿ'** ತೋರಿಸುತ್ತದೆ.

ಚನ್ನಪ್ಪ ಕಟ್ಟಿ ಗ್ರಾಮೀಣ ಬದುಕಿನಿಂದ ದೂರವಾದವರಲ್ಲ. ಹುಟ್ಟಿಬೆಳೆದ, ಬದುಕನ್ನು ಕಟ್ಟಿಕೊಂಡ ಸಮುದಾಯದ ಜೊತೆಯಲ್ಲಿಯೇ ಇದ್ದು ಅದರ ಉಸಿರಿನ ಲಯವನ್ನು ಬಲ್ಲವರು. ತನ್ನ ಸಮುದಾಯದ ನಂಬಿಕೆ, ಶ್ರದ್ಧೆಗಳನ್ನು ಅರಿತವರು. ಒಳಗಿದ್ದುಕೊಂಡು, ಗೌರವವಿಟ್ಟುಕೊಂಡೂ, ಸಾಪೇಕ್ಷ ದೂರವನ್ನು ಉಳಿಸಿಕೊಂಡವರು. ತಳಮಟ್ಟ ಹೋಗಿ ಅಲ್ಲಿನ ಸಾರವನ್ನು, ಸೊಗಸನ್ನು, ಜೀವನ ಪ್ರೀತಿಯನ್ನು ಶೋಧಿಸಬಲ್ಲವರು. ಇವರ ಕತೆಗಳಲ್ಲಿ ಭಾಷೆ ಎನ್ನುವುದು ಕೇವಲ ಪ್ರಾದೇಶಿಕ ಕಸುವು, ಸೊಗಡು, ಸೊಗಸನ್ನು ಮೆರೆಸುವ ಅಲಂಕಾರವಲ್ಲ. ಅದು ಅಲ್ಲಿನ ಲಯ ವಿನ್ಯಾಸಗಳನ್ನು, ಭಾವ ಪಲ್ಲಟಗಳನ್ನು, ಜೀವಂತ ವ್ಯಕ್ತಿಗಳ ನಾಡಿಮಿಡಿತವನ್ನು ಹಿಡಿಯಬಲ್ಲ ಸಾಧನ ಸೌಲಭ್ಯ. ಇಲ್ಲಿನ ಕತೆಗಳಲ್ಲಿ ಸಮುದಾಯದ ಬದುಕು ಮೈಮುರಿದು ಮೇಲೇಳುವುದನ್ನು ನೋಡಬಹುದಾಗಿದೆ. ಗ್ರಾಮೀಣ ಬದುಕಿನಲ್ಲಿ ಇನ್ನೂ ಉಸಿರು ಹಿಡಿದುಕೊಂಡಿರುವ ಜೀವಪೋಷಕ ಧಾತುಗಳೂ ಇಲ್ಲಿ ಮುಖತೋರುತ್ತವೆ. ಮತ್ತೆಮತ್ತೆ ಕಾಯಕಕ್ಕೆ, ವ್ಯಕ್ತಿಯ ಘನತೆಗೆ, ನೆಲದ ನಿಜ ಸಂಬಂಧಕ್ಕೆ ತುಡಿಯುವ ಆಶಯವೂ ಇಲ್ಲಿ ಕಾಣುವುದು (**ರತ್ನಾಗಿರಿ ಎಂಬ ಮಾಯೆ, ರಾಯಪ್ಪನ ಬಾಡಿಗೆ ಸಾಯಿಕಲ್ಲು** ಇತ್ಯಾದಿ) ಕಟ್ಟಿಯವರ ತಾತ್ವಿಕ ನಿಲುವನ್ನು ತೋರುತ್ತದೆ. ನೆಲದಿಂದ ದೂರವಾಗುತ್ತಿರುವ ವಿದ್ಯಾವಂತರ ಸಮಸ್ಯೆಯ ಮೂಲವಿರುವುದೆಲ್ಲಿ ಎಂಬುದರ ಹುಡುಕಾಟವೂ ಇಲ್ಲಿ ಸೂಚ್ಯವಾಗಿ ಕ್ರಿಯಾಶೀಲವಾಗಿದೆ. ದ್ವೇಷದ ಜಾಗದಲ್ಲಿ ಪ್ರೀತಿಯ ಬೀಜವನ್ನು ನೆಟ್ಟು ಬದುಕನ್ನು ಹೇಗೆ ಸಹನೀಯ ಮಾಡಬಹುದು (**ಹೊಸ್ತಿಲೊಳಗಣ ಹುತ್ತ**) ಎನ್ನುವುದನ್ನು ಕಟ್ಟಿ ಕಲಾವಿದರಾಗಿಯೇ ಸಮರ್ಥವಾಗಿ ನಿರ್ವಹಿಸುತ್ತಾರೆ.

ಉಡಿಯಲ್ಲಿ ಚೆಮ್ಮಾವುಗೆ ಕಟ್ಟಿಕೊಂಡು, ಡೊಳ್ಳಿನ ವಾಲಗದೊಂದಿಗೆ ಬರಿಗಾಲಲ್ಲಿ ನಡೆದು ಗುಡಿಯ ಕಂಬಕ್ಕೆ ಚೆಮ್ಮಾವುಗೆ ಕಟ್ಟಿ ಬರುವ ರೆಬಕಾಯಿಯ ವಾಡಿಕೆ ಒಂದು ಕಡೆ; ಬ್ಯಾಂಡ್ ಕಂಪನಿಯ ಮೆರವಣಿಗೆಯೊಂದಿಗೆ, ಪ್ಯಾಟೆಯಿಂದ ತಂದ ಮಿರಮಿರ ಮಿಂಚುವ ಚಪ್ಪಲಿಗಳನ್ನು ಟ್ರ್ಯಾಕ್ಟರಿನ ಮೇಲೆ ಇಟ್ಟು ಮೆರವಣಿಗೆಯಲ್ಲಿ ಸಾಗುವ ರೆಬಕಾಯಿ ಮಗ ಅರುಣಕುಮಾರ ಇನ್ನೊಂದು ಕಡೆ. ಒಂದು ಸಾಂಪ್ರದಾಯಿಕ, ಇನ್ನೊಂದು ಆಧುನಿಕ. ಇವುಗಳ ಮುಖಾಮುಖಿಯಲ್ಲಿ ನಿಜವಾದ ಜೀವಸೆಲೆ ಎಲ್ಲಿದೆ ಎನ್ನುವುದನ್ನು ತೋರಿಸುವ, ಅತ್ಯಂತ ಸೂಕ್ಷ್ಮವಾದ, ಹಾಗೆಯೇ ಬಹುದೊಡ್ಡ ಸವಾಲಿನ ಕತೆಯೇ-**ಸುಖದ ನಾದ ಹೊರಡಿಸುವ ಕೊಳಲು**. ಒಂದಿಷ್ಟು ಎಚ್ಚರ ತಪ್ಪಿದರೆ ಜಾತಿಪದ್ಧತಿಯ ಸಮರ್ಥನೆಯಾಗುವ ಈ ಕತೆಯನ್ನು ಚನ್ನಪ್ಪ ಎಷ್ಟೊಂದು ಸಮರ್ಥವಾಗಿ, ಕಲಾತ್ಮಕವಾಗಿ ನಿರ್ವಹಿಸಿದ್ದಾರೆ!

ಈ ಸಂಕಲನದಲ್ಲಿ ಇನ್ನೊಂದು ಅಪರೂಪದ **'ಅಟ್ಟ'** ಕತೆ ಪುಟ್ಟ ಬಾಲಕನೊಬ್ಬನ ಮೂಲಕ ಹೊರಜಗತ್ತನ್ನು ಹಿರಿಯರ ಪ್ರಪಂಚವನ್ನು, ವಿಭಿನ್ನ ವಿದ್ಯಮಾನಗಳನ್ನು ನೋಡಲು ಹವಣಿಸುತ್ತದೆ. ಇಂಥ ಕತೆಗಳು ಕನ್ನಡದಲ್ಲಿ ಸಾಕಷ್ಟಿವೆ. ಕೃಷ್ಣ ಆಲನಹಳ್ಳಿಯವರ 'ಕಾಡು', ಕೆ.ಸದಾಶಿವ ಅವರ 'ರಾಮನ ಸವಾರಿ ಸಂತೆಗೆ ಹೋದದ್ದು', ಲಂಕೇಶರ 'ಉಮಾಪತಿಯ ಸ್ಕಾಲರ್‌ಷಿಪ್ ಯಾತ್ರೆ' ಹೀಗೆ ಉದಾಹರಣೆಗಳನ್ನು ಕೊಡುತ್ತ ಹೋಗಬಹುದು. ಈ ಕತೆಯ ಕೊನೆಯಲ್ಲಿ ಚಿತ್ರಿತವಾಗಿರುವ ರೂಪಕವೊಂದು ಅತ್ಯಂತ ಸಮರ್ಥವಾಗಿ ಕತೆಯ ಧ್ವನಿಯನ್ನು ಹಿಗ್ಗಿಸಿಬಿಡುತ್ತದೆ.

ತನ್ನ ನೆಲದ ಮಣ್ಣನ್ನೇ ಕುಂಬಾರ ನಾದಿನಾದಿ ತನಗೆ ಬೇಕಾದ ಆಕಾರಕ್ಕೆ ತಿರುಗಿಸುವ ಕಲಾವಿದನಂತೆ ಚನ್ನಪ್ಪ ಕಟ್ಟಿ ತನ್ನ ಸುತ್ತಲಿನ ಬದುಕಿನಿಂದ, ತನ್ನ ಸಮುದಾಯದ ಜನರಿಂದ ಎಲ್ಲವನ್ನೂ ಎತ್ತಿಕೊಂಡು, ತಮಗೆ ಬೇಕಾದ ರೀತಿಯಲ್ಲಿ ಕಲಾಕೃತಿಯನ್ನು ನಿರ್ಮಿಸಬಲ್ಲ ಶಕ್ತಿಯನ್ನು ಪಡೆದಿದ್ದಾರೆ. ಅವರು ಕಟ್ಟಿಕೊಡುವ ರೂಪಕಗಳು ಸರಳ, ಸ್ಥಳೀಯ ಮತ್ತು ಅತ್ಯಂತ ಪರಿಣಾಮಕಾರಿಯಾದವು. **'ಅಟ್ಟ'** ಕತೆಯಲ್ಲಿ ಬರುವ ಬಸರೀಮರ, ಕಾಗೆ, ಗೂಡು, ಮೊಟ್ಟೆ ಮರಿ, ಬತ್ತೀರಪ್ಪನ ಗುಡ್ಡ, ಹಾಗೆಯೇ **'ಹೊಸ್ತಿಲೊಳಗಣ ಹುತ್ತ'** ಕತೆಯಲಿನ ಮಣ್ಣಿನ ಹೆಂಟೆ(ಮೂಗು, ಕಿವಿ, ಬಾಯಿ, ಹಣೆ ಮೂಡಿ ತನ್ನನ್ನು ಅಣಕಿಸುವ ರುಂಡವೊಂದು ಕುಳಿತಂತೆ ತೋರುವ ಮಣ್ಣಿನ ಹೆಂಟೆ ತನ್ನ ವೈರಿ ಪರಪ್ಪನಾಗಿ ಕಾಣುವ) ಇವೆಲ್ಲ ಪರಿಣಾಮಕಾರೀ ರೂಪಕಗಳಾಗುವುದು ಚನ್ನಪ್ಪನವರ ಕಲೆಗಾರಿಕೆ, ಚಿತ್ರಕಶಕ್ತಿ ಮತ್ತು ಪ್ರತಿಭೆಗೆ ಹಿಡಿದ ಕನ್ನಡಿಗಳಾಗಿವೆ. ಇದೇ ಕತೆಯಲ್ಲಿ ಬರುವ ಮುಶೀ, ಅದಕ್ಕೆ ತಂಬಾಕು ತುಂಬುವುದು, ವಲ್ಲಿಯನ್ನು ಫಿಲ್ಟರ್ ಮಾಡಿಕೊಂಡು ಜರುಕಿ ಎಳೆಯುತ್ತ ಬ್ರಹ್ಮಾನಂದ ಅನುಭವಿಸುವುದು-ಇದೆಲ್ಲವನ್ನೂ ಒಂದು ಧಾರ್ಮಿಕ ಆಚರಣೆಯಂತೆ ಜೀವಂತವಾಗಿ ಚಿತ್ರಿತವಾಗಿರುವುದು ಪ್ರತಿಭಾಪೂರ್ಣವಾಗಿದೆ.

ಈ ಸಂಕಲನಕ್ಕೆ ತೀರ ಅಪವಾದ ಎನ್ನಿಸುವಂತಿರುವ **'ಊರ್ಧ್ವರೇತ'** ಕತೆಯ ನಡೆಯಾಗಲಿ, ಗೊತ್ತುಗುರಿಯಾಗಲಿ ನನ್ನಂಥವನ ತಿಳುವಿಗೆ, ಗ್ರಹಿಕೆಗೆ ಎಟುಕುವುದಿಲ್ಲ.

**-ಜೆ.ಪಿ. ಬಸವರಾಜು.**

**ಪು: ಈಗ ಭಾರತ ಮಾತಾಡುತ್ತಿದೆ ಲೇ: ದೇವನೂರ ಮಹಾದೇವ ಪ್ರ: ಅಭಿರುಚಿ, ಮೈಸೂರು (೯೮೮೦೫೬೦೦೧೫) ಪು: ೫೬ ಬೆಲೆ: ರೂ. ೫೦/-**

## ಎಲ್ಲರ ಜೇಬುಗಳಲ್ಲಿರಬೇಕಾದ ಪುಸ್ತಕ




**ಇ**ತ್ತೀಚೆಗೆ ಭಾರತೀಯ ಸಂವಿಧಾನವನ್ನು ನಂಬಿಕೊಂಡಿರುವವರು ಮತ್ತು ಸರಕಾರದ ಪೌರತ್ವನೀತಿಗಳಿಂದ ತಮ್ಮ ನೆಲೆಯನ್ನು ಕಳೆದುಕೊಳ್ಳುವ ಭೀತಿಯಲ್ಲಿರುವ ಜನಾಂಗಗಳು ದೊಡ್ಡ ಪ್ರಮಾಣದಲ್ಲಿ ಭಾರತದ ಉದ್ದಕ್ಕೂ ಪ್ರತಿಭಟನೆ ಮಾಡುತ್ತಿದ್ದಾರೆ. ಅಧಿಕಾರದಲ್ಲಿರುವ ಸರಕಾರವು, ತನ್ನ ಪಕ್ಷ ಹಾಗೂ ಸಂಘಟನೆಗಳ ಬೆಂಬಲದೊಂದಿಗೆ ಪ್ರತಿಭಟಿಸುತ್ತಿರುವವರನ್ನು ಅತ್ಯಂತ ಬರ್ಬರವಾಗಿ ಹತ್ತಿಕ್ಕುತ್ತಿದೆ. ಸಂವಿಧಾನ ಹಾಗೂ ವ್ಯಕ್ತಿ ಸ್ವಾತಂತ್ರ್ಯಗಳಿಗಾಗಿ ಹೋರಾಟ ಮಾಡಬೇಕಾದವರು ಮೌನವಾಗಿದ್ದಾರೆ. ಅಷ್ಟು ಮಾತ್ರವಲ್ಲ ಅನೇಕರು ಪ್ರಭುತ್ವದ ಬೆಂಬಲಕ್ಕೆ ನಿಂತಿದ್ದಾರೆ. ಇಂಥ ಸನ್ನಿವೇಶದಲ್ಲಿ ನಮ್ಮ ಮಧ್ಯೆ ಅವಶ್ಯಕತೆಯಿದ್ದಾಗ ಮಾತ್ರ ಮಾತನಾಡಿ ತಮ್ಮ ಮಾತುಗಳ ಮೌಲ್ಯವನ್ನು ಉಳಿಸಿಕೊಂಡಿರುವ ದೇವನೂರ ಮಹಾದೇವರು ಈ ಬಗ್ಗೆ ನಿರಂತರವಾಗಿ ಮಾತನಾಡುತ್ತಾ, ಬರೆಯುತ್ತಾ ಪ್ರತಿಭಟನೆಗಳಲ್ಲಿ ಭಾಗಿಯಾಗುತ್ತಾ ಕ್ರಿಯಾಶೀಲರಾಗಿದ್ದಾರೆ. 'ಈಗ ಭಾರತ ಮಾತಾಡುತ್ತಿದೆ' ಎನ್ನುವ ಈ ಸಣ್ಣ ಹೊತ್ತಿಗೆಯಲ್ಲಿ ಪೌರತ್ವ ಕಾಯಿದೆಗಳ ಕುರಿತು ಬರೆದಿರುವ ಟಿಪ್ಪಣಿಗಳು, ಲೇಖನಗಳು ಸಂಕಲಿತವಾಗಿವೆ. ಹೊತ್ತಿಗೆಗೆ ಪೀಠಿಕೆಯಾಗಿ ರಹಮತ್ ತರೀಕೆರೆ ಅವರು ಸಂವಿಧಾನದ ಪೀಠಿಕೆಯ ಬಗ್ಗೆ ಬರೆದ ಮೆಲುದನಿಯ ಲೇಖನದಲ್ಲಿ, ಅದರಲ್ಲಿ ಅಡಕವಾದ ಮೌಲ್ಯಗಳನ್ನು ಇಂದು ಅಧಿಕಾರದಲ್ಲಿರುವ ಶಕ್ತಿಗಳು ದುರ್ಬಲಗೊಳಿಸುತ್ತಿರುವುದರ ಬಗ್ಗೆ ಎಚ್ಚರಿಕೆಯ ಮಾತುಗಳನ್ನು ಹೇಳಿದ್ದಾರೆ.

ಎಂದಿನಂತೆ ಮಹಾದೇವ ಅವರು ಧ್ವನಿಪೂರ್ಣವಾದ ರೂಪಕಗಳನ್ನು, ನಾಣ್ಣುಡಿಗಳನ್ನು ಸೂಕ್ತವಾಗಿ ಬಳಸಿಕೊಳ್ಳುತ್ತಾ ಸಂವಿಧಾನ ವಿರೋಧಿ ಶಕ್ತಿಗಳ ಬಗ್ಗೆ ಕಟುವಾಗಿಯೇ ವಿಮರ್ಶೆ ಮಾಡಿದ್ದಾರೆ. ಮೋದಿಯವರನ್ನು 'ಸಿಲ್ಲಿ ಲಲ್ಲಿ'ಗೆ ಹೋಲಿಸಿ ಅವರು ಜನರ ನಂಬುಗೆಗೆ ಮಾಡಿರುವ ಮೋಸವನ್ನು ವಿವರಿಸುತ್ತಾರೆ. ಪೌರತ್ವ ತಿದ್ದುಪಡಿ ಕಾಯ್ದೆ ಇತ್ಯಾದಿಗಳಿಂದ "ಮತ್ತಷ್ಟು ಆರ್ಥಿಕ ಕುಸಿತ, ಮತ್ತಷ್ಟು ಉದ್ಯೋಗ ನಾಶ, ಮತ್ತಷ್ಟು ಬೆಲೆ ಏರಿಕೆ...... ಗುಂಪು ಥಳಿತ ಇತ್ಯಾದಿ, ಇತ್ಯಾದಿ ನರಕಕ್ಕೆ ನಮ್ಮನ್ನು ಕರೆದೊಯ್ಯುತ್ತವೆ". ಇದು ಆಗಬಾರದೆಂದರೆ ಮೋದಿಯವರು ಹದ್ದಾಗುವ ಬದಲು ಹಂಸವಾಗಬೇಕೆಂದು ಮಹಾದೇವ ಸಲಹೆ ಕೊಡುತ್ತಾರೆ. ಈ ಲೇಖನಗಳಲ್ಲಿ ಬಹುತೇಕ ವಾದಗಳು, ಅಂಕಿ ಸಂಖ್ಯೆಗಳು ಈಗಾಗಲೇ ಸುಪರಿಚಿತವಾಗಿಬಿಟ್ಟಿವೆ. ಮಹಾದೇವರ ವಿಶಿಷ್ಟತೆಯೆಂದರೆ ನಮ್ಮೆದುರಿಗಿರುವ ಸಂವಿಧಾನಾತ್ಮಕ, ಸಾಂಸ್ಕೃತಿಕ, ರಾಜಕೀಯ ಅಪಾಯಗಳ ಬಗ್ಗೆ ಎಚ್ಚರವಾಗಿದ್ದುಕೊಂಡೇ ಈ ಕಾಯಿದೆಗಳ ವಿರುದ್ಧದ ಪ್ರತಿಭಟನೆಗಳು ಹುಟ್ಟುಹಾಕಿರುವ ಕ್ರಿಯಾಶೀಲತೆ, ಸಾಮುದಾಯಿಕ ಪ್ರಜ್ಞೆ, ಮಹಿಳೆಯರ ಅಪಾರ ತಿಳುವಳಿಕೆ ಹಾಗೂ ಧೈರ್ಯಗಳ ಬಗ್ಗೆ ತುಂಬಾ ಆಶಾವಾದಿಯಾಗಿದ್ದಾರೆ. ಹೀಗಾಗಿ '೯೯% ಭಾರತೀಯರು V/s ೧% ಕೋಮುವಾದಿಗಳು' ಎಂಬ ಲೇಖನದಲ್ಲಿ ಈ % ಲೆಕ್ಕವನ್ನು ಒಪ್ಪಿಕೊಂಡಂತಿದೆ. ಆದರೆ ಇದೇ ಲೇಖನದಲ್ಲಿ ಅಂಬೇಡ್ಕರ್ ಅವರು ಅಭಿವ್ಯಕ್ತಿಸಿದ "ಭಾರತೀಯರಿಗೆ ತಮ್ಮ ದೇಶಕ್ಕಿಂತ ತಮ್ಮ ಮತಧರ್ಮಗಳೇ ಹೆಚ್ಚು ಮುಖ್ಯವಾಗುತ್ತದೋ?" ಎಂಬ ಪ್ರಶ್ನೆ ಕೇಳುತ್ತಾ, ಹೀಗಾಗಿ ಬಿಟ್ಟರೆ "ನಮ್ಮ ಸ್ವಾತಂತ್ರ್ಯಕ್ಕೆ ಎರಡನೇ ಬಾರಿ ಗಂಡಾಂತರ ಬಂದಂತೆ" ಎಂದು ಆತಂಕವು ಈ ಆಶಾವಾದವನ್ನು ಪ್ರಶ್ನಿಸುತ್ತದೆ. ವಿಶೇಷವಾಗಿ ವಿದ್ಯಾರ್ಥಿಗಳಲ್ಲಿ ಹಾಗೂ ಮಹಿಳೆಯರಲ್ಲಿ ಉಕ್ಕಿ ಬಂದಿರುವ ಯುಗದ ಉತ್ಸಾಹ ಮತ್ತು ಕ್ರಮೇಣವಾಗಿ ಸ್ವಾತಂತ್ರ್ಯ, ಪ್ರಜಾಪ್ರಭುತ್ವಗಳನ್ನು ಕಳೆದುಕೊಳ್ಳುತ್ತಿರುವ ವಿಷಾದಗಳ ಮಧ್ಯ ಭಾರತವು ಈಗ ತೂಗುತ್ತಿದೆ. ವೈಯಕ್ತಿಕವಾಗಿ ನನಗೆ ಈ ೯೯% ಭಾರತೀಯರು" ಲೆಕ್ಕಾಚಾರದಲ್ಲಿ ನಂಬಿಕೆ ಇಲ್ಲ.

ಈ ಲೇಖನಗಳಲ್ಲಿ ಬ್ಯಾಂಕ್‌ಗಳ ಕುಸಿತ, ಹಿಂಸೆ ಇವುಗಳ ಬಗ್ಗೆಯೂ ಮಹಾದೇವ ಅವರ ಟಿಪ್ಪಣಿಗಳಿವೆ. ಸ್ಥೂಲವಾಗಿ ಹೇಳುವುದಾದರೆ ನಮ್ಮ ಸಾಮಾಜಿಕ ನೈತಿಕ ಪ್ರಜ್ಞೆಯಾಗಿರುವ ಬಹು ಮುಖ್ಯ ಲೇಖಕರು ನಮ್ಮ ದಿನನಿತ್ಯದ ಸರಳ ಆದರೆ ಅಪಾಯಕಾರಿಯಾದ ವಿದ್ಯಮಾನಗಳ ಬಗ್ಗೆ ಆಪ್ತವಾಗಿ ಬರೆದಿರುವ ಪುಸ್ತಕವಿದಾಗಿದ್ದು ಇದು ನಮ್ಮೆಲ್ಲರ ಜೇಬುಗಳಲ್ಲಿ ಜಾಗ ಪಡೆದು ಒಬ್ಬರೇ ಸಮಾಧಾನವಾಗಿ, ಸಹಮನಸ್ಕರು ಸಿಕ್ಕರೆ ಜೊತೆಯಾಗಿ ಓದುವುದು ನಮ್ಮೆಲ್ಲರ ಆರೋಗ್ಯಕ್ಕೆ ಒಳ್ಳೆಯದು.

**-ರಾಜೇಂದ್ರ ಚೆನ್ನಿ**

ಹೊಸ ಮನುಷ್ಯ' ಓದುಗರೆಲ್ಲರಿಗೂ
'ಗುಡ್ ಫ್ರೈಡೇ ಶುಭಾಶಯಗಳು



**ಎಸ್. ಜಿ. ಸುರೇಶ**
ಮತ್ತು ಕುಟುಂಬ
ಬೆಂಗಳೂರು

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಮಹಾವೀರ ಜಯಂತಿ ಶುಭಾಶಯಗಳು



**ಪ್ರೊ. ಎಂ. ಚಂದ್ರಶೇಖರಯ್ಯ**
**ಮತ್ತು ಕುಟುಂಬ**
**ಭದ್ರಾವತಿ**

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಬಸವ ಜಯಂತಿ ಶುಭಾಶಯಗಳು



**ಎಂ. ಚಂದ್ರಶೇಖರ್ ಪ್ರತಿಷ್ಠಾನ**

# ೭೨, 'ಸರ್ವೋದಯ', ಪ್ರೊ.ಎ.ಆರ್. ಕೃಷ್ಣಶಾಸ್ತ್ರಿ ರಸ್ತೆ
ಬಸವನಗುಡಿ, ಬೆಂಗಳೂರು-೫೬೦೦೦೪

ತಿಂಗಳ ಕೊನೆಯ ಸಾಲುಗಳು



ಪರಿಸರ ಸಂರಕ್ಷಣೆ ಕೇವಲ ಅಂಕಿ-ಸಂಖ್ಯೆಗಳ, ವಾದ-ವಿವಾದಗಳ ವಸ್ತುವಲ್ಲ. ಅದೊಂದು ಜೀವಂತ ಆತ್ಮೀಯ ಸಂಗಾತಿ.

-ಕೆ. ಪಿ. ಪೂರ್ಣಚಂದ್ರ ತೇಜಸ್ವಿ

**ಶುಭಾಶಯಗಳೊಂದಿಗೆ**

ಶ್ರೀಮತಿ ರಾಜೇಶ್ವರಿ ತೇಜಸ್ವಿ
ಮತ್ತು ಕುಟುಂಬ
ಮೂಡಿಗೆರೆ

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper RNI No. KARKAN/2012/47568**
**Rgd No. KA/SK/SMG-1209/2019-21**

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204( Karnataka)